ಶುಕ್ರವಾರ, ಡಿಸೆಂಬರ್ 5, 2025 | ₹ 7.00

ಪ್ರಜಾ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪ

ಸ್ಟಾರ್ಕ್‌ಗೆ 6 ವಿಕೆಟ್ ಗೊಂಚಲು

ಆಸ್ಟ್ರೇಲಿಯಾ ತಂಡದ ಮಿಚೆಲ್ ಸ್ಟಾರ್ಕ್ ಅವರು ಗುರುವಾರ ಆರಂಭವಾದ ಇಂಗ್ಲೆಂಡ್ ಎದುರಿನ ಆ್ಯಷಸ್ ಸರಣಿಯ ಎರಡನೇ ಟೆಸ್ಟ್ ಪಂದ್ಯದಲ್ಲಿ 6 ವಿಕೆಟ್ ಗೊಂಚಲು ಪಡೆದರು

99 'ಇಂಡಿಗೊ' ಸಂಚಾರ ಸ್ಥಗಿತ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಎರಡನೇ ದಿನವಾದ ಗುರುವಾರವೂ 99 ಇಂಡಿಗೊ ವಿಮಾನಗಳ ಹಾರಾಟ ರದ್ದಾಗಿದೆ. ತಾವು ಪ್ರಯಾಣಿಸಬೇಕಿರುವ ವಿಮಾನಗಳ ಹಾರಾಟ ಸಮಯದ ಮಾಹಿತಿ ಪಡೆಯಲು ಸಹಾಯ ಕೇಂದ್ರಗಳಿಗೆ ಪ್ರಯಾಣಿಕರು ದಾಂಗುಡಿ ಇಟ್ಟರು. ಇದರಿಂದಾಗಿ ಭಾರಿ ಜನಸಂದಣಿ ಕಂಡು ಬಂದಿತು. ಕಳೆದೆರಡು ದಿನಗಳಲ್ಲಿ ದೇಶದಾದ್ಯಂತ ಇಂಡಿಗೊ ಸಂಸ್ಥೆಯ 300 ವಿಮಾನಗಳ ಸಂಚಾರ ಸ್ಥಗಿತಗೊಂಡಿದೆ.

ವಿಮಾನಗಳ ಸಂಚಾರ ರದ್ದಾಗಿರುವ ಬಗ್ಗೆ ಸಂಸ್ಥೆಯು ಪ್ರಯಾಣಿಕರಿಗೆ ಮುಂಚಿತವಾಗಿಯೇ ಮಾಹಿತಿ ನೀಡಿರಲಿಲ್ಲ. ಪ್ರಯಾಣಿಕರು ಮೂರು ಗಂಟೆ ಮುಂಚಿತವಾಗಿಯೇ ಬಂದಿದ್ದರು. ಆದರೆ, ವಿಮಾನಗಳ ಹಾರಾಟ ರದ್ದಾಗಿದೆ ಎಂಬ ಮಾಹಿತಿ ತಿಳಿದು ಸಿಬ್ಬಂದಿಯನ್ನು ತರಾಟೆಗೆ ತೆಗೆದುಕೊಂಡರು. ಇದರಿಂದ ಸಿಬ್ಬಂದಿ ಮತ್ತು ಪ್ರಯಾಣಿಕರ ಮಧ್ಯೆ ವಾಗ್ವಾದ ನಡೆಯಿತು.

ಗುರುವಾರ ಒಂದೇ ದಿನ ದೇಶದ ವಿವಿಧ ಭಾಗಗಳಿಗೆ ತೆರಳಬೇಕಿದ್ದ 45 ಮತ್ತು ವಿವಿಧ ಭಾಗಗಳಿಂದ ಇಲ್ಲಿಗೆ ಬರಬೇಕಿದ್ದ 54 ವಿಮಾನಗಳ ಸಂಚಾರ ರದ್ದಾಗಿದೆ ಎಂದು ಮೂಲಗಳು ತಿಳಿಸಿವೆ.

ವಿಮಾನಯಾನ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುವ ಪೈಲಟ್‌ಗಳು, ಗ್ರೌಂಡ್ ಸಿಬ್ಬಂದಿ, ಗಗನಸಖಿಯರು ಇಂತಿಷ್ಟೇ ಅವಧಿ ಕೆಲಸ ಮಾಡಬೇಕು ಎಂಬ ಹೊಸ ನಿಯಮ ಡಿಸೆಂಬರ್ 1ರಿಂದ ಜಾರಿಗೆ ಬಂದಿದೆ. ಇದರಿಂದಾಗಿ ಇಂಡಿಗೊ ವಿಮಾನಯಾನ ಸಂಸ್ಥೆಯಲ್ಲಿ ಭಾರಿ ಪ್ರಮಾಣದ ಸಿಬ್ಬಂದಿ ಕೊರತೆ ಎದುರಾಗಿದೆ. ಇದೇ ಕಾರಣಕ್ಕೆ ವಿಮಾನಗಳ ಸಂಚಾರ ರದ್ದು ಅಥವಾ ಅನಿರ್ದಿಷ್ಟಾವಧಿವರೆಗೆ ವಿಳಂಬವಾಗುತ್ತಿವೆ ಎಂದು ತಿಳಿದು ಬಂದಿದೆ.

ಇನ್ನೊಂದು ಸುದ್ದಿ 6

ಮುಖ್ಯಾಂಶಗಳು

- ಇಂಡಿಗೊ ವಿಮಾನಗಳಲ್ಲಿ ನಿತ್ಯ 5 ಲಕ್ಷ ಪ್ರಯಾಣಿಕರ ಸಂಚಾರ
- ಪ್ರಯಾಣಿಕರು ಹೈರಾಣ

ಕಾರ್ಯಾಚರಣೆಯನ್ನು ಸಹಜಸ್ಥಿತಿಗೆ ತರುವುದು, ಸಮಯ ಪರಿಪಾಲನೆಯನ್ನು ಮತ್ತೆ ಹಳಿಗೆ ತರುವುದು ತಕ್ಷಣದ ಗುರಿಯಾಗಿದೆ

ಪೀಟರ್ ಎಲ್ಬರ್ಸ್, ಇಂಡಿಗೊ ಸಿಇಒ

ಇಂಡಿಗೊ ಏರ್‌ಲೈನ್ಸ್‌ನ ವಿಮಾನಗಳು ರದ್ದಾಗಿದ್ದರಿಂದ ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನೂರಾರು ಪ್ರಯಾಣಿಕರು ಟಿಕೆಟ್ ಕಿಯೊಸ್ಕ್ ಮುಂದೆ ಗುರುವಾರ ಸಾಲುಗಟ್ಟಿ ನಿಂತಿದ್ದರು–ಪಿಟಿಐ ಚಿತ್ರ

ಮದುವೆ ಮುಂದೂಡಿಕೆ

ಬೆಂಗಳೂರಿನ ವ್ಯಕ್ತಿಯೊಬ್ಬರ ವಿವಾಹ ಒಡಿಶಾದ ಭುವನೇಶ್ವರದಲ್ಲಿ ಶುಕ್ರವಾರ ನಿಗದಿಯಾಗಿತ್ತು. ಇಂಡಿಗೊ ವಿಮಾನಗಳ ಸಂಚಾರ ವ್ಯತ್ಯಯ ಮತ್ತು ರದ್ದತಿಯಿಂದಾಗಿ ಮದುವೆಯನ್ನೇ ಮುಂದೂಡುವ ಅನಿವಾರ್ಯ ಎದುರಾಗಿದೆ ಎಂದು ವ್ಯಕ್ತಿಯೊಬ್ಬರು ತಿಳಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿದ ವರನ ತಂದೆ ಮಹೇಶ್, 'ಭುವನೇಶ್ವದಲ್ಲಿ ಶುಕ್ರವಾರ ನಿಗದಿಯಾಗಿದ್ದ ನನ್ನ ಮಗನ ಮದುವೆಗೆ ತೆರಳಲು ಇಂಡಿಗೊ ವಿಮಾನದಲ್ಲಿ ಮುಂಗಡವಾಗಿ 110 ಟಿಕೆಟ್‌ಗಳನ್ನು ಕಾಯ್ದಿರಿಸಿದ್ದೆವು. ಆದರೆ, ಕಳೆದೆರಡು ದಿನಗಳಿಂದ ವಿಮಾನಗಳ ಸಂಚಾರ ವ್ಯತ್ಯಯ ಮತ್ತು ರದ್ದಾಗುತ್ತಿರುವ ಹಿನ್ನೆಲೆಯಲ್ಲಿ ಶುಕ್ರವಾರ ಸಂಚರಿಸಬೇಕಿರುವ ವಿಮಾನ ಸೇವೆ ಲಭ್ಯವಿರಲಿದೆಯೇ ಎಂಬುದನ್ನು ತಿಳಿದುಕೊಳ್ಳಲು ಬಂದಿದ್ದೆ. ಈ ಕುರಿತು ಸಿಬ್ಬಂದಿಯೊಂದಿಗೆ ಎರಡು ಗಂಟೆ ಚರ್ಚಿಸಿದ್ದೇನೆ. ಆದರೆ, ವಿಮಾನ ಸೇವೆ ಲಭ್ಯವಿರಲಿದೆ ಎಂಬ ಖಚಿತ ಮಾಹಿತಿ ಲಭ್ಯವಾಗಲಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ವಿಮಾನ ರದ್ದಾಗಿರುವುದರಿಂದ ಮದುವೆ ಮುಂದೂಡಬೇಕಾಗಿದೆ. ನಮಗಾಗಿ ವಧುವಿನ ಕಡೆಯವರು ಭುವನೇಶ್ವರದಲ್ಲಿ ಮದುವೆ ಸಿದ್ಧತೆ ಮಾಡಿಕೊಂಡಿದ್ದರು. ಅವರಿಗೆ ಏನು ಉತ್ತರ ಹೇಳಬೇಕೊ ಗೊತ್ತಾಗುತ್ತಿಲ್ಲ ಎಂದರು.

ವ್ಲಾದಿಮಿರ್ ಪುಟಿನ್ ಅವರನ್ನು ಪ್ರಧಾನಿ ಮೋದಿ ಅವರು ವಿಮಾನ ನಿಲ್ದಾಣದಲ್ಲಿ ಬರಮಾಡಿಕೊಂಡರು –ಎಪಿ ಚಿತ್ರ

ಪುಟಿನ್ ಸ್ವಾಗತಿಸಿದ ಮೋದಿ

ನವದೆಹಲಿ (ಪಿಟಿಐ/ ಎಎಫ್‌ಪಿ): ಭಾರತದ ಜತೆ ಸುಮಾರು ಎಂಟು ದಶಕಗಳಿಂದ ಕಾಯ್ದುಕೊಂಡು ಬಂದಿರುವ ದ್ವಿಪಕ್ಷೀಯ ಪಾಲುದಾರಿಕೆಯನ್ನು ಮತ್ತಷ್ಟು ಬಲಗೊಳಿಸುವುದಕ್ಕಾಗಿ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಗುರುವಾರ ದೆಹಲಿಗೆ ಬಂದಿಳಿದರು.

ರಷ್ಯಾದಿಂದ ತೈಲ ಖರೀದಿ ನಿಲ್ಲಿಸುವಂತೆ ಅಮೆರಿಕವು ಭಾರತದ ಮೇಲೆ ಭಾರಿ ಒತ್ತಡ ಹೇರಿರುವ ಸಂದರ್ಭದಲ್ಲೇ ಎರಡು ದಿನಗಳ ಈ ಭೇಟಿ ನಡೆಯುತ್ತಿದೆ. ಸಂಜೆ 6.30ಕ್ಕೆ ಇಲ್ಲಿನ ಪಾಲಂ ವಿಮಾನ ನಿಲ್ದಾಣಕ್ಕೆ ಬಂದಿಳಿದ ಪುಟಿನ್ ಅವರನ್ನು ಪ್ರಧಾನಿ ನರೇಂದ್ರ ಮೋದಿ ಆಲಿಂಗನದ ಮೂಲಕ ಆತ್ಮೀಯವಾಗಿ ಬರಮಾಡಿಕೊಂಡರು. ವಿಮಾನ ನಿಲ್ದಾಣದಿಂದ ಕಾರಿನಲ್ಲಿ ಇಬ್ಬರೂ ಜತೆಯಾಗಿ ತೆರಳಿದರು.

ಉಕ್ರೇನ್ ವಿರುದ್ಧ ಯುದ್ಧ ಆರಂಭವಾದ ಬಳಿಕ ಪುಟಿನ್ ಅವರು ಭಾರತಕ್ಕೆ ಭೇಟಿ ನೀಡಿರುವುದು ಇದೇ ಮೊದಲು. ಭಾರತ–ರಷ್ಯಾ 23ನೇ ಶೃಂಗಸಭೆಯ ಮಾತುಕತೆ ಶುಕ್ರವಾರ ನಡೆಯಲಿದ್ದು, ಹಲವು ಪ್ರಮುಖ ವಿಷಯಗಳ ಬಗ್ಗೆ ಚರ್ಚೆ ನಡೆಯಲಿದೆ.

10

ಅವರ ನಗು ಪ್ಲಸ್
ರಕ್ಷಣೆಯನ್ನು ಖಚಿತಪಡಿಸಿಕೊಳ್ಳುವುದು

ಪರಿಚಯಿಸಲಾಗುತ್ತಿದೆ
ಎಲ್‌ಐಸಿಯ ಪ್ರೊಟೆಕ್ಷನ್ ಪ್ಲಸ್

ಪ್ರಮುಖ ವೈಶಿಷ್ಟ್ಯಗಳು:
- ನಿಮ್ಮ ಅಗತ್ಯಗಳಿಗೆ ಅನುಗುಣವಾಗಿ ಇನ್ವೆಸ್ಟ್‌ಮೆಂಟ್ ಫಂಡ್ ಆಯ್ಕೆಗಳು ಲಭ್ಯವಿವೆ
- ಟಾಪ್ ಅಪ್ ಪ್ರೀಮಿಯಂ ಪಾವತಿಗಳೊಂದಿಗೆ ನಿಮ್ಮ ವಿಮಾ ರಕ್ಷಣೆಯನ್ನು ಹೆಚ್ಚಿಸಿಕೊಳ್ಳಿ
- ವಯಸ್ಸು ಮತ್ತು ಅವಧಿಗೆ ಅನುಗುಣವಾಗಿ ಹೆಚ್ಚಿನ ವಿಮಾ ಮೊತ್ತವನ್ನು ಆಯ್ಕೆ ಮಾಡುವ ಅವಕಾಶ
- 5 ವರ್ಷಗಳ ನಂತರ ಭಾಗಶಃ ಹಿಂಪಡೆಯುವಿಕೆಗೆ ಅವಕಾಶವಿದೆ

ಇದು ನಾನ್–ಪಾರ್, ಲಿಂಕ್ಡ್, ಲೈಫ್, ವೈಯಕ್ತಿಕ, ಉಳಿತಾಯ ಯೋಜನೆ

ಪ್ಲಾನ್ ನಂ.: 886 ಯುಐಎನ್: 512L361V01

ಆನ್‌ಲೈನ್‌ನಲ್ಲೂ ಲಭ್ಯ

ನಮ್ಮ ವಾಟ್ಸಾಪ್ ನಂ. 8976862090 'Hi' ಹೇಳಿರಿ

ವಿವರಗಳಿಗಾಗಿ ನಿಮ್ಮ ಏಜಂಟರನ್ನು /ಸಮೀಪದ ಎಲ್‌ಐಸಿ ಶಾಖೆ/ ಸಂಪರ್ಕಿಸಿರಿ www.licindia.in

ಡೌನ್‌ಲೋಡ್ ಮಾಡಿರಿ ಎಲ್‌ಐಸಿ ಮೊಬೈಲ್ ಆ್ಯಪ್ LIC digital | ಸಂದರ್ಶಿಸಿರಿ: licindia.in | ಕಾಲ್ ಸೆಂಟರ್ ಸರ್ವಿಸ್ (022) 6827 6827

ನಮ್ಮನ್ನು ಫಾಲೋ ಮಾಡಿರಿ: LIC India Forever | IRDAI Regn No.: 512

LIC ಲೈಫ್ ಇನ್ಶೂರನ್ಸ್ ಕಾರ್ಪೊರೇಶನ್ ಆಫ್ ಇಂಡಿಯಾ LIFE INSURANCE CORPORATION OF INDIA

ಪ್ರತಿ ಕ್ಷಣವೂ ನಿಮ್ಮೊಂದಿಗೆ

LIC/P1/2025-26 /20/Kan

ಕೃತ್ರಿಮ ಫೋನ್ ಕಾಲ್‌ಗಳ ಬಗ್ಗೆ ಮತ್ತು ನಕಲು/ಮೋಸದ ಆಫರ್‌ಗಳ ಬಗ್ಗೆ ಎಚ್ಚರಿಕೆ. ಐಆರ್‌ಡಿಎಐ ಅಥವಾ ಅದರ ಅಧಿಕಾರಿಗಳು ವಿಮಾ ಪಾಲಿಸಿಗಳನ್ನು ಮಾರಾಟ ಮಾಡುವುದು, ಬೋನಸ್ ಘೋಷಿಸುವುದು ಅಥವಾ ಪ್ರೀಮಿಯಂಗಳ ಹೂಡಿಕೆ, ಮೊತ್ತಗಳ ಮರುಪಾವತಿಯಂತಹ ವಿಮಾ ವ್ಯವಹಾರದ ಯಾವುದೇ ಚಟುವಟಿಕೆಗಳಲ್ಲಿ ಭಾಗಿಯಾಗುವುದಿಲ್ಲ. ಪಾಲಿಸಿದಾರರು ಅಥವಾ ಅಂತಹ ಕರೆಗಳನ್ನು ಸ್ವೀಕರಿಸುವ ಪ್ರಾಸ್ಪೆಕ್ಟ್ ಪೋಲೀಸ್ ದೂರು ದಾಖಲಿಸುವಂತೆ ವಿನಂತಿಸಲಾಗಿದೆ. ಅಪಾಯ ಸಾಧ್ಯತೆಗಳು, ನಿಯಮ ಹಾಗೂ ಷರತ್ತುಗಳ ಬಗ್ಗೆ ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಮಾರಾಟ ಪೂರ್ತಿಗೊಳ್ಳುವ ಮೊದಲು ಸೇಲ್ಸ್ ಬ್ರೋಶರ್ ಎಚ್ಚರಿಕೆಯಿಂದ ಓದಿರಿ.

ಲಿಂಕ್ ಮಾಡಲಾದ ಉತ್ಪನ್ನಗಳು ಸಾಂಪ್ರದಾಯಿಕ ವಿಮಾ ಉತ್ಪನ್ನಗಳಿಗಿಂತ ಭಿನ್ನವಾಗಿರುತ್ತವೆ ಮತ್ತು ಅಪಾಯದ ಅಂಶಗಳಿಗೆ ಒಳಪಟ್ಟಿರುತ್ತವೆ.
ಲಿಂಕ್ ಮಾಡಲಾದ ವಿಮಾ ಪಾಲಿಸಿಗಳಲ್ಲಿ ಪಾವತಿಸಿದ ಪ್ರೀಮಿಯಂ ಬಂಡವಾಳ ಮಾರುಕಟ್ಟೆಗಳು ಮತ್ತು ಸಾರ್ವಜನಿಕವಾಗಿ ಲಭ್ಯವಿರುವ ಸೂಚ್ಯಂಕದೊಂದಿಗೆ ಸಂಬಂಧಿಸಿದ ಹೂಡಿಕೆ ಅಪಾಯಗಳಿಗೆ ಒಳಪಟ್ಟಿರುತ್ತದೆ. ಫಂಡ್‌ಗಳ ಕಾರ್ಯಕ್ಷಮತೆ ಮತ್ತು ಬಂಡವಾಳ ಮಾರುಕಟ್ಟೆ/ ಸಾರ್ವಜನಿಕವಾಗಿ ಲಭ್ಯವಿರುವ ಸೂಚ್ಯಂಕದ ಮೇಲೆ ಪ್ರಭಾವ ಬೀರುವ ಅಂಶಗಳ ಆಧಾರದ ಮೇಲೆ ಘಟಕಗಳ NAVಗಳು ಹೆಚ್ಚಾಗಬಹುದು ಅಥವಾ ಕಡಿಮೆಯಾಗಬಹುದು ಮತ್ತು ವಿಮಾದಾರನು ಅವನ / ಅವಳ ನಿರ್ಧಾರಗಳಿಗೆ ಜವಾಬ್ದಾರನಾಗಿರುತ್ತಾನೆ.
ಭಾರತೀಯ ಜೀವ ವಿಮಾ ನಿಗಮವು ಜೀವವಿಮಾ ಕಂಪನಿಯ ಹೆಸರು ಮಾತ್ರ ಮತ್ತು ಪ್ರೊಟೆಕ್ಷನ್ ಪ್ಲಸ್ ಎಂಬುದು ಲಿಂಕ್ ಮಾಡಲಾದ ವಿಮಾ ಒಪ್ಪಂದದ ಹೆಸರಾಗಿದೆ ಮತ್ತು ಯಾವುದೇ ರೀತಿಯಲ್ಲಿ ಒಪ್ಪಂದದ ಗುಣಮಟ್ಟ, ಅದರ ಭವಿಷ್ಯದ ನಿರೀಕ್ಷೆಗಳು ಅಥವಾ ಆದಾಯವನ್ನು ಸೂಚಿಸುವುದಿಲ್ಲ.
ನಿಮ್ಮ ವಿಮಾ ಏಜೆಂಟ್ ಅಥವಾ ಮಧ್ಯವರ್ತಿ ಅಥವಾ ವಿಮಾ ಕಂಪನಿಯಿಂದ ನೀಡಲಾದ ಪಾಲಿಸಿ ದಾಖಲೆಯಿಂದ ಸಂಬಂಧಿಸಿದ ಅಪಾಯಗಳು ಮತ್ತು ಅನ್ವಯವಾಗುವ ಶುಲ್ಕಗಳನ್ನು ದಯವಿಟ್ಟು ತಿಳಿದುಕೊಳ್ಳಿ.
ಈ ಒಪ್ಪಂದದ ಅಡಿಯಲ್ಲಿ ನೀಡಲಾಗುವ ವಿವಿಧ ಫಂಡ್‌ಗಳು ಹೆಸರಾಗಿವೆ ಮತ್ತು ಯಾವುದೇ ರೀತಿಯಲ್ಲಿ ಈ ಯೋಜನೆಗಳ ಗುಣಮಟ್ಟ, ಅವುಗಳ ಭವಿಷ್ಯದ ನಿರೀಕ್ಷೆ ಮತ್ತು ಆದಾಯವನ್ನು ಸೂಚಿಸುವುದಿಲ್ಲ.

‘ಸೆ.13ಕ್ಕೆ ಮಹಿಳಾ ನೌಕರರ ದಿನ’

ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ
● ಲಿಂಗತಾರತಮ್ಯ ಹೋಗಲಾಡಿಸಲು ಬದ್ಧ

ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ಮಹಿಳಾ ನೌಕರರ ಸಂಘ ಆಯೋಜಿಸಿದ್ದ ಮಹಿಳಾ ನೌಕರರ ಸಮ್ಮೇಳನದಲ್ಲಿ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಅವರನ್ನು ಸಂಘದ ಅಧ್ಯಕ್ಷೆ ರೋಶನಿಗೌಡ ಸನ್ಮಾನಿಸಿದರು. ಪದಾಧಿಕಾರಿಗಳಾದ ಕೆ.ಶಶಿಕಲಾ, ವೀಣಾ ಕೃಷ್ಣಮೂರ್ತಿ, ಗೀತಾಮಣಿ ಉಪಸ್ಥಿತರಿದ್ದರು — ಪ್ರಶಾಂತ್ ಎಚ್.ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿ ವರ್ಷ ಸೆಪ್ಟೆಂಬರ್ 13ರಂದು ಮಹಿಳಾ ನೌಕರರ ದಿನವನ್ನು ಆಚರಿಸಲು ಸರ್ಕಾರ ಘೋಷಣೆ ಹೊರಡಿಸಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ಮಹಿಳಾ ನೌಕರರ ಸಂಘ ಗುರುವಾರ ಹಮ್ಮಿಕೊಂಡಿದ್ದ ಮಹಿಳಾ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

ಸರ್ಕಾರದ ಆಡಳಿತದಲ್ಲಿ ಮಹಿಳಾ ನೌಕರರೂ ಪುರುಷರಿಗೆ ಸರಿಸಮನಾಗಿ ಸೇವೆ ಸಲ್ಲಿಸುತ್ತಿದ್ದಾರೆ. ರಾಜ್ಯದಲ್ಲಿ ಲಿಂಗ ತಾರತಮ್ಯ ಹೋಗಲಾಡಿಸಲು ಸರ್ಕಾರ ಬದ್ಧವಾಗಿದೆ. ಸಂಘದ ಕಚೇರಿ ಕಾರ್ಯಚಟುವಟಿಕೆಗಳಿಗೆ ಬಾಲಭವನದಲ್ಲಿ ಸ್ಥಳಾವಕಾಶ ನೀಡಲು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರೊಂದಿಗೆ ಚರ್ಚಿಸಲಾಗಿದೆ ಎಂದರು.

ಮಹಿಳೆಯರು ವೈಚಾರಿಕ, ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳಬೇಕು. ಮೂಢ ನಂಬಿಕೆಗಳು ಮತ್ತು ಅಂಧ ಶ್ರದ್ಧೆಗಳನ್ನ ದೂರ ಮಾಡುವಂತಹ ಕೆಲಸಗಳನ್ನು ಮಾಡಬೇಕು. ಜಾತಿಯನ್ನು ಮುಂದಿಟ್ಟುಕೊಂಡು ಮಕ್ಕಳಲ್ಲಿ ಜಾತೀಯತೆ ಬಿತ್ತುವ ಕೆಲಸ ಮಾಡಬಾರದು. ಮಕ್ಕಳಲ್ಲೂ ವೈಜ್ಞಾನಿಕ ಮನೋಭಾವ ಬೆಳೆಸಬೇಕು. ಶಿಕ್ಷಣದ ಉದ್ದೇಶವೂ ಅದೇ ಆಗಿದೆ. ಆಗ ಮಾತ್ರ ಆರೋಗ್ಯಕರ, ಸಮಾನತೆಯ ಸಮಾಜ ನಿರ್ಮಾಣ ಸಾಧ್ಯ ಎಂದು ಹೇಳಿದರು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ, ‘ಮಹಿಳಾ ನೌಕರರು ಜಾತಿ ಸಂಘಗಳ ಆಧಾರದ ಮೇಲೆ ಸಂಘಟನೆ ಮಾಡಬಾರದು. ಮಹಿಳಾ ಶಕ್ತಿ ಆಧಾರದಲ್ಲೇ ಸಂಘಟನೆ ಮಾಡಬೇಕು. ಅದೂ ಒಂದೇ ಮಹಿಳಾ ಸಂಘವಾಗಿರಬೇಕು ಎಂದರು.

ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಸಚಿವರಾದ ಎಚ್.ಕೆ.ಪಾಟೀಲ, ದಿನೇಶ್ ಗುಂಡೂರಾವ್, ಲಕ್ಷ್ಮಿ ಹೆಬ್ಬಾಳಕರ, ಮಾಜಿ ಸಂಸದ ವಿ.ಎಸ್.ಉಗ್ರಪ್ಪ, ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ, ಮಹಿಳಾ ನೌಕರರ ಸಂಘದ ಅಧ್ಯಕ್ಷೆ ರೋಶನಿ ಗೌಡ, ಪ್ರಧಾನ ಕಾರ್ಯದರ್ಶಿ ಕೆ.ಶಶಿಕಲಾ ಉಪಸ್ಥಿತರಿದ್ದರು.

‘ಉಪ ಲೋಕಾಯುಕ್ತರ ಮಾತು ಬಿಜೆಪಿ ಬಗ್ಗೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಶೇ 63ರಷ್ಟು ಭ್ರಷ್ಟಾಚಾರ ಇದೆ ಎಂದು ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಅವರು 2019ರಲ್ಲಿ ವರದಿ ನೀಡಿದ್ದರು. ಆ ಕುರಿತಾಗಿ ಅವರು ಹೇಳಿದ್ದ ಮಾತನ್ನು ಆರ್.ಅಶೋಕ ಅವರು ನಮ್ಮ ತಲೆಗೆ ಕಟ್ಟಲು ಹೋಗಿ, ತಮ್ಮ ಕಾಲ ಮೇಲೆ ಚಪ್ಪಡಿ ಎಳೆದುಕೊಂಡಿದ್ದಾರೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದ್ದಾರೆ.

ಪ್ರವಾಸಕಥನ ಜನಾರ್ಪಣೆ ಕಾರ್ಯಕ್ರಮದಲ್ಲಿ ಉಪಲೋಕಾಯುಕ್ತ ಬಿ.ವೀರಪ್ಪ ಅವರು ಆಡಿದ್ದ ಮಾತನ್ನು ಆಧರಿಸಿ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದರು.

ಅದಕ್ಕೆ ‘ಎಕ್ಸ್’ನಲ್ಲಿಯೇ ತಿರುಗೇಟು ನೀಡಿರುವ ಸಿದ್ದರಾಮಯ್ಯ ಅವರು, ‘2019ರಲ್ಲಿ ಬಿಜೆಪಿ ಸರ್ಕಾರವಿತ್ತು ಮತ್ತು ಆಗ ಎಲ್ಲ ಇಲಾಖೆಗಳಲ್ಲೀ ಶೇ 40ರಷ್ಟು ಲಂಚ ಕೊಡಬೇಕಿತ್ತು. ಕೊರೊನಾ ಕಾಲದಲ್ಲಿ ಜನ ಹಾದಿಬೀದಿಯಲ್ಲಿ ಸಾಯುವಾಗಲೂ ವೆಂಟಿಲೇಟರ್, ಮಾಸ್ಕ್, ಸ್ಯಾನಿಟೈಸರ್, ಐಸಿಯು ಖರೀದಿ ಎನ್ನದೆ ಎಲ್ಲದರ ಲ್ಲಿಯೂ ನಿರ್ಲಜ್ಜರಾಗಿ ಲೂಟಿ ಮಾಡಲಾಗಿತ್ತು’ ಎಂದಿದ್ದಾರೆ.

‘ಬಿಜೆಪಿ ಸರ್ಕಾರದ ಅವಧಿಯಲ್ಲಿ ಪ್ರತಿ ಇಲಾಖೆಯಲ್ಲಿ ಶೇ 40ರಷ್ಟು ಕಮಿಷನ್ ಚಾಲ್ತಿಯಲ್ಲಿ ಇತ್ತು. ಅಂದಿನ ಸಚಿವ ಈಶ್ವರಪ್ಪನವರ ಕಾಟಕ್ಕೆ ಬೇಸತ್ತು ಬೆಳಗಾವಿಯ ಗುತ್ತಿಗೆ ದಾರ ಸಂತೋಷ್ ಪಾಟೀಲ ಆತ್ಮಹತ್ಯೆ ಮಾಡಿಕೊಂಡಿದ್ದರು. ನೀರಾವರಿ ಇಲಾಖೆಯಲ್ಲಿ ಸುಮಾರು ₹20,000 ಕೋಟಿ ಮೊತ್ತದ ಭ್ರಷ್ಟಾಚಾರ ನಡೆದಿದೆ ಎಂದು ವಿಧಾನ ಪರಿಷತ್ ಸದಸ್ಯರಾದ ಬಿಜೆಪಿ ಎಚ್.ವಿಶ್ವನಾಥ್ ಅವರು ಇಂದಿನ ನಿಮ್ಮ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ವಿರುದ್ಧ ನೇರಾನೇರ ಆರೋಪ ಮಾಡಿದ್ದರು.

ಪಿಎಸ್‌ಐ ನೇಮಕಾತಿಯಲ್ಲಿ ಹಗರಣ ಮಾಡಿ ನಿಮ್ಮ ಹಲವು ಬಂಧು ಮಿತ್ರರು ಜೈಲು ಸೇರಿ ಬಂದಿದ್ದಾರೆ. ಇವೆಲ್ಲಾ ಮರೆತು ಹೋಯಿತೇ? ಹೀಗೆ ಬಿಜೆಪಿ ಕಾಲದ ಹಗರಣಗಳನ್ನು ಪಟ್ಟಿಮಾಡುತ್ತಾ ಹೋದರೆ ಒಂದು ಮಹಾಗ್ರಂಥವನ್ನೇ ಬರೆಯಬಹುದು’ ಎಂದು ಸಿದ್ದರಾಮಯ್ಯ ಕುಟುಕಿದ್ದಾರೆ.

‘ನಾನೂ ತಿನ್ನುವುದಿಲ್ಲ, ಇತರರು ತಿನ್ನಲೂ ಬಿಡುವುದಿಲ್ಲ’ ಎನ್ನುವ ಪ್ರಧಾನಿ ನರೇಂದ್ರ ಮೋದಿ ಅವರ ಆಡಳಿತದಲ್ಲಿ ಭಾರತವು ಭ್ರಷ್ಟಾಚಾರದಲ್ಲಿ ಮುಳುಗಿದೆ. ಜಾಗತಿಕ ಭ್ರಷ್ಟಾಚಾರ ಸೂಚ್ಯಂಕದಲ್ಲಿ ಭಾರತವು 96ನೇ ಸ್ಥಾನಕ್ಕೆ ಕುಸಿದಿದೆ’ ಎಂದು ಹಂಗಿಸಿದ್ದಾರೆ.

ಸಿಬಿಐ ತನಿಖೆಗೆ ಆರ್.ಅಶೋಕ ಆಗ್ರಹ

‘ಕರ್ನಾಟಕದಲ್ಲಿ ಶೇ63ರಷ್ಟು ಭ್ರಷ್ಟಾಚಾರ ಇದೆ ಎಂದು ಉಪ ಲೋಕಾಯುಕ್ತರೇ ಸಾರ್ವಜನಿಕವಾಗಿ ಹೇಳಿದ್ದು, ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕು’ ಎಂದು ವಿಧಾನಸಭೆ ವಿಪಕ್ಷ ನಾಯಕ ಆರ್. ಅಶೋಕ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ, ಮುಡಾ ಹಗರಣ, ಕಮೀಷನ್ ಆರೋಪಗಳು ಬಂದಾಗ ಮುಖ್ಯಮಂತ್ರಿ ಸಿದ್ದರಾಮಯ್ಯ ಸಾಕ್ಷ್ಯ ಕೊಡಿ ಎಂದು ಕೇಳಿದ್ದರು. ಭ್ರಷ್ಟಾಚಾರಕ್ಕೆ ನ್ಯಾಯಮೂರ್ತಿ ಅವರೇ ಸಾಕ್ಷಿಯಾಗಿದ್ದಾರೆ. ಈಗ ‘ಪೇಸಿಎಂ’ ಎಂಬ ಭಿತ್ತಿಪತ್ರವನ್ನು ಕಾಂಗ್ರೆಸ್ ನಾಯಕರ ಮುಖಕ್ಕೆ ಅಂಟಿಸಬೇಕು’ ಎಂದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಆಡಳಿತಕ್ಕೆ ನ್ಯಾಯಮೂರ್ತಿಗಳ ಹೇಳಿಕೆ ಕನ್ನಡಿಯಾಗಿದೆ. ಭೋವಿ ನಿಗಮ ದಲ್ಲಿ ಒಂದು ಎಕರೆ ಭೂಮಿ ಮಂಜೂರು ಮಾಡಲು ₹25 ಲಕ್ಷ ಕಮೀಷನ್ ಇದೆ. ಮದ್ಯದಂಗಡಿ ಪರವಾನಗಿಗೆ ₹20 ಲಕ್ಷ ಇದೆ. ವಿದ್ಯುತ್ ಪರಿವರ್ತಕ ಅಳವಡಿಕೆಯಲ್ಲಿ ₹90 ಕೋಟಿ, ಕಸದ ಯಂತ್ರ ಖರೀದಿಯಲ್ಲಿ ₹2.5 ಕೋಟಿ ಹಗರಣ ನಡೆದಿದೆ ಎಂದು ದೂರಿದರು.

ಚಲನಚಿತ್ರೋತ್ಸವ ಸ್ಪರ್ಧೆಗೆ ಆಹ್ವಾನ

ಬೆಂಗಳೂರು: ಕರ್ನಾಟಕ ಚಲನಚಿತ್ರ ಅಕಾಡೆಮಿಯು 17ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಭಾಗವಾಗಿ ವಿವಿಧ ವಿಭಾಗಗಳಲ್ಲಿ ಸ್ಪರ್ಧೆಗೆ ಚಲನಚಿತ್ರಗಳನ್ನು ಆಹ್ವಾನಿಸಿದೆ.

2026ರ ಜನವರಿ 29ರಿಂದ ಫೆಬ್ರುವರಿ 6ರವರೆಗೆ ಚಲನಚಿತ್ರೋತ್ಸವವು ನಡೆಯಲಿದೆ. 2025ರ ಜನವರಿ 1ರಿಂದ 2025ರ ಡಿಸೆಂಬರ್ 31ರ ಒಳಗೆ ತಯಾರಾಗಿರುವ ಚಲನಚಿತ್ರಗಳನ್ನು ಸ್ಪರ್ಧೆಗೆ ಸಲ್ಲಿಸಬಹುದಾಗಿದೆ. ಕೇಂದ್ರೀಯ ಚಲನಚಿತ್ರ ಸೆನ್ಸಾರ್ ಮಂಡಳಿ (ಸಿಬಿಎಫ್‌ಸಿ) ಪ್ರಮಾಣ ಪತ್ರದಲ್ಲಿ ನಮೂದಿಸುವ ದಿನಾಂಕವನ್ನೇ ನಿರ್ಮಾಣದ ದಿನಾಂಕ ಎಂದು ಪರಿಗಣಿಸಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಒಟ್ಟು ಮೂರು ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿದ್ದು, ಡಿಸೆಂಬರ್ 6ರಿಂದ 31ರವರೆಗೆ ಅರ್ಜಿಸಲ್ಲಿಸ ಬಹುದಾಗಿದೆ. ಚಲನಚಿತ್ರೋತ್ಸವ ಜಾಲತಾಣ www.biffes.org, ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ.

ಪ್ರತಿ ಅರ್ಜಿಗೂ ₹3,000 ಶುಲ್ಕ ಅನ್ವಯವಾಗುತ್ತದೆ. ಸ್ಪರ್ಧೆಗೆ ಸಲ್ಲಿಸುವ ಚಲನಚಿತ್ರಗಳು ಇಂಗ್ಲಿಷ್ ಉಪಶೀರ್ಷಿಕೆ ಹೊಂದಿರಬೇಕು ಎಂದು ಮಾಹಿತಿ ನೀಡಿದೆ.

ಮಾಹತಿಗೆ 8904645529 ಸಂಖ್ಯೆಗೆ ಕರೆ ಮಾಡಬಹುದಾಗಿದೆ ಅಥವಾ biffesblr@gmail.comಗೆ ಇ–ಮೇಲ್ ಮಾಡಬಹುದಾಗಿದೆ.

ಮೂರು ವಿಭಾಗಗಳ ಸ್ಪರ್ಧೆ:

1.ಕನ್ನಡ ಸಿನಿಮಾ ವಿಭಾಗ: ಕನ್ನಡ ಮತ್ತು ಕರ್ನಾಟಕದ ಯಾವುದೇ ಉಪಭಾಷೆಯ ಸಿನಿಮಾವನ್ನು ಈ ವಿಭಾಗದಲ್ಲಿ ಸಲ್ಲಿಸಬಹುದಾಗಿದೆ

2. ಚಿತ್ರಭಾರತಿ ವಿಭಾಗ: ಭಾರತದ ಯಾವುದೇ ಭಾಷೆ ಮತ್ತು ಉಪಭಾಷೆಯಲ್ಲಿ ನಿರ್ಮಾಣವಾದ ಸಿನಿಮಾಗಳು ಈ ವಿಭಾಗದಲ್ಲಿ ಸ್ಪರ್ಧಿಸಲು ಅರ್ಹವಾಗಿರುತ್ತವೆ

3. ಏಷ್ಯಾ ಸಿನಿಮಾ ವಿಭಾಗ: ಏಷ್ಯಾದ ಯಾವುದೇ ದೇಶ ಮತ್ತು ಏಷ್ಯಾದ ಭಾಷೆಯಲ್ಲಿ ನಿರ್ಮಿಸಲಾದ ಚಿತ್ರಗಳನ್ನು ಸ್ಪರ್ಧೆಗೆ ಸಲ್ಲಿಸಬಹುದು

ಎಲ್ಲ ಸಿನಿಮಾಗಳು ಕನಿಷ್ಠ 70 ನಿಮಿಷಗಳ ಅವಧಿಯದ್ದಾಗಿರಬೇಕು.

₹ 84 ಲಕ್ಷ ವಂಚನೆ ತಪ್ಪಿಸಿದ ಬ್ಯಾಂಕ್ ವ್ಯವಸ್ಥಾಪಕ

ಪ್ರಜಾವಾಣಿ ವಾರ್ತೆ

ಮೂಲ್ಕಿ (ದಕ್ಷಿಣ ಕನ್ನಡ): ವೃದ್ಧ ದಂಪತಿಯನ್ನು ಮುಂಬೈನ ವಂಚನಾ ಜಾಲವೊಂದು ಡಿಜಿಟಲ್ ಅರೆಸ್ಟ್ ಮೂಲಕ ಬೆದರಿಸಿ ಸುಮಾರು ₹ 84 ಲಕ್ಷ ವಂಚಿಸಲು ಯತ್ನಿಸಿದ್ದು, ಬ್ಯಾಂಕ್ ವ್ಯವಸ್ಥಾಪಕರ ಸಮಯಪ್ರಜ್ಞೆ ಹಾಗೂ ಮೂಲ್ಕಿ ಪೊಲೀಸರ ಮಧ್ಯಪ್ರವೇಶದಿಂದಾಗಿ ಅದು ವಿಫಲಗೊಂಡಿದೆ ಎಂದು ನಗರ ಪೊಲೀಸ್ ಕಮಿಷನರ್ ಸುಧೀರ್ ಕುಮಾರ್ ರೆಡ್ಡಿ ತಿಳಿಸಿದ್ದಾರೆ.

‘ಕಿನ್ನಿಗೋಳಿ ಸಮೀಪದ ದಾಮಸ್ ಕಟ್ಟೆ ಕೊಬ್ಬೆಟ್ಟಿನ ಬೆನೆಡಿಕ್ಟ್ ಫರ್ನಾಂಡಿಸ್ (86)– ಲಿಲ್ಲಿ ಫರ್ನಾಂಡಿಸ್ (71) ದಂಪತಿಗೆ ವಿಡಿಯೊ ಕರೆ ಮಾಡಿದ್ದ ವಂಚಕರು, ತಮ್ಮನ್ನು ಮುಂಬೈ ಪೊಲೀಸರು ಎಂದು ಪರಿಚಯಿಸಿಕೊಂಡಿದ್ದರು. ಮುಂಬೈನಲ್ಲಿ ಬ್ಯಾಂಕ್ ಖಾತೆಯಿಂದ ನೀವು ₹ 6 ಕೋಟಿ ಹಣ ಪಡೆದಿದ್ದೀರಿ ಎಂದು ಹೇಳಿ, ನಿಮ್ಮನ್ನು ಡಿಜಿಟಲ್‌ಅರೆಸ್ಟ್ ಮಾಡಲಾಗಿದ್ದು, ಕೆನರಾ ಬ್ಯಾಂಕಿನ ಕಿನ್ನಿಗೋಳಿಯ ಶಾಖೆಯಲ್ಲಿ ನಿಮ್ಮ ಖಾತೆಯಲ್ಲಿರುವ ₹ 84 ಲಕ್ಷವನ್ನು ವರ್ಗಾಯಿಸಬೇಕು ಎಂದು ಬೆದರಿಕೆ ಹಾಕಿದ್ದರು’ ಎಂದು ಅವರು ತಿಳಿಸಿದ್ದಾರೆ.

‘ಬೆದರಿಕೆಗೆ ಮಣಿದ ದಂಪತಿ ಕೆನರಾ ಬ್ಯಾಂಕಿನ ಕಿನ್ನಿಗೋಳಿ ಶಾಖೆಯ ಅವರ ಖಾತೆಯಿಂದ ₹ 84 ಲಕ್ಷವನ್ನು ಆರೋಪಿಗಳು ಸೂಚಿಸಿದ ಖಾತೆಗೆ ವರ್ಗಾಯಿಸಿದ್ದರು. ಸಂಶಯಗೊಂಡ ಬ್ಯಾಂಕ್ ವ್ಯವಸ್ಥಾಪಕ ರಾಯಿಸ್ಟನ್, ಮೂಲ್ಕಿ ಪೊಲೀಸರಿಗೆ ಮಾಹಿತಿ ನೀಡಿದ್ದರು. ದಂಪತಿಯ ಮನೆಗೆ ತೆರಳಿ ವಿಚಾರಿಸಿದಾಗ ಡಿಜಿಟಲ್ ಅರೆಸ್ಟ್ ಬಯಲಾಗಿದೆ. ಖಾತೆಗೆ ವರ್ಗಾವಣೆಗೊಂಡ ₹ 84 ಲಕ್ಷವನ್ನು ಬ್ಯಾಂಕಿನವರು ತಡೆಹಿಡಿದಿದ್ದರು’ ಎಂದು ಅವರು ತಿಳಿಸಿದ್ದಾರೆ.

ಕಾಂಗ್ರೆಸ್‌ನಿಂದ ಶಾಸಕ ಉಚ್ಚಾಟನೆ

ತಿರುವನಂತಪುರ: ಅತ್ಯಾಚಾರ ಆರೋಪ ಎದುರಿಸುತ್ತಿರುವ ಕೇರಳದ ಪಾಲಕ್ಕಾಡ್ ಶಾಸಕ ರಾಹುಲ್ ಮಾಂಕೂಟತ್ತಿಲ್ ಅವರನ್ನು ಕಾಂಗ್ರೆಸ್ ಪಕ್ಷದಿಂದ ಗುರುವಾರ ಉಚ್ಚಾಟನೆ ಮಾಡಲಾಗಿದೆ.

ತಿರುವನಂತಪುರದ ನ್ಯಾಯಾಲಯವೊಂದು ರಾಹುಲ್ ಅವರ ನಿರೀಕ್ಷಣಾ ಜಾಮೀನು ಅರ್ಜಿಯನ್ನು ತಿರಸ್ಕರಿಸುತ್ತಿದ್ದಂತೆಯೇ ಪಕ್ಷದ ಈ ನಿರ್ಧಾರವೂ ಹೊರಬಿದ್ದಿದೆ. ಮಹಿಳೆಯೊಬ್ಬರು ನೀಡಿದ ದೂರನ್ನು ಆಧರಿಸಿ, ಅತ್ಯಾಚಾರ ಹಾಗೂ ಬಲವಂತದ ಗರ್ಭಪಾತದ ಆರೋಪಗಳ ಮೇರೆಗೆ ರಾಹುಲ್ ವಿರುದ್ಧ ಪ್ರಕರಣ ದಾಖಲಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಗುಂಜಗೋಡಿನ ‘ಸಾಕೇತ್ ಪ್ರತಿಷ್ಠಾನಮ್’ ಬೆಂಗಳೂರಿನಲ್ಲಿ ಗುರುವಾರ ಹಮ್ಮಿಕೊಂಡಿದ್ದ ‘ವಾಲ್ಮೀಕಿವೇದ ಪ್ರಬೋಧ’ ಪ್ರಸಾರ ಕಾರ್ಯಕ್ರಮದಲ್ಲಿ ತಿರುಪತಿಯ ರಾಷ್ಟ್ರೀಯ ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕ ಕೆ.ಇ. ದೇವನಾಥನ್ ಅವರಿಗೆ ಪ್ರತಿಷ್ಠಾನಮ್‌ನ ಶೇಷಗಿರಿ ಗಂಗಾಧರ ಭಟ್ಟ, ‘ಪ್ರೇಕ್ಷಾ’ ಅಂತರ್ಜಾಲ ಪತ್ರಿಕೆಯ ಸಹ ಸಂಪಾದಕ ಬಿ.ಎನ್. ಶಶಿಕಿರಣ ಗೌರವ ಸಮರ್ಪಣೆ ಮಾಡಿದರು. ವಿದ್ವಾಂಸ ಶತಾವಧಾನಿ ಆರ್. ಗಣೇಶ್, ಉದ್ಯಮಿ ಬಿ. ನಾಗೇಶಪ್ಪ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ಪತ್ರಿಕೆಗಳಿಗೆ ಜಾಹೀರಾತು ಆರೋಪದ ಮಾನಹಾನಿ ಪ್ರಕರಣ

ರಾಹುಲ್ ಗಾಂಧಿ ಪಾತ್ರವಿಲ್ಲ: ಶಶಿಕಿರಣ ಶೆಟ್ಟಿ

ಪ್ರಜಾವಾಣಿವ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: ‘ಪತ್ರಿಕೆಗಳಲ್ಲಿ ಸುಳ್ಳು ಜಾಹೀರಾತು ನೀಡಿ ಬಿಜೆಪಿ ವರ್ಚಸ್ಸಿಗೆ ಧಕ್ಕೆ ತಂದ ಆರೋಪದಡಿ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ವಿರುದ್ಧ ದಾಖಲಿಸಲಾಗಿರುವ ಮಾನನಷ್ಟ ಮೊಕದ್ದಮೆಗೆ ಯಾವುದೇ ಆಧಾರವಿಲ್ಲ’ ಎಂದು ರಾಹುಲ್ ಗಾಂಧಿ ಪರ ಹಿರಿಯ ವಕೀಲರು ಹೈಕೋರ್ಟ್‌ಗೆ ಅರುಹಿದರು.

‘ಈ ಸಂಬಂಧ ಬಿಜೆಪಿಯ ರಾಜ್ಯ ಘಟಕದ ಕಾರ್ಯದರ್ಶಿ ಬಿ.ಎಸ್. ಕೇಶವಪ್ರಸಾದ್ ಸಲ್ಲಿಸಿರುವ ಖಾಸಗಿ ದೂರನ್ನು ರದ್ದುಪಡಿಸಬೇಕು’ ಎಂದು ಕೋರಿ ರಾಹುಲ್ ಗಾಂಧಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನೀಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ರಾಹುಲ್ ಗಾಂಧಿ ಪರ ಪದಾಂಕಿತ ಹಿರಿಯ ವಕೀಲ ಕೆ.ಶಶಿಕಿರಣ ಶೆಟ್ಟಿ, ‘ಕರ್ನಾಟಕ ವಿಧಾನಸಭೆ ಚುನಾವಣೆಗೂ ಮುನ್ನ ಮುಖ್ಯ ವಾಹಿನಿಯ ಆಂಗ್ಲ ಮತ್ತು ಕನ್ನಡ ದಿನಪತ್ರಿಕೆಗಳ ಮುಖಪುಟದಲ್ಲಿ ಅಂದಿನ ಬಿಜೆಪಿ ಸರ್ಕಾರದ ವಿರುದ್ಧ ಸರಣಿ ಆರೋಪಗಳನ್ನು ಮಾಡಿ ಕಾಂಗ್ರೆಸ್ ಜಾಹೀರಾತು ನೀಡಿತ್ತು. ಆದರೆ, ಇದರಲ್ಲಿ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ಪಾತ್ರವಿಲ್ಲ. ಟ್ವೀಟ್ ಅನ್ನು ರಿ–ಟ್ವೀಟ್ ಮಾಡಿದ ಆರೋಪವನ್ನಷ್ಟೇ ರಾಹುಲ್ ವಿರುದ್ಧ ಹೊರಿಸಲಾಗಿದೆ. ಅಷ್ಟಕ್ಕೂ ಈ ದೂರು ಅಥವಾ ಸ್ವಯಂ ಹೇಳಿಕೆಯಲ್ಲಿ ಆರೋಪಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳೇ ಇಲ್ಲ’ ಎಂದು ಪ್ರತಿಪಾದಿಸಿದರು.

‘ಪತ್ರಿಕೆಗಳಿಗೆ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಜಾಹೀರಾತು ನೀಡಿದೆಯೇ ವಿನಃ ರಾಹುಲ್ ಗಾಂಧಿಯಲ್ಲ. ಮಾನಹಾನಿ ಪ್ರಕರಣದಲ್ಲಿ ಯಾರು ಸುದ್ದಿ ಅಥವಾ ಜಾಹೀರಾತು ಪ್ರಕಟಿಸುತ್ತಾರೋ ಅವರನ್ನೂ ಪಕ್ಷಕಾರರನ್ನಾಗಿ ಮಾಡಬೇಕು. ಆದರೆ, ದೂರುದಾರರು ಜಾಹೀರಾತನ್ನು ಪ್ರಕಟಿಸಿದ ಪತ್ರಿಕೆಗಳ ಸಂಪಾದಕರನ್ನು ಪಕ್ಷಕಾರರನ್ನಾಗಿ ಮಾಡಿಲ್ಲ. ಜಾಹೀರಾತು ನೀಡಲು ಯಾರು ಅಧಿಕಾರ ನೀಡಿದ್ದಾರೆ ಮತ್ತು ಅವುಗಳನ್ನು ಯಾವಾಗ ನೀಡಲಾಗಿದೆ ಎಂಬುದನ್ನು ಪತ್ತೆ ಮಾಡಲಾಗಿಲ್ಲ’ ಎಂದರು.

‘ಜಾಹೀರಾತು ನೀಡಿದ್ದ ಸಂದರ್ಭದಲ್ಲಿ ರಾಹುಲ್ ಗಾಂಧಿ ಅವರ ಸಂಸತ್ ಸದಸ್ಯತ್ವ ಅನರ್ಹಗೊಂಡಿತ್ತು. ಪಕ್ಷದಲ್ಲೂ ಅವರು ಯಾವುದೇ ಹುದ್ದೆ ಅಥವಾ ಸ್ಥಾನ ಹೊಂದಿರಲಿಲ್ಲ. ವಿವೇಚನಾರಹಿತ ಮತ್ತು ಆಧಾರರಹಿತ ಆರೋಪಗಳ ಈ ಪ್ರಕರಣವನ್ನು ವಜಾಗೊಳಿಸಬೇಕು’ ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ದೂರುದಾರ ಬಿಜೆಪಿ ಪರ ಹಾಜರಿದ್ದ ಹೈಕೋರ್ಟ್ ವಕೀಲ ಎಂ.ವಿನೋದ್ ಕುಮಾರ್ ‘ಜಾಹೀರಾತು ನೀಡುವ ಸಂದರ್ಭದಲ್ಲಿ ರಾಹುಲ್ ಗಾಂಧಿ ಎಐಸಿಸಿ ಅಧ್ಯಕ್ಷರಾಗಿದ್ದರು. ರಿ–ಟ್ವೀಟ್ ಮಾಡುವುದು ಮಾನಹಾನಿ ವ್ಯಾಪ್ತಿಗೇ ಒಳಪಡುತ್ತದೆ. ವಿಧಾನಸಭಾ ಚುನಾವಣೆಗೆ ಮೂರು ದಿನ ಬಾಕಿ ಇರುವಾಗ ಕಾಂಗ್ರೆಸ್ ಪಕ್ಷವು, ಬಿಜೆಪಿಯ ಮಾನಹಾನಿ ಮಾಡಲು ಸ್ವಯಂಪ್ರೇರಿತವಾಗಿ ಪತ್ರಿಕೆಗಳಿಗೆ ಜಾಹೀರಾತು ನೀಡಿದೆ’ ಎಂದರು.

‘ಇಲ್ಲಿ ಪತ್ರಿಕೆಗಳು ಸುದ್ದಿಯನ್ನು ಪ್ರಕಟಿಸಿಲ್ಲ. ಹೀಗಾಗಿ, ಪತ್ರಿಕೆಗಳ ಸಂಪಾದಕರನ್ನು ಪಕ್ಷಕಾರರನ್ನಾಗಿ ಮಾಡಿಲ್ಲ. ಆದಾಗ್ಯೂ, ವಿಚಾರಣಾ ನ್ಯಾಯಾಲಯಕ್ಕೆ ಸಲ್ಲಿಸಲಾಗಿರುವ ದಾಖಲೆಗಳನ್ನು ಹೈಕೋರ್ಟ್ ಮುಂದಿರಿಸಲು ಇನ್ನಷ್ಟು ಕಾಲಾವಕಾಶ ನೀಡಬೇಕು’ ಎಂದು ಕೋರಿದರು.

ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ, ‘ದೂರಿನ ಆಧಾರದಲ್ಲಿ ರಾಹುಲ್ ಗಾಂಧಿಯವರ ಪಾತ್ರ ಮತ್ತು ಸ್ವಯಂ ಹೇಳಿಕೆಯನ್ನು ಅಡಕಗೊಳಿಸಬೇಕು’ ಎಂದು ಆದೇಶಿಸಿತು. ಉಭಯ ಪಕ್ಷಕಾರರಿಗೂ ತಮ್ಮ ವಾದಾಂಶಗಳನ್ನು ಸಲ್ಲಿಸಲು ನಿರ್ದೇಶಿಸಿ ಮಧ್ಯಂತರ ಆದೇಶವನ್ನು ವಿಸ್ತರಿಸಿತು. ವಿಚಾರಣೆಯನ್ನು ಇದೇ 11ಕ್ಕೆ ಮುಂದೂಡಲಾಗಿದೆ.

ಶುಕ್ರವಾರ, ಡಿಸೆಂಬರ್ 5, 2025 | ₹ 7.00

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಖಾಲಿ ಹುದ್ದೆ

ಜಿಲ್ಲೆ ಮತ್ತು ಅಧೀನ ನ್ಯಾಯಾಲಯಗಳಲ್ಲಿ ಮಂಜೂರಾಗಿರುವ ಒಟ್ಟು 25,886 ನ್ಯಾಯಾಂಗ ಅಧಿಕಾರಿ ಹುದ್ದೆಗಳ ಪೈಕಿ ಪ್ರಸ್ತುತ 4,855 ಹುದ್ದೆಗಳು ಖಾಲಿ ಉಳಿದಿದ್ದು, 4.80 ಕೋಟಿ ಪ್ರಕರಣಗಳು ವಿಚಾರಣೆಗೆ ಬಾಕಿ ಇವೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ

'ವಾಯುಮಾಲಿನ್ಯ ನಿಯಂತ್ರಿಸಿ'

ದೆಹಲಿಯಲ್ಲಿನ ವಾಯುಮಾಲಿನ್ಯವನ್ನು ನಿಯಂತ್ರಿಸುವಂತೆ ಆಗ್ರಹಿಸಿ ಕಾಂಗ್ರೆಸ್ ಸಂಸದರೊಬ್ಬರು ಆಕ್ಸಿಜನ್ ಮಾಸ್ಕ್ ಧರಿಸಿಕೊಂಡು ಸಂಸತ್ ಭವನದ ಆವರಣದಲ್ಲಿ ಪ್ರತಿಭಟನೆ ನಡೆಸಿದರು

ಜ್ಯುವೆಲ್ ಫೆಸ್ಟ್ ಆಫರ್

ಡಿಸೆಂಬರ್ 31ರವರೆಗೆ

SULTHAN®
DIAMONDS & GOLD

ಫ್ಲಾಟ್ 40% ಕಡಿತ	ತನಕ 20% ಕಡಿತ	₹100 ಅಧಿಕ	₹100 ಕಡಿಮೆ
ಚಿನ್ನಾಭರಣಗಳ ತಯಾರಿಕಾ ಶುಲ್ಕದ ಮೇಲೆ	ಡೈಮಂಡ್ ಮೌಲ್ಯದ ಮೇಲೆ	ಹಳೆಯ ಚಿನ್ನದ ವಿನಿಮಯದ ಮೇಲೆ	ಪ್ರತೀ ಗ್ರಾಂ ನ ಚಿನ್ನದ ದರದಲ್ಲಿ

Offer Available Only at

Electronic City: UG-Floor, **M5 Ecity Mall.** Ph. 080 68365647

Ulsoor Road: Via Dickenson Rd., Near Paaka Shaala. Ph: 080 25599916

Jayanagar: 3rd Block, Near Pai Viceroy Hotel. Ph: 080 26535916

HBR Layout: Beary's Amity, Opp. BDA Complex, 1st Stage, 3rd Block. Ph: 080-40996916

Now open KYOMI at **UG Floor, Phoenix Mall of Asia**

*T&C Apply.

ಕೈಗೆಟುಕುವ ದರದಲ್ಲಿ ರೋಗನಿರ್ಣಯ. ವಿಶ್ವಾಸಾರ್ಹ ಫಲಿತಾಂಶಗಳು.

MRI ಸ್ಕ್ಯಾನ್

ಮಾರುಕಟ್ಟೆ ದರ : ~~₹7500~~

Starting From

₹2900

MRI Brain/Each Spine

CT ಸ್ಕ್ಯಾನ್

ಮಾರುಕಟ್ಟೆ ದರ : ~~₹3500~~

Starting From

₹1250

CT Brain/PNS

ಪೂರ್ಣ ದೇಹ ಆರೋಗ್ಯ ತಪಾಸಣೆ

ISHWARYAM - RUBY 76 Tests

- Lipid Profile
- Kidney Function Tests (Urea, Creatinine, Uric Acid)
- Liver Function Tests
- Thyroid Function Tests
- Diabetic Profile- Sugar(F)
- Infection Screen - ESR
- Complete Blood Count
- Complete Urine Analysis

~~₹2500~~ **₹999**

60% OFF

ರಕ್ತ ಪರೀಕ್ಷೆಯಲ್ಲಿ

Upto **50% OFF**

*Free ಮನೆಯಿಂದಲೇ ರಕ್ತ ಸಂಗ್ರಹ ಮಾಡಲಾಗುವುದು

* For billing more than Rs. 200/-

This pictorial representation of the map of India does not purport to be the political map of India

ಆರ್ತಿ ಸ್ಕ್ಯಾನ್ಸ್ ಮತ್ತು ಲ್ಯಾಬ್ಸ್ ನನ್ನು ಯಾಕೆ ಆಯ್ಕೆ ಮಾಡಬೇಕು?

- 37 ವರ್ಷಗಳು ನಂಬಿಕೆ
- 12 ರಾಜ್ಯಗಳು & 250 + ಶಾಖೆಗಳು
- NABL ಮಾನ್ಯತೆ ಪಡೆದಿದೆ (MC-5593)
- 1 ಕುಟುಂಬದಿಂದ 7 ವೈದ್ಯರು ನಡೆಸಲಾಗುತ್ತಿದೆ

Cashless Facility for CGHS & ECHS

70224 70224

1.7 ಕೋಟಿಗೂ ಹೆಚ್ಚು ಜನರ ವಿಶ್ವಾಸ

ಬೆಂಗಳೂರಿನಲ್ಲಿ 16 ಶಾಖೆಗಳು

ಜಯ ನಗರ · ಇಂದಿರಾ ನಗರ · ರಾಜಾಜಿನಗರ · ಪದ್ಮನಾಭ ನಗರ · ಕೋರಮಂಗಲ
ಮಾರತಹಳ್ಳಿ · ಜೆಪಿ ನಗರ · ಕೆ.ಆರ್ . ಪುರಂ · ಹೆಬ್ಬಾಳ · ಇನ್ ಫ್ಯಾಂಟ್ರಿ ರೋಡ್ (ಶಿವಾಜಿನಗರ)
ಹೆಣ್ಣೂರು · ನಾಗರಭಾವಿ · ವೈಟ್ ಫೀಲ್ಡ್ · ಬನ್ನೇರುಘಟ್ಟ ರಸ್ತೆ · ಯಲಹಂಕ
ಜಲಹಳ್ಳಿ ಕ್ರಾಸ್

For Franchise Enquiry - 99401 10520

ಆರ್ತಿ ಸ್ಕ್ಯಾನ್ಸ್ & ಲ್ಯಾಬ್ಸ್

Ethical & Affordable Diagnostics

ಬೆಂಗಳೂರು ಮುಂಬೈ ನವ ದೆಹಲಿ ಚೆನ್ನೈ ಹೈದರಾಬಾದ್ ಕೋಲ್ಕತ್ತಾ ಗುರ್ಗಾಂವ್ ಪುಣೆ ಅಹಮದಾಬಾದ್ ತಿರುವನಂತಪುರ ಪಾಂಡಿಚೇರಿ

prajavani.net prajavani
ಶುಕ್ರವಾರ, ಡಿಸೆಂಬರ್ 5, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 335 | ಪುಟ 18
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕಲಾ ಪ್ರದರ್ಶನ
ಯಾದಗಿರಿಯಲ್ಲಿ ಗುರುವಾರ ನಡೆದ ರಾಜ್ಯಮಟ್ಟದ ಯುವಜನೋತ್ಸವದಲ್ಲಿ ಬೀದರ್ ತಂಡದ ಕಲಾವಿದರೊಬ್ಬರು ಗಮನ ಸೆಳೆದರು

ಆರ್‌ಟಿಐ ಅರ್ಜಿ



(ರಾಜ್ಯಸಭೆಗೆ ಕೇಂದ್ರ ಸರ್ಕಾರ ನೀಡಿದ ಮಾಹಿತಿ)

ಸೆನ್ಸೆಕ್ಸ್ 85,265 | ನಿಫ್ಟಿ 26,033 | $/₹ 89.89 | ಚಿನ್ನ (Std. 10g) ₹1,34,250 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,91,500 (ಬೆಂಗಳೂರು)

ದ್ವೇಷ ಭಾಷಣ: 7 ವರ್ಷ ಜೈಲು

ದ್ವೇಷಾಪರಾಧ ನಿರ್ಬಂಧಕ್ಕೆ ಮಸೂದೆ 2ನೇ ಬಾರಿ ತಪ್ಪೆಸಗಿದರೆ 10 ವರ್ಷ ಸೆರೆವಾಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧರ್ಮ, ಜನಾಂಗ, ಭಾಷೆ, ಜನ್ಮಸ್ಥಳ, ಜಾತಿ, ಲಿಂಗದ ಆಧಾರದಲ್ಲಿ ದ್ವೇಷದ ಭಾಷಣ ಮಾಡುವವರನ್ನು ನಿರ್ಬಂಧಿಸಲು ಮುಂದಾಗಿರುವ ರಾಜ್ಯ ಸರ್ಕಾರ, ಈ ಉದ್ದೇಶಕ್ಕಾಗಿ ಕಾಯ್ದೆಯನ್ನು ಜಾರಿಗೊಳಿಸಲಿದೆ.

ದ್ವೇಷ ಭಾಷಣ, ಪ್ರಚೋದನಕಾರಿ ಮಾತುಗಳು ಸಮಾಜದ ಸಾಮರಸ್ಯಕ್ಕೆ ಧಕ್ಕೆ ತರುತ್ತಿರುವುದನ್ನು ಗಮನಿಸಿರುವ ಸರ್ಕಾರ, ಇಂತಹ ಕೃತ್ಯ ಎಸಗುವವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮಕ್ಕೆ ಮುಂದಾಗಿದೆ. ದ್ವೇಷಾಪರಾಧ ಎಸಗಿದವರಿಗೆ ಒಂದು ವರ್ಷದಿಂದ ಏಳು ವರ್ಷಗಳವರೆಗೆ ಜೈಲು ಶಿಕ್ಷೆ ಹಾಗೂ ₹50 ಸಾವಿರ ದಂಡ ವಿಧಿಸಲಾಗುತ್ತದೆ.

ಈ ಉದ್ದೇಶಕ್ಕಾಗಿ ಸರ್ಕಾರ ರೂಪಿಸಿರುವ, 'ಕರ್ನಾಟಕ ದ್ವೇಷ

ಎಚ್‌.ಕೆ. ಪಾಟೀಲ

ಭಾಷಣ ಮತ್ತು ದ್ವೇಷಾಪರಾಧಗಳ (ಪ್ರತಿಬಂಧಕ) ಮಸೂದೆ–2025'ಕ್ಕೆ ಗುರುವಾರ ನಡೆದ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ.

'ಈ ಮಸೂದೆಯೂ ಸೇರಿ ಒಟ್ಟು ಎಂಟು ಮಸೂದೆಗಳ ಕರಡುಗಳಿಗೆ ಗುರುವಾರ ನಡೆದ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ. ಈ ಎಲ್ಲ ಮಸೂದೆಗಳನ್ನು ಬೆಳಗಾವಿಯಲ್ಲಿ ಡಿ. 8ರಿಂದ ನಡೆಯಲಿರುವ ಅಧಿವೇಶನದಲ್ಲಿ ಮಂಡಿಸಲಾಗುವುದು' ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್‌.ಕೆ. ಪಾಟೀಲ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

▶ 6

ಯಾವುದೆಲ್ಲ ದ್ವೇಷಾಪರಾಧ?

- ಯಾವುದೇ ಭಾವನಾತ್ಮಕ, ಮಾನಸಿಕ, ದೈಹಿಕ, ಸಾಮಾಜಿಕ ಅಥವಾ ಆರ್ಥಿಕ ಹಾನಿ
- ಸಾಮರಸ್ಯ, ವ್ಯಕ್ತಿತ್ವ, ಸಮಾಜಕ್ಕೆ ಧಕ್ಕೆ ತರುವ ದತ್ತಾಂಶ ಸಂದೇಶ, ಪತ್ರ, ಚಿತ್ರಗಳು, ಧ್ವನಿ, ಧ್ವನಿ ಸಂಕೇತಗಳು
- ಕಂಪ್ಯೂಟರ್ ಪ್ರೋಗ್ರಾಂಗಳು, ಸಾಫ್ಟ್‌ವೇರ್ ಮತ್ತು ಡಾಟಾಬೇಸ್‌ಗಳು ಅಥವಾ ಮೈಕ್ರೋಫಿಲ್ಮ್ ಅಥವಾ ಕಂಪ್ಯೂಟರ್ ರಚಿತ ಮೈಕ್ರೊಫೀಚರ್‌ಗಳು
- ಈ ಮೇಲಿನ ಅಪರಾಧಗಳ ಮೇಲೆ ಡಿವೈಎಸ್‌ಪಿ ಶ್ರೇಣಿಯ ಅಧಿಕಾರಿ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳ ಬಹುದು

ಟಿಇಟಿ ವಿನಾಯಿತಿ: ಶಿಕ್ಷಕರಿಗೆ ನಿರಾಳ

ಒಂದರಿಂದ ಐದನೇ ತರಗತಿವರೆಗಿನ ಪ್ರಾಥಮಿಕ ಶಾಲಾ ಶಿಕ್ಷಕರು ಆಯಾ ವಿಷಯಗಳಲ್ಲಿ ಪದವಿಯನ್ನು ಹೊಂದಿದ್ದರೆ ಸಾಕು ಆರು ಮತ್ತು ಏಳನೇ ತರಗತಿಗೆ ಬೋಧನೆ ಮಾಡಬಹುದು.

ಟಿಇಟಿ (ಶಿಕ್ಷಕರ ಅರ್ಹತಾ ಪರೀಕ್ಷೆ) ಪ್ರಮಾಣಪತ್ರ ಹೊಂದಿರಬೇಕೆಂಬ ಷರತ್ತನ್ನು ಕೈಬಿಟ್ಟು 6 ಮತ್ತು 7ನೇ ತರಗತಿಗಳಿಗೆ ಬೋಧಿಸಲು ಅನುವಾಗುವಂತೆ ತಿದ್ದುಪಡಿ ಮಾಡಿ ಇದೇ ಅ. 16ರಂದು ಹೊರಡಿಸಿದ್ದ ವೃಂದ ಮತ್ತು ನೇಮಕಾತಿ (ತಿದ್ದುಪಡಿ) ಕರಡು ನಿಯಮಗಳಿಗೆ ಸಚಿವ ಸಂಪುಟ ಒಪ್ಪಿಗೆ ನೀಡಿದೆ.

▶ 6

1,777 ಎಕರೆ ಭೂಮಿ ಕೈಬಿಡಲು ಒಪ್ಪಿಗೆ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣ ಹೋಬಳಿಯ 13 ಗ್ರಾಮಗಳಲ್ಲಿ ಒಟ್ಟು 1,777 ಎಕರೆ ಭೂಮಿಯನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಭೂಸ್ವಾಧೀನ ಪ್ರಕ್ರಿಯೆಗಳಿಂದ ಕೈಬಿಡಲು ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ. ಭೂಸ್ವಾಧೀನ ಮಾಡಲು ಕೆಐಎಡಿಬಿ ಅಧಿಸೂಚನೆ ಹೊರಡಿಸಿತ್ತು. ಅದನ್ನು ವಿರೋಧಿಸಿ ಚನ್ನರಾಯಪಟ್ಟಣ ಭೂ ಸ್ವಾಧೀನ ವಿರೋಧಿ ಹೋರಾಟ ಸಮಿತಿ ಪ್ರತಿಭಟನೆ ನಡೆಸಿತ್ತು. 1339 ದಿನ ನಡೆದ ಹೋರಾಟದ ಬಳಿಕ ಭೂ ಸ್ವಾಧೀನ ಕೈಬಿಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಘೋಷಿಸಿದ್ದರು.

ಹಾನಿಕಾರಕ ಸರಕುಗಳ ಮೇಲೆ ಸೆಸ್

ನವದೆಹಲಿ (ಪಿಟಿಐ): 'ಆರೋಗ್ಯ ಮತ್ತು ರಾಷ್ಟ್ರೀಯ ಭದ್ರತಾ ಸೆಸ್ ಮಸೂದೆ–2025' ಅನ್ನು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಗುರುವಾರ ಲೋಕಸಭೆಯಲ್ಲಿ ಮಂಡಿಸಿದರು.

ವಿವರ ಪುಟ ▶ 6

ಚಿನ್ನ: ಇನ್ನೂ ಶೇ 30ರಷ್ಟು ಏರಿಕೆ ಸಾಧ್ಯತೆ ▶ 10

ಚಿನಕುರುಳಿ ಪ್ರಕಾಶ್ ಶೆಟ್ಟಿ

ಆರೋಪಿ ಕಾರಿನಲ್ಲಿದ್ದ ₹11 ಲಕ್ಷ ಕದ್ದ ಕಾನ್‌ಸ್ಟೆಬಲ್ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಪೊಲೀಸ್ ಕಮಿಷನರ್ ಕಚೇರಿ ಆವರಣ ದಲ್ಲಿ ನಿಲುಗಡೆ ಮಾಡಿದ್ದ ಕಾರಿನಲ್ಲಿದ್ದ ₹11 ಲಕ್ಷ ಹಣ ಕದ್ದು ನಾಟಕವಾಡಿದ್ದ ಸೈಬರ್ ಅಪರಾಧ ಠಾಣೆಯ ಹೆಡ್ ಕಾನ್‌ಸ್ಟೆಬಲ್ ಜಬೀವುಲ್ಲಾ ಕೊನೆಗೂ ಪೊಲೀಸರಿಗೆ ಸಿಕ್ಕಿ ಹಾಕಿಕೊಂಡಿದ್ದಾರೆ.

ಸೈಬರ್ ಅಪರಾಧ ಪ್ರಕರಣ ವೊಂದರಲ್ಲಿ ಬಂಧಿಸಲಾಗಿದ್ದ ಆರೋಪಿಯನ್ನು ಕಮಿಷನರ್

ಜಬೀವುಲ್ಲಾ

ಕಚೇರಿ ಆವರಣದಲ್ಲಿರುವ ಸಿಸಿಬಿ ಸೈಬರ್ ಕ್ರೈಂ ಠಾಣೆಗೆ ವಿಚಾರಣೆಗೆಂದು ತನಿಖಾಧಿಕಾರಿಗಳು ಕರೆತಂದಿದ್ದರು. ಜಪ್ತಿ ಮಾಡಿಕೊಂಡಿದ್ದ ಆರೋಪಿಯ ಕಾರನ್ನು ಸಹ ತಂದಿದ್ದರು. ಆ ಕಾರಿನಲ್ಲಿದ್ದ ಹಣವನ್ನು ಜಬೀವುಲ್ಲಾ ಕಳ್ಳತನ ಮಾಡಿದ್ದರು ಎಂದು ಮೂಲಗಳು ಹೇಳಿವೆ.

ವಿಚಾರಣೆಗೆ ತೆರಳುವ ಮುನ್ನ ಆರೋಪಿ ತನ್ನ ಕಾರಿನಲ್ಲಿ ₹11 ಲಕ್ಷ ನಗದು ಇದ್ದ ಬ್ಯಾಗ್ ಇಟ್ಟಿದ್ದರು.

▶ 5

ಆರ್ಯನ್ ಖಾನ್ ಅಸಭ್ಯ ವರ್ತನೆ: ಹರಿದಾಡಿದ ವಿಡಿಯೊ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಲಿವುಡ್ ನಟ ಶಾರುಕ್ ಖಾನ್ ಮಗ ಆರ್ಯನ್ ಖಾನ್ ಬೆಂಗಳೂರಿನ ಪಬ್‌ವೊಂದರ ಬಾಲ್ಕನಿಯಲ್ಲಿ ನಿಂತು ಅಸಭ್ಯವಾಗಿ ಕೈ ಬೆರಳು ತೋರಿಸಿದ ದೃಶ್ಯ ಇರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ನ.28ರಂದು ಆರ್ಯನ್ ಖಾನ್ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಳ್ಳಲು ನಗರಕ್ಕೆ ಬಂದಿದ್ದರು. ಅಶೋಕನಗರ ಪೊಲೀಸ್ ಠಾಣಾ ವ್ಯಾಪ್ತಿಯ ಪಬ್‌ವೊಂದರಲ್ಲಿ ಆರ್ಯನ್ ಖಾನ್ ನೋಡಲು ಅಭಿಮಾನಿಗಳು ಬಂದಿದ್ದರು. ಆ ವೇಳೆ ಆರ್ಯನ್ ಖಾನ್ ಪಬ್‌ನ ಬಾಲ್ಕನಿಯಲ್ಲಿ ನಿಂತು, ಅಲ್ಲಿದ್ದ ಸಾರ್ವಜನಿಕರತ್ತ ಮಧ್ಯದ ಬೆರಳು ತೋರಿಸಿದ್ದರು. ನಂತರ ಅಭಿಮಾನಿಗಳತ್ತ ಕೈಬೀಸಿ ತೆರಳಿದ್ದರು. ಆ ದೃಶ್ಯವನ್ನು ಅಭಿಮಾನಿಗಳು ವಿಡಿಯೊ ಮಾಡಿಕೊಂಡಿದ್ದು ಅಸಭ್ಯ ವರ್ತನೆ ತೋರಿರುವುದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದೆ.

ಆರ್ಯನ್ ಖಾನ್

ವಸತಿ ಸಚಿವ ಜಮೀರ್ ಅಹಮದ್ ಖಾನ್ ಅವರ ಮಗ, ಚಿತ್ರನಟ ಝೈದ್ ಖಾನ್ ಹಾಗೂ ಕಾಂಗ್ರೆಸ್ ಶಾಸಕ ಎನ್‌.ಎ. ಹ್ಯಾರಿಸ್ ಮಗ ಮೊಹಮ್ಮದ್ ನಲಪಾಡ್ ಜತೆಗಿದ್ದರು. ಆರ್ಯನ್ ಬೆರಳು ತೋರಿಸಿದ್ದ ವೇಳೆ ಝೈದ್ ಖಾನ್ ಹಾಗೂ ಮೊಹಮ್ಮದ್ ನಲಪಾಡ್ ಅವರು ನಗುತ್ತಾ ಪ್ರತಿಕ್ರಿಯಿಸಿರುವುದು ವಿಡಿಯೊದಲ್ಲಿ ಸೆರೆಯಾಗಿದೆ.



ಸೂರ್ಯೋದಯ: 6:28 ಸೂರ್ಯಾಸ್ತ : 5:52 ಚಂದ್ರೋದಯ: ಸಂ. 5:12 ಚಂದ್ರಾಸ್ತ: ಬೆ. 5:30 | ಗುರುವಾರದ ಉಷ್ಣಾಂಶ : ಗರಿಷ್ಠ 28° ಕನಿಷ್ಠ 19°
ಶುಕ್ರವಾರದ ಉಷ್ಣಾಂಶ 27° ಗರಿಷ್ಠ 20° ಕನಿಷ್ಠ | ಶನಿವಾರ 27 : 20° | ಭಾನುವಾರ 28° : 19° | ಸೋಮವಾರ 28° : 19°

ಶುಕ್ರವಾರ • ಡಿಸೆಂಬರ್ 5, 2025
ಪ್ರಜಾವಾಣಿ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಅಲ್ಲಲ್ಲಿ ತುಂತುರು ಮಳೆಯಾಗುವ ಸಾಧ್ಯತೆ ಇದೆ

ನಗರದಲ್ಲಿ ಇಂದು

ನಮ್ಮ ಕಾರ್ಖಾನೆ ಎಕ್ಸ್‌ಪೋ: ಅತಿಥಿಗಳು: ಎಸ್. ಮುನಿರಾಜು, ಡಿ.ಪಿ. ದಾಸಪ್ಪ, ರಾಜಗೋಪಾಲ್, ಶ್ರೀಪತಿ ಎಸ್., ಅಧ್ಯಕ್ಷತೆ: ಮಯಂಕ್ ಕೌಶಿಕ್, ಆಯೋಜನೆ: ಲಘು ಉದ್ಯೋಗ ಭಾರತಿ, ಸ್ಥಳ: ಪೀಣ್ಯ ಜಿಮ್‌ಖಾನ, ಎನ್‌ಟಿಟಿಎಫ್ ಕ್ರಾಸ್, ಬೆಳಿಗ್ಗೆ 9.30

'ಡಿಐಜಿಪಾಸ್ ಎಕ್ಸ್‌ಪ್ರೆಸ್' ಅಂತರ ಶಾಲಾ ನೃತ್ಯ ಸ್ಪರ್ಧೆ: ಆಯೋಜನೆ: ಡೆಕ್ಕನ್ ಹೆರಾಲ್ಡ್ ಇನ್ ಎಜುಕೇಶನ್ (ಡಿಎಚ್‌ಐಇ), ಸ್ಥಳ: ಬಾಲ ಭವನ, ಕಬ್ಬನ್ ಉದ್ಯಾನ, ಬೆಳಿಗ್ಗೆ 10

ಅಧಿಪೇಕ ಜಿ. ಅವರ ಕಲಾಕೃತಿಗಳ ಪ್ರದರ್ಶನ: ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30

ಸೇಂಟ್ ಜಾನ್ಸ್ ಮೆಡಿಕಲ್ ಕಾಲೇಜ್ ಹಾಸ್ಪಿಟಲ್‌ನ ಸುವರ್ಣ ಮಹೋತ್ಸವ ಸಮಾರಂಭ: ಅತಿಥಿಗಳು: ರಾಮಲಿಂಗಾರೆಡ್ಡಿ, ಡಾ. ಶರಣಪ್ರಕಾಶ ಪಾಟೀಲ, ದಿನೇಶ್ ಗುಂಡೂರಾವ್, ವಿನೋದ್ ಮಹಾಜನ್, ಅಧ್ಯಕ್ಷತೆ: ಆಂಡ್ರೋಸ್ ಟಿ. ಆಯೋಜನೆ ಮತ್ತು ಸ್ಥಳ: ಸೇಂಟ್ ಜಾನ್ಸ್ ನ್ಯಾಷನಲ್ ಅಕಾಡೆಮಿ ಆಫ್ ಹೆಲ್ತ್ ಸೈನ್ಸಸ್, ಮಧ್ಯಾಹ್ನ 3

ವಿಶ್ವ ಮಣ್ಣು ದಿನಾಚರಣೆ: ಉದ್ಘಾಟನೆ: ರಾಜೀವ್ ಗೌಡ, ಕೆ.ವಿ. ಪ್ರಭಾಕರ್, ಉಪಸ್ಥಿತಿ: ಎ.ಎಸ್. ಸತೀಶ್ ಗೌಡ, ಬಿ.ಆರ್. ನಾಯ್ಡು, ಬಿ.ಸಿ. ಮುದ್ದುಗಂಗಾಧರ್, ಕೆ.ಸಿ. ಜನಾರ್ದನ್, ಎ. ಮುತ್ತು ಆನಂದ, ಅಧ್ಯಕ್ಷತೆ: ಥಾಮಸ್ ಟಿ., ಆಯೋಜನೆ ಮತ್ತು ಸ್ಥಳ: ಸೇಂಟ್ ಜೋಸೆಫ್ ಕಾಲೇಜು, ಎಂಜಿಎಸ್ ರಸ್ತೆ, ಜಾಲಹಳ್ಳಿ, ಮಧ್ಯಾಹ್ನ 3

ಕರ್ನಾಟಕ ರಾಜ್ಯೋತ್ಸವ, 'ಇ.ಎಸ್.ಐ.ಸಿ. ಕನ್ನಡ ರತ್ನ' ಪ್ರಶಸ್ತಿ ಪ್ರದಾನ: ಅಧ್ಯಕ್ಷತೆ: ಡಾ. ಪ್ರಸಾದ್, ಡಾ. ಜಿತೇಂದ್ರ ಕುಮಾರ್ ಜೆ.ಎಂ., ಪ್ರಶಸ್ತಿ ಸ್ವೀಕರಿಸುವವರು: ಬಿ.ಆರ್. ಲಕ್ಷ್ಮಣರಾವ್, ಅತಿಥಿಗಳು: ಅಜಿತ್ ಮುಲ್ಲಿಕ್, ಮನೋಜ್ ಕುಮಾರ್, ಎಂ. ಜಾರ್ಜ್, ಆಯೋಜನೆ: ಕನ್ನಡ ರಾಜ್ಯೋತ್ಸವ ಸಮಿತಿ ಹಾಗೂ ಮನರಂಜನಾ ಕೂಟ, ಸ್ಥಳ: ಇ.ಎಸ್.ಐ.ಸಿ ಆಸ್ಪತ್ರೆಯ ಆವರಣ, ರಾಜಾಜಿನಗರ, ಸಂಜೆ 4.30

ಬರಗೂರು ರಾಮಚಂದ್ರಪ್ಪ

ಕರ್ನಾಟಕ ರಾಜ್ಯೋತ್ಸವ ಸಮಾರಂಭ: ಉದ್ಘಾಟನೆ: ಬರಗೂರು ರಾಮಚಂದ್ರಪ್ಪ, ಅಧ್ಯಕ್ಷತೆ: ರಾಮಲಿಂಗಾರೆಡ್ಡಿ, 'ಕನ್ನಡ ವಿದ್ಯಾಶ್ರೀ' ಪ್ರಶಸ್ತಿ ಪ್ರದಾನ: ವಿ.ಎಸ್. ಆರಾಧ್ಯ, ಸನ್ಮಾನಿತರು: ರಾಜಶೇಖರಯ್ಯ ಜಿ. ಮಠಪತಿ, ಅತಿಥಿಗಳು: ಅಬ್ದುಲ್ ಅಹದ್, ಶಿಲ್ಪಾ ಎಂ., ಸ್ಮಿತಾ ರೆಡ್ಡಿ, ವ.ಚ. ಚನ್ನೇಗೌಡ, ಆಯೋಜನೆ: ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಕನ್ನಡ ಕ್ರಿಯಾ ಸಮಿತಿ, ಸ್ಥಳ: ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಕೇಂದ್ರ ಕಚೇರಿಯ ಆವರಣ, ಕೆಂಗಲ್ ಹನುಮಂತಯ್ಯ ರಸ್ತೆ, ಶಾಂತಿನಗರ, ಸಂಜೆ 4

'ಕಲಾ ಮಹೋತ್ಸವ' ವಿಶೇಷ ದಶಮಾನೋತ್ಸವ ಸಾಂಸ್ಕೃತಿಕ ಕಾರ್ಯಕ್ರಮ: ಅತಿಥಿಗಳು: ಶ್ರೀಧರ್ ಸಾಗರ್, ಮಹೇಶ ಜೋಶಿ, ಮಾಲಿನಿ ಪಿ. ರಾವ್, ರಾಜೇಂದ್ರ ಪ್ರಸಾದ್, ನಿನಾದ್ ಹರಿತ್ಸ, 'ಸುಚೇತನಾ ಸಾಧನ' ಪ್ರಶಸ್ತಿ ಸ್ವೀಕರಿಸುವವರು: ನೊಣವಿನಕೆರೆ ರಾಮಕೃಷ್ಣಯ್ಯ, ಶಶಿಧರ್ ಕೋಟೆ, ಅಲೋಕ್ ರಮೇಶ್ ಜೈನ್, ಆಯೋಜನೆ: ಎ. ಜೀಸ್ ಕಲಾಶ್ರೀ ಪಬ್ಲಿಕ್ ಚಾರಿಟಬಲ್ ಟ್ರಸ್ಟ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5

ವಕೀಲರ ದಿನಾಚರಣೆ: ಉದ್ಘಾಟನೆ: ಬಿ.ವಿ. ಆಚಾರ್ಯ, ಅತಿಥಿಗಳು: ಕೆ. ಅರವಿಂದ್ ಕಾಮತ್, ಎಂ.ಬಿ. ಜಯರಾಮ್, ಡಿ.ಆರ್. ರವಿಶಂಕರ್, ಅಧ್ಯಕ್ಷತೆ: ವಿ. ಗೋಪಾಲಗೌಡ, ಎಂ.ಕೆ. ನಾಗರಾಜ್ ಅವರು ಬರೆದಿರುವ 'ಕ್ರಿಮಿನಾಲಿಸ್ಟಿಕ್ ಫಾರೆನ್‌ಸಿಕ್ಸ್' ಪುಸ್ತಕ ಬಿಡುಗಡೆ, ಸ್ಥಳ: ಕರ್ನಾಟಕ ರಾಜ್ಯ ನೌಕರರ ಸಂಘದ ಸಭಾಂಗಣ, ಕಬ್ಬನ್ ಉದ್ಯಾನ, ಸಂಜೆ 5

ಸೃಷ್ಟಿ ಚಿತ್ರ ಸಂಭ್ರಮದ ಉದ್ಘಾಟನೆ: ನರಹರಿ ರಾವ್, ಅತಿಥಿಗಳು: ಜಯಶ್ರೀ ಕಾಸರವಳ್ಳಿ, ರೂಪಾ ಮೋಹನ್, ಆಯೋಜನೆ: ಕಲಾ ದರ್ಶಿನಿ ಟ್ರಸ್ಟ್, ಸ್ಥಳ: ನಂ. 26, 16ನೇ ಕ್ರಾಸ್, ಐದನೇ ಹಂತ, ಜೆ.ಪಿ. ನಗರ, ಸಂಜೆ 5.30

'ಶ್ರೀ ಮಣಿಕಲ್ಲು ಕ್ಷೇತ್ರ ಮಹಾತ್ಮೆ' ಯಕ್ಷಗಾನ ಪ್ರದರ್ಶನ: ಆಯೋಜನೆ: ಶ್ರೀ ನಂದಿಕೇಶ್ವರ ಪ್ರಸಾದಿತ ಯಕ್ಷಗಾನ ಮಂಡಳಿ, ಸ್ಥಳ: ದುರ್ಗಾ ಪರಮೇಶ್ವರಿ ದೇವಸ್ಥಾನ, ಚಂದ್ರಾ ಲೇಔಟ್, ಸಂಜೆ 6

ನಾಟಕ ಬೆಂಗ್ಳೂರು–18, ರಂಗ ಸಂಭ್ರಮ: 'ಎಲ್.ಎಸ್.ಡಿ' ನಾಟಕ ಪ್ರದರ್ಶನ: ರಚನೆ: ಎಸ್.ವಿ. ಕಶ್ಯಪ್, ನಿರ್ದೇಶನ: ಸುಷ್ಮಾ ಎಸ್.ವಿ., ಆಯೋಜನೆ: ನಾಟಕ ಬೆಂಗ್ಳೂರು, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in

ಅವಳಿ ಸುರಂಗ ರಸ್ತೆಗೆ ಸಮ್ಮತಿ

2.2 ಕಿ.ಮೀ ಹೆಬ್ಬಾಳ ಮೇಲ್ಸೇತುವೆ ಪ್ರದೇಶದಿಂದ ಜಿಕೆವಿಕೆ ಆವರಣದ ಪಶುವೈದ್ಯ ಕಾಲೇಜುವರೆಗೆ ಮೂರು ಪಥದ ಸುರಂಗ ರಸ್ತೆ ಉದ್ದ	**1.70** ಕಿ.ಮೀ 2 ಪಥದ 2 ಹಾದಿಯ ಎಲಿವೇಟೆಡ್ ಕಾರಿಡಾರ್‌ನ ಉದ್ದ	**₹2,215**ಕೋಟಿ ಸುರಂಗ ರಸ್ತೆ– ಎಲಿವೇಟೆಡ್ ಕಾರಿಡಾರ್‌ನ ಪೂರ್ಣ ವೆಚ್ಚ	**₹1,490**ಕೋಟಿ ಸುರಂಗ ರಸ್ತೆ ನಿರ್ಮಾಣಕ್ಕಾಗುವ ವೆಚ್ಚ	**₹725**ಕೋಟಿ ಎಲಿವೇಟೆಡ್ ಕಾರಿಡಾರ್ ನಿರ್ಮಾಣದ ವೆಚ್ಚ	**24** ತಿಂಗಳು ಸುರಂಗ ರಸ್ತೆ ಕಾಮಗಾರಿ ಮುಗಿಯಬೇಕಾದ ಗಡುವು

ಹೆಬ್ಬಾಳದಲ್ಲಿ ವಾಹನ ದಟ್ಟಣೆ ನಿರ್ವಹಣೆಗೆ ಬಿಡಿಎಯಿಂದ ₹2,215 ಕೋಟಿ ವೆಚ್ಚ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಾಳ ಜಂಕ್ಷನ್‌ನಿಂದ ಮೇಖ್ರಿ ವೃತ್ತದವರೆಗೆ ವಾಹನ ದಟ್ಟಣೆಯನ್ನು ನಿರ್ವಹಣೆ ಮಾಡಲು ಮೂರು ಪಥದ ಅವಳಿ ಸುರಂಗ ರಸ್ತೆ, ಅದಕ್ಕೆ ಪೂರಕವಾಗಿ ಎಲಿವೇಟೆಡ್ ಕಾರಿಡಾರ್ ನಿರ್ಮಿಸಲು ಸಚಿವ ಸಂಪುಟ ಆಡಳಿತಾತ್ಮಕ ಅನುಮೋದನೆ ನೀಡಿದೆ.

ಹೆಬ್ಬಾಳ ಮೇಲ್ಸೇತುವೆಯಿಂದ ಪಶುವೈದ್ಯ ಕಾಲೇಜಿನವರೆಗೆ ಸುರಂಗ ರಸ್ತೆಯನ್ನು 'ಕಟ್ ಆ್ಯಂಡ್ ಕವರ್' ಮಾದರಿಯಲ್ಲಿ ನಿರ್ಮಿಸಲಾಗುತ್ತದೆ. ಅಲ್ಲದೆ, ಇದಕ್ಕೆ ಸಂಪರ್ಕವಾಗುವಂತೆ ಮೇಲ್ಮುಖ–ಕೆಳಮುಖ ರ‍್ಯಾಂಪ್‌ನೊಂದಿಗೆ ಎಲಿವೇಟೆಡ್ ಕಾರಿಡಾರ್ ಅನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಸಂಪನ್ಮೂಲದಿಂದಲೇ ನಿರ್ಮಿಸಲು ಸಚಿವ ಸಂಪುಟ ಒಪ್ಪಿಗೆ ನೀಡಿದೆ ಎಂದು ಸಚಿವ ಎಚ್‌.ಕೆ. ಪಾಟೀಲ ತಿಳಿಸಿದರು.

ಬೆಂಗಳೂರು ಸ್ಮಾರ್ಟ್ ಇನ್‌ಫ್ರಾಸ್ಟ್ರಕ್ಚರ್ ನಿಯಮಿತ (ಬಿ–ಸ್ಮೈಲ್) ವತಿಯಿಂದ ಈ ಸುರಂಗ ರಸ್ತೆಯನ್ನು ನಿರ್ಮಿಸಲು, ರೋಡಿಕ್ ಸಂಸ್ಥೆಯಿಂದ ವಿಸ್ತೃತ ಯೋಜನಾ ವರದಿಯನ್ನೂ (ಡಿಪಿಆರ್) ತಯಾರಿಸಲಾಗಿತ್ತು. 'ಹೆಬ್ಬಾಳ ಜಂಕ್ಷನ್‌ನಲ್ಲಿ ಸುರಂಗ ರಸ್ತೆಯನ್ನು ಬಿಡಿಎ ಸಂಪನ್ಮೂಲದಿಂದ ನಿರ್ಮಿಸಲು ಸಿದ್ಧವಿದೆ. ಬಿಡಿಎಯಲ್ಲಿ ನುರಿತ ಎಂಜಿನಿಯರ್‌ಗಳು, ಹೆಬ್ಬಾಳದ ಮೇಲ್ಸೇತುವೆ ಕಾಮಗಾರಿಯನ್ನು ನಡೆಸುತ್ತಿದ್ದು, ಸುರಂಗ ರಸ್ತೆಯ ಕಾಮಗಾರಿಯನ್ನೂ ವಹಿಸಿದರೆ ನಿಗದಿತ ಸಮಯದಲ್ಲಿ ಎಲ್ಲ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುತ್ತದೆ' ಎಂದು ಬಿಡಿಎ ಆಯುಕ್ತರು ಸರ್ಕಾರಕ್ಕೆ ಕೇಳಿಕೊಂಡಿದ್ದರು.

ಬಿ–ಸ್ಮೈಲ್‌ನಿಂದ ಸುರಂಗ ರಸ್ತೆ ನಿರ್ವಹಿಸಿದ್ದರೆ, ಸರ್ಕಾರ ನೀಡುವ ವಾರ್ಷಿಕ ₹4 ಸಾವಿರ ಕೋಟಿ ಅನುದಾನದಲ್ಲೇ ವೆಚ್ಚ ಭರಿಸಬೇಕಿತ್ತು. ಆದರೆ, ಬಿಡಿಎ ಸಂಪೂರ್ಣ ಆರ್ಥಿಕ ವೆಚ್ಚವನ್ನು ತಾನೇ ಭರಿಸುವುದಾಗಿ ಹೇಳಿದ್ದರಿಂದ ಅದಕ್ಕೇ ಸುರಂಗ ರಸ್ತೆ ನಿರ್ಮಾಣದ ಜವಾಬ್ದಾರಿ ನೀಡಲಾಗಿದೆ. ಬಿ–ಸ್ಮೈಲ್ ಅಂತಿಮಗೊಳಿಸಿರುವ ಡಿಪಿಆರ್‌ನಂತೆಯೇ ಸುರಂಗ ರಸ್ತೆ ನಿರ್ಮಿಸಲು ತಿಳಿಸಲಾಗಿದೆ.

'ಕರ್ನಾಟಕ ಪಶುವೈದ್ಯಕೀಯ, ಪಶು, ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ (ಕೆವಿಎಎಫ್‌ಎಸ್‌ಯು) ಆವರಣದ 26 ಸಾವಿರ ಚದರ ಮೀಟರ್ ಜಮೀನನ್ನು ನೀಡಲು ಕೋರಲಾಗಿತ್ತು. ಅದಕ್ಕೆ ವಿಶ್ವವಿದ್ಯಾಲಯ ಒಪ್ಪಿಲ್ಲ. ಆದರೆ, ಅದರ ಆವರಣದ ಕೆಳಭಾಗದಲ್ಲಿ ಸುರಂಗ ರಸ್ತೆ ಸಾಗಲು ಸಮ್ಮತಿ ನೀಡಿದೆ. ಹೀಗಾಗಿ, ಸುರಂಗ ರಸ್ತೆಗಾಗಿ ಅಲ್ಲಿನ ಜಾಗವನ್ನು ಬಳಸಿಕೊಂಡು ನಂತರ ಅದನ್ನು ಈಗಿರುವಂತೆಯೇ ಬಿಟ್ಟುಕೊಡಲಾಗುತ್ತದೆ' ಎಂದು ಬಿಡಿಎ ಆಯುಕ್ತರು ಸುರಂಗ ರಸ್ತೆ ಪ್ರಸ್ತಾವನೆಯಲ್ಲಿ ವಿವರಿಸಿದ್ದಾರೆ.

₹10 ಸಾವಿರ ಕೋಟಿ ಸಂಗ್ರಹ

ಬಿಡಿಎ ಆರ್ಥಿಕವಾಗಿ ಸಬಲವಾಗಿದ್ದು, ವಸತಿ– ಮೂಲೆ ನಿವೇಶನಗಳ ಹರಾಜಿನಿಂದ ₹4,500 ಕೋಟಿ, ಶಿವರಾಮಕಾರಂತ ಬಡಾವಣೆಯ ಅರ್ಜಿ ಠೇವಣಿಯಿಂದ ₹1,500 ಕೋಟಿ, ಫ್ಲ್ಯಾಟ್, ವಿಲ್ಲಾ, ಸಿಎ ನಿವೇಶನ ಹರಾಜಿನಿಂದ ₹1,000 ಕೋಟಿ ಹಾಗೂ ಅನಧಿಕೃತ ನಿರ್ಮಾಣಗಳಿಗೆ 38(ಡಿ) ಅನುಷ್ಠಾನದಿಂದ ₹3,000 ಕೋಟಿ ಸೇರಿದಂತೆ 2026ರ ಮಾರ್ಚ್ ಅಂತ್ಯಕ್ಕೆ ₹10 ಸಾವಿರ ಕೋಟಿ ಸಂಗ್ರಹಿಸಲಿದೆ ಎಂದು ಆಯುಕ್ತರು ವಿವರಿಸಿದ್ದಾರೆ.

2025–25ರ 4ನೇ ತ್ರೈಮಾಸಿಕದಿಂದ 2027–28ನ ಮೂರನೇ ತ್ರೈಮಾಸಿಕದವರೆಗೆ ಕಂತಿನಲ್ಲಿ ಸುರಂಗ ರಸ್ತೆಗೆ ₹2,215 ಕೋಟಿ ಭರಿಸಲು ಸಿದ್ಧವಿದೆ ಎಂದು ಆರ್ಥಿಕ ವೆಚ್ಚವನ್ನೂ ವಿವರವಾಗಿ ನೀಡಿದ್ದಾರೆ. ಇದರಲ್ಲಿ, ₹333 ಕೋಟಿ ಶಾಸನಬದ್ಧ ಶುಲ್ಕ, ₹190 ಕೋಟಿ ಜಿಎಸ್‌ಟಿ, ಸರ್ಕಾರಿ ಜಮೀನಿನಲ್ಲಿ ಸುರಂಗ ರಸ್ತೆ ಸಾಗುವುದರಿಂದ ಭೂಸ್ವಾಧೀನಕ್ಕೆ ₹25 ಕೋಟಿ ಹಾಗೂ ಯುಟಿಲಿಟಿ ಸೌಲಭ್ಯವನ್ನು ಬದಲಾಯಿಸಲು ₹35 ಕೋಟಿ ಸೇರಿದೆ.

'ಕೊಳಚೆ ನೀರು ಸೇರದಂತೆ ಮಾಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ–100 ನಾಗರಿಕ ಜಲಮಾರ್ಗಕ್ಕೆ ಕೊಳಚೆ ನೀರು ಸೇರುವುದನ್ನು ಸಂಪೂರ್ಣವಾಗಿ ತಡೆಗಟ್ಟಲು ಸಮಗ್ರ ಯೋಜನೆ ರೂಪಿಸಬೇಕು ಎಂದು ಜಿಬಿಎ ಮುಖ್ಯ ಆಯುಕ್ತ ಎಂ. ಮಹೇಶ್ವರ ರಾವ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಆನೆಪಾಳ್ಯ ಜಂಕ್ಷನ್‌ನಿಂದ ಶಾಂತಿನಗರ ಬಸ್ ನಿಲ್ದಾಣದವರೆಗೆ ಸುಮಾರು 2 ಕಿ.ಮೀ ವ್ಯಾಪ್ತಿಯಲ್ಲಿ 'ಕೆ–100 ನಾಗರಿಕ ಜಲಮಾರ್ಗ'ವನ್ನು ನಡಿಗೆಯ ಮೂಲಕ ಪರಿಶೀಲಿಸಿದ ನಂತರ ಅವರು ಮಾತನಾಡಿದರು.

ಕುಂಬಾರಗುಡಿ ಬಳಿ ರಾಜಕಾಲುವೆಯಲ್ಲಿ ಹರಿಯುವ ನೀರನ್ನು ಶುದ್ಧೀಕರಿಸಲು 5 ಎಂ.ಎಲ್.ಡಿ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕವನ್ನು (ಎಸ್‌ಟಿಪಿ) ನಿರ್ಮಿಸಲಾಗಿದೆಎಂದು ಅಧಿಕಾರಿಗಳು ಮಾಹಿತಿ ನೀಡಿದರು. ರಾಜಕಾಲುವೆಗೆ ತ್ಯಾಜ್ಯ ನೀರು ಸೇರುವುದನ್ನು ನಿಲ್ಲಿಸಲು ಜಲಮಂಡಳಿ 15 ಎಂ.ಎಲ್.ಡಿ ಸಾಮರ್ಥ್ಯದ ಇಂಟರ್ ಮೀಡಿಯೇಟ್ ಸೀವೇಜ್ ಪಂಪಿಂಗ್ ಸ್ಟೇಷನ್ (ಐಎಸ್‌ಪಿಎಸ್) ನಿರ್ಮಿಸುತ್ತಿದ್ದು, ಇನ್ನೊಂದು ತಿಂಗಳೊಳಗೆ ಕಾರ್ಯಾಚರಣೆ ಪ್ರಾರಂಭಿಸಬೇಕು ಎಂದು ಮುಖ್ಯ ಆಯುಕ್ತರು ಸೂಚನೆ ನೀಡಿದರು.

ಕೆ.ಆರ್. ಮಾರುಕಟ್ಟೆಯಿಂದ ಬೆಳ್ಳಂದೂರು ಕೆರೆಯವರೆಗೆ 9.2 ಕಿ.ಮೀ ಉದ್ದದ ಕೋರಮಂಗಲ ರಾಜಕಾಲುವೆಯಲ್ಲಿ ಜಲಮಾರ್ಗ ಯೋಜನೆಯ ಬಾಕಿ ಉಳಿದಿರುವ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಲು ತಿಳಿಸಿದರು. ಬೆಂಗಳೂರು ದಕ್ಷಿಣ ನಗರ ಪಾಲಿಕೆ ಆಯುಕ್ತ ರಮೇಶ್ ಕೆ.ಎನ್., ಅಭಿವೃದ್ಧಿ ಹೆಚ್ಚುವರಿ ಆಯುಕ್ತ ನವೀನ್ ಕುಮಾರ್ ರಾಜು, ಮುಖ್ಯ ಎಂಜಿನಿಯರ್‌ಗಳಾದ ಬಸವರಾಜ್ ಕಬಾಡೆ, ರಾಜೇಶ್, ರವಿ ಉಪಸ್ಥಿತರಿದ್ದರು.

ಮಹೇಶ್ವರ ರಾವ್

ಸುದ್ದಿ 2 ನಿಮಿಷ

ನಾಲ್ವರು ಪೊಲೀಸರ ಅಮಾನತು

ಬೆಂಗಳೂರು: ಕರ್ತವ್ಯ ಲೋಪದ ಆರೋಪದ ಮೇರೆಗೆ ನಾಲ್ವರು ಪೊಲೀಸರನ್ನು ಅಮಾನತು ಮಾಡಿ ಉತ್ತರ ವಿಭಾಗದ ಡಿಸಿಪಿ ನೇಮಗೌಡ ಅವರು ಆದೇಶಿಸಿದ್ದಾರೆ.

ನಂದಿನಿಲೇಔಟ್ ಠಾಣೆಯ ಎಎಸ್‌ಐ ಶ್ರೀನಿವಾಸ ಮೂರ್ತಿ, ಸುಬ್ರಹ್ಮಣ್ಯನಗರ ಠಾಣೆಯ ಎಎಸ್‌ಐ ಜಯರಾಮೇಗೌಡ ಹಾಗೂ ಕಾನ್‌ಸ್ಟೆಬಲ್ ಧರ್ಮ ಹಾಗೂ ಸಂಜಯನಗರ ಠಾಣೆಯ ಕಾನ್‌ಸ್ಟೆಬಲ್ ನಜೀರ್ ಅಮಾನತುಗೊಂಡ ಸಿಬ್ಬಂದಿ. ಮೇಲ್ನೋಟಕ್ಕೆ ನಾಲ್ವರೂ ಕರ್ತವ್ಯ ಲೋಪ ಎಸಗಿರುವುದು ಸಾಬೀತಾಗಿದ್ದು, ಇಲಾಖಾ ವಿಚಾರಣೆ ಕಾಯ್ದಿರಿಸಿ ಅಮಾನತು ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಸಿಲ್ಕ್ ಮಾರ್ಕ್ ಎಕ್ಸ್‌ಪೊಗೆ ಚಾಲನೆ

ಬೆಂಗಳೂರು: ಸಿಲ್ಕ್ ಮಾರ್ಕ್ ಆರ್ಗನೈಸೇಷನ್ ಆಫ್ ಇಂಡಿಯಾದ (ಎಸ್‌ಎಂಒಐ) ವತಿಯಿಂದ ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಆಯೋಜಿಸಿರುವ ಸಿಲ್ಕ್ ಮಾರ್ಕ್ ಎಕ್ಸ್‌ಪೊಗೆ ಗುರುವಾರ ಚಾಲನೆ ನೀಡಲಾಯಿತು. ಈ ಪ್ರದರ್ಶನ ಡಿ. 9ರವರೆಗೆ ನಡೆಯಲಿದೆ.

ಪ್ರದರ್ಶನದಲ್ಲಿ 10ಕ್ಕೂ ಹೆಚ್ಚು ರಾಜ್ಯಗಳ 12 ರೇಷ್ಮೆ ನೇಯ್ಗೆಯ ಸಮೂಹಗಳನ್ನು ಪ್ರತಿನಿಧಿಸುವ ಅಧಿಕೃತ ಸಿಲ್ಕ್ ಮಾರ್ಕ್ ಬಳಕೆದಾರರಿಂದ ಸ್ಥಾಪಿಸಿರುವ 43 ಮಳಿಗೆಗಳನ್ನು ಪ್ರಾರಂಭಿಸಲಾಗಿದೆ. ಇಲ್ಲಿ ಟಸ್ಸಾರ್ ರೇಷ್ಮೆ ಸೀರೆಗಳ ಜೊತೆಗೆ ಫ್ಯಾನ್ಸಿ ವಿನ್ಯಾಸಗಳು, ಕಾಂತ ವರ್ಕ್, ಟಸ್ಸಾರ್ ಶರ್ಟ್‌ಗಳು, ಜಾಕೆಟ್‌ಗಳು, ಎರಿ ಸಿಲ್ಕ್ ಸಾಕ್ಸ್‌ಗಳು, ರೇಷ್ಮೆ ಬ್ಯಾಗ್‌ಗಳು, ಅಂಗಿಗಳು, ಧೋತಿಗಳು ಸೇರಿದಂತೆ ಹಲವಾರು ಉಡುಪುಗಳ ಪ್ರದರ್ಶನ ಹಾಗೂ ಮಾರಾಟ ಇದೆ.

ಇದರ ಜೊತೆಗೆ ಸಾಂಪ್ರದಾಯಿಕ ಕಾಂಜೀವರಂ, ಬನಾರಸಿ, ಪೂಚಂಪಲ್ಲಿ, ಮುರ್ಶಿದಾಬಾದ್, ಮೈಸೂರ್ ಸಿಲ್ಕ್, ಉಪ್ಪದ ಪೈಥಾನಿ ಇತ್ಯಾದಿ ಸೀರೆಗಳ ಪ್ರದರ್ಶನ ಮತ್ತು ಖರೀದಿಗೆ ಅವಕಾಶ ಇದೆ. ಈ ಪ್ರದರ್ಶನವು ಪ್ರತಿದಿನ ಬೆಳಿಗ್ಗೆ 11ರಿಂದ ಸಂಜೆ 7ರವರೆಗೆ ಇರಲಿದೆ ಎಂದು ಆಯೋಜಕರು ತಿಳಿಸಿದ್ದಾರೆ. ಕೇಂದ್ರ ರೇಷ್ಮೆ ಮಂಡಳಿ ಕಾರ್ಯದರ್ಶಿ (ತಾಂತ್ರಿಕ) ಮತ್ತು ಎಸ್‌ಎಂಒಐನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ನರೇಶ್ ಬಾಬು ಎನ್., ಅವರು ಎಕ್ಸ್‌ಪೊಗೆ ಚಾಲನೆ ನೀಡಿದರು.

ಕನ್ನಡದ ಕಟ್ಟೆ ನಾಶ: ಪ್ರತಿಭಟನೆ

ರಾಜರಾಜೇಶ್ವರಿನಗರ: ಉಲ್ಲಾಳು ಬಳಿಯ ವಿನಾಯಕ ಬಡಾವಣೆಯ ಮೂರನೇ ಹಂತದಲ್ಲಿ ನಿರ್ಮಿಸಿದ ಕನ್ನಡದ ಕಟ್ಟೆಯನ್ನು ಧ್ವಂಸ ಮಾಡಿರುವ ಕನ್ನಡ ವಿರೋಧಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ವಿವಿಧ ಸಂಘಟನೆಗಳು ಪ್ರತಿಭಟನೆ ನಡೆಸಿದವು.

ವಿನಾಯಕ ಬಡಾವಣೆ ಕ್ಷೇಮಾಭಿವೃದ್ಧಿ ಸಂಘ, ಜೈ ಭುವನೇಶ್ವರಿ ವೇದಿಕೆ, ಕರ್ನಾಟಕದ ರಕ್ಷಣಾ ವೇದಿಕೆ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಕನ್ನಡದ ಕಟ್ಟೆ ಧ್ವಂಸ ಮಾಡಿರುವ ಸ್ಥಳದಲ್ಲಿ ಬಿದ್ದಿರುವ ಅವಶೇಷಗಳು

ಎದುರಿನ ಕಟ್ಟಡದ ಮಾಲೀಕ ಹರೀಶ್ ರಾತ್ರೋರಾತ್ರಿ ಕಟ್ಟೆಯನ್ನು ಧ್ವಂಸ ಮಾಡಿದ್ದಾರೆ ಎಂದು ಪ್ರತಿಭಟನಕಾರರು ಆರೋಪಿಸಿದರು.

ಸಾಮಾಜಿಕ ಕಾರ್ಯಕರ್ತ ಪಿ.ಎಸ್. ಕರುಣಾಕರ್ ನಾಯಕ್ ಸಂಘಟನೆಗಳ ಮುಖಂಡರಾದ ಮಂಜುನಾಥ್, ಶೇಖರ್, ಎ.ಎಂ. ಹರೀಶ್, ಮನು ಗೌಡ, ಶ್ವೇತಾ ಗೌಡ, ರಾಜೇಶ್ವರಿನಗರ ಘಟಕದ ಅಧ್ಯಕ್ಷ ಶಿವಣ್ಣ ಭಾಗವಹಿಸಿದ್ದರು. ಶಾಸಕ ಎಸ್.ಟಿ. ಸೋಮಶೇಖರ್ ಸ್ಥಳಕ್ಕೆ ಭೇಟಿ ನೀಡಿದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Graphic Designers

WANTED MALE Graphic Designer (Corel Draw Photoshop Illustrator) Pvt Ltd Company around Rajajinagar Contact: 9108458798/ 9845579620

Walk-in

TATA ADVANCED SYSTEMS
WALK IN DRIVE @ BANGALORE
Work Location: MRO unit – Dewanhalli SEZ, Bengaluru

S No.	Job Role	Description
01	Production Planning Engineer	Qualification: B. Tech with 5 to 7 years of experience in MRO / Aerospace • Prepare daily/weekly maintenance plans and dashboards. • Calculate man-hours, allocate resources, and coordinate with stakeholders. • Manage ERP-linked work orders and control task cards. • Ensure pre-load checks and confirmations as per assigned tasks.
02	Supervisor – Maintenance	Qualification: AME / B.Tech / B.sc with 7 to 9 years of experience in heavy aircraft MRO • Supervise and coordinate heavy aircraft maintenance activities, ensuring compliance with OEM and regulatory standards. • Provide technical guidance, training, and support for troubleshooting and quality control. • Must have worked as a Master Technician and above roles.
03	Structural Repair Lead – MRO	Qualification: AME / B Tech / B.sc 11 - 14 years of experience in heavy aircraft MRO • Establish structural repair facilities and tooling per OEM and regulatory standards • Lead and approve complex sheet metal and composite repairs on heavy aircraft • Develop SOPs, ensure compliance with DGCA/EASA/FAA and maintain audit-ready documentation. • Must have performed structural repairs on heavy transport Aircraft.
04	Maintenance Planning Engineer	Qualification: B Tech / Diploma with 3 - 5 years of experience in MRO / Airline CAMO planning • Extract maintenance forecasts from MPD, TCTO, and OEM documentation • Prepare task cards and integrate them into maintenance work packages • Analyse TAT & MTTR and propose optimization strategies • Coordinate with technical services and ensure pre-load readiness as per plans

Date of Interview & Timing: 06-12-2025 & 09.30 AM to 04.30 PM | Documents to Carry: CV
Venue: RMZ Galleria Office Spaces, 3rd Floor Opp.Yelahanka Police Station, Yelahanka, Bengaluru – 560064

General

WANTED OFFICE Assistant/ Clerk (FEMALE) Bommanahalli (Bangalore) Ph: 9980140661 email: starsilks@gmail.com

REAL ESTATE SELLING

Agricultural Land Converted

Kanakapura Road

KAGGALIPURA BYPASS NH-209 Kanakapura Main Road Near 0.39 Gunta Converted BMRD Approved-Land Sale 6Cr: 9342552428

Sites

Electronic City

KHB Sites in Bangalore
Land Owner Share
Prime Location, Fully Developed Layout, Ready for Registration, SBI & Nationalised Bank Loan
Call : 70260 13388

Commercial Building

Malleshwaram

SALE OFFICE_SPACE 3600Sq.ft. Furnished 4th Floor,Vishnupriya Towers, Beside Srirampura Metro Station Price: 15,000/Sq.ft. Call:9900029200

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

BUSINESS

Business to Business

Finance

ALL LOANS AVAILABLE @4% YEARLY INTEREST PERSONAL BUSINESS PROJECT TAKEOVER MORTGAGE MINIMUM DOCUMENTATION QUICK DISBURSEMENT MAHALAKSHMI FINANCE 9984823862

EDUCATION
To Place your Classified Ads Contact:
9845114560

CONNECT

OPENS TODAY | ENTRY FREE
தமிழ்ப் புத்தகத் திருவிழா 2025 பெங்களூரு
TAMIL BOOK FESTIVAL
Time: 10am to 8pm
KANNADA, ENGLISH BOOKS ALSO AVAILABLE
5th - 14th December-2025
The Institution of Engineers #3, Dr. B.R. Ambedkar Veedhi, Opp. Indian Express, Bengaluru
FREE PARKING 9916542367 6363118988

PUBLIC NOTICE

ಸಾರ್ವಜನಿಕ ತಿಳುವಳಿಕೆ

ಶ್ರೀ ಸಿ. ರಮೇಶ್ ಮೆ॥ ಜೆಫ್ ಇನ್ ರೀಜೆನ್ಸಿ ರವರು ಬಾರ್ & ರೆಸ್ಟೋರೆಂಟ್, ನಂ. 4, ರಿಂಗ್ ರಸ್ತೆ, ದೊಮ್ಮಲೂರು, ಬೆಂಗಳೂರು–560071. ಅಲ್ಲಿ ಡಿಸ್ಕೋಥೆಕ್ ನಡೆಸಲು ಪರವಾನಿಗೆ ಕೋರಿ ಪೊಲೀಸ್ ಆಯುಕ್ತರು, ಬೆಂಗಳೂರು ನಗರ ರವರಿಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಈ ಬಗ್ಗೆ ಸಾರ್ವಜನಿಕರ ಆಕ್ಷೇಪಣೆ/ಸಲಹೆಗಳು ಏನಾದರೂ ಇದ್ದಲ್ಲಿ, ಅವುಗಳನ್ನು ಲಿಖಿತ ಮೂಲಕ ಸಹಿಯೊಂದಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ 15 ದಿನಗಳೊಳಗಾಗಿ ಉಪ ಪೊಲೀಸ್ ಆಯುಕ್ತರು (ಆಡಳಿತ), ಪೊಲೀಸ್ ಆಯುಕ್ತರವರ ಕಛೇರಿ, ನಂ.1, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು–560001 ರವರಿಗೆ ಸಲ್ಲಿಸಬಹುದಾಗಿರುತ್ತದೆ. ನಿಗದಿತ ಅವಧಿಯಲಿ, ಯಾವುದೇ ಆಕ್ಷೇಪಣೆ / ಸಲಹೆಗಳು ಬಾರದಿದ್ದಲ್ಲಿ ಅರ್ಜಿದಾರರು ಸದರಿ ಸ್ಥಳದಲ್ಲಿ ಡಿಸ್ಕೋಥೆಕ್ ನಡೆಸಲು ಪರವಾನಿಗೆ ಕೋರಿ ಸಲ್ಲಿಸಿರುವ ಅರ್ಜಿಯ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.
ಉದ್ದೇಶಿತ ಕೇಂದ್ರದ ಚಕ್ಕುಬಂದಿ
ಪೂರ್ವಕ್ಕೆ: ಸಮಾಧಿ ಸ್ಥಳ; ಪಶ್ಚಿಮಕ್ಕೆ: ರಸ್ತೆ; ಉತ್ತರಕ್ಕೆ: ನಾಗರಾಜ್ ಕಟ್ಟಡ; ದಕ್ಷಿಣಕ್ಕೆ: ಚಿನ್ನರಾಜು ಕಟ್ಟಡ.
ಸಹಿ/- ಪೊಲೀಸ್ ಆಯುಕ್ತರು, ಬೆಂಗಳೂರು ನಗರ
ದಿನಾಂಕ: 03–12–2025

PERSONAL

Change of Name

I, MANISHA REDDY, residing at Bengaluru-97 have changed my name as MANISHA REDDY BANGALORE SRINIVAS, vide affidavit dated 4/12/2025 before Notary K.S. Bammappanavar, Bengaluru

CHANGE OF NAME
I, RANJUSHA KOUSTUB D/o. Rajan Keyalathe, R/a Dreamscape Towers, G-03, 5th Main, OMBR Layout, Bangalore North, Bangalore - 560043 have changed my Minor Son's Name from RIYANSH VINAYAK NAIR to RIYANSH NAIR (DOB: 07.04.2016) vide affidavit dated: 4.12.2025 before Notary Y.R. Chandrasekar, Bangalore.

CHANGE OF NAME
I, RANJUSHA VINAYAK D/o. Rajan Keyalathe, R/a Dreamscape Towers, G-03, 5th Main, OMBR Layout, Bangalore North, Bangalore - 560043 have changed my Name to RANJUSHA KOUSTUB vide affidavit dated: 4.12.2025 before Notary Y.R. Chandrasekar, Bangalore.

CHANGE OF NAME
I, S VINOD CHARLES, residing at # 96/2, Annamma Building, 4th Cross, 8th Main, Hongasandra Village, Begur Main Road, Bengaluru-560068, have changed my name to S VINODH CHARLES vide affidavit dtd: 03-12-2025 before notary M. Rajendra, Bengaluru.

I, SATHYAVELU R/a#18, 13th Cross KashiNagara Yelachenahalli J.P.Nagar, Bengaluru 560078 have changed my minor Daughter's Name from SUVETHA to INDHU. S. (DOB:06.1.2008) as per Court Order of 2nd Additional District Munsif, Puducherry Dated:23.9.2025 vide affidavit dated:4.12.2025 before Notary B.Gopalakrishna Bangalore.

ನೈಋತ್ಯ ರೈಲ್ವೆ
ಪ್ರೊಫಾರ್ಮಾ 10.01
ಭಾರತೀಯ ರೈಲ್ವೆ
ಸಾರ್ವಜನಿಕ ಅಧಿಸೂಚನೆ

ನೈಋತ್ಯ ರೈಲ್ವೆಯ ಕೆಳಗಿನ ಭಾಗದಲ್ಲಿ ಪೂರ್ಣಗೊಂಡ ರೈಲ್ವೆ ಮಾರ್ಗಗಳು ಮತ್ತು ಆವರಣಗಳನ್ನು ಬಳಸುವ ಎಲ್ಲ ಬಳಕೆದಾರರಿಗೆ ತಿಳಿಸಲಾಗುತ್ತಿದೆ. 25000 ವೋಲ್ಟ್‌ಗಳು, 50 ಎಚ್‌ಜೆಡ್., ಎಸಿ ಸಿಂಗಲ್ ಫೇಸ್ ಓವರ್‌ಹೆಡ್ ಟ್ರಾಕ್ಷನ್ ತಂತಿಗಳನ್ನು ನಿದಿಷ್ಟ ದಿನಾಂಕ ಅಥವಾ ವಿದ್ಯುತ್ ಸಂಪರ್ಕ ಮಾಡಲಾಗುವುದು. ಆ ದಿನಾಂಕದಿಂದ ಓವರ್‌ಹೆಡ್ ಟ್ರಾಕ್ಷನ್ ಲೈನ್ ಅನ್ನು ಯಾವಾಗಲೂ ಸಜೀವ (ಲೈವ್) ಆಗಿ ಪರಿಗಣಿಸಲಾಗುತ್ತದೆ ಮತ್ತು ಯಾವುದೇ ಅನಧಿಕೃತ ವ್ಯಕ್ತಿಗಳು ಈ ಓವರ್‌ಹೆಡ್ ಲೈನ್‌ನ ಹತ್ತಿರಕ್ಕೆ ಹೋಗಬಾರದು ಅಥವಾ ಯಾವುದೇ ಕೆಲಸ ಮಾಡಬಾರದು.

ವಿಭಾಗ	ವಿದ್ಯುತ್ ಚಾಲನೆಯ ಸಂಭವನೀಯ ದಿನಾಂಕ
ನೈಋತ್ಯ ರೈಲ್ವೆಯ ಬೆಂಗಳೂರು ವಿಭಾಗದ ಗತಿ ಶಕ್ತಿ ಘಟಕದ ಕೃಷ್ಣರಾಜಪುರಂ ಶೆಡ್ (ಹಂತ– III) ಯೋಜನೆಗಾಗಿ 25 ಕೆವಿ, 50 ಎಚ್‌ಜೆಡ್, ಎಸಿ, ಸಿಂಗಲ್ ಫೇಸ್ ಓವರ್‌ಹೆಡ್ ಉಪಕರಣಗಳ ವಿದ್ಯುದ್ದೀಕರಣ.	15–01–2026

ಸ್ಥಳ: ಬೆಂಗಳೂರು
ಉಪ ಮುಖ್ಯ ವಿದ್ಯುತ್ ಅಭಿಯಂತರರು, ಗತಿ ಶಕ್ತಿ/ ಬೆಂಗಳೂರು
ಪಿಯುಬಿ/694/ಎಎಡಿ60/ಪಿಆರ್‌ಬಿ/ಎಸ್‌ಡಬ್ಲ್ಯೂಆರ್/2025–26
ಕಾಯ್ದಿರಿಸದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು Google Play Store ನಿಂದ UTS Moblie ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.
South Western Railway - SWR | SWRRLY | @SWRAILWAYHQ | @sw_railways

ಕೇಂದ್ರೀಯ ವಿದ್ಯಾಲಯ, ಭಾ.ವಿ.ಸಂ, ಬೆಂಗಳೂರು–560012
KENDRIYA VIDYALAYA
INDIAN INSTITUTE OF SCIENCE BENGALURU - 560012
E-mail: principal.kviisc@gmail.com,
Website: https://iiscbangalore.kvs.ac.in Ph: 080-23371316

ಗುತ್ತಿಗೆ ಆಧಾರದ ಮೇಲೆ TGT–ಇಂಗ್ಲಿಷ್ & TGT–ವಿಜ್ಞಾನ ಹುದ್ದೆಗಳಿಗೆ ನೇರ ಸಂದರ್ಶನ 2025–26

ದಿನಾಂಕ 08.12.2025 ರಂದು (ಸೋಮವಾರ) ಬೆಳಿಗ್ಗೆ 10.00 ರಿಂದ ಬೆಳಿಗ್ಗೆ 11.30 ರವರೆಗೆ TGT (ಇಂಗ್ಲಿಷ್) & TGT–ವಿಜ್ಞಾನ ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ವಿದ್ಯಾಲಯದಲ್ಲಿ ನೇರ ಸಂದರ್ಶನ ನಡೆಯಲಿದೆ.
ಗಮನಿಸಿ: ಅರ್ಹತೆ, ಶೈಕ್ಷಣಿಕ ಅರ್ಹತೆ, ಸಂಭಾವನೆ ಮತ್ತು ಸಂದರ್ಶನ ದಿನಾಂಕ ಮತ್ತು ಸಮಯದ ವಿವರಗಳನ್ನು ಶಾಲಾ ವೆಬ್‌ಸೈಟ್: https://iiscbangalore.kvs.ac.in ನಲ್ಲಿ ಪ್ರಕಟಿಸಲಾಗಿದೆ. ಆಸಕ್ತ ಅರ್ಹ ಅಭ್ಯರ್ಥಿಗಳು ವೆಬ್‌ಸೈಟ್‌ನಲ್ಲಿ ನೀಡಲಾದ ವೇಳಾಪಟ್ಟಿಯ ಪ್ರಕಾರ ಸರಿಯಾಗಿ ಭರ್ತಿ ಮಾಡಿದ ಬಯೋಡೇಟಾ ಫಾರ್ಮ್ ಜೊತೆಗೆ ಎಲ್ಲಾ ಮೂಲ ದಾಖಲೆಗಳು / ಪ್ರಮಾಣಪತ್ರಗಳು ಮತ್ತು ಎಲ್ಲಾ ದಾಖಲೆಗಳ ಸ್ವಯಂ–ದೃಢೀಕೃತ ಜೆರಾಕ್ಸ್ ಪ್ರತಿಗಳೊಂದಿಗೆ ವಿದ್ಯಾಲಯದಲ್ಲಿ ವರದಿ ಮಾಡಿಕೊಳ್ಳಿ.
ಸಂದರ್ಶನಕ್ಕೆ ಹಾಜರಾಗಲು ಯಾವುದೇ ಟಿಎ/ಡಿಎ ಪಾವತಿಸಲಾಗುವುದಿಲ್ಲ.
ಸಹಿ/–
ಪ್ರಾಂಶುಪಾಲರು

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ, ಬೆಂಗಳೂರು.
ಸಂ: ಮಮಇ 108 ರಾಮಆ 2025 ದಿನಾಂಕ: 01.12.2025

ಟೆಂಡರ್ ಪ್ರಕಟಣೆ

ಬಾಲಭವನ ಸೊಸೈಟಿ, ಕಬ್ಬನ್‌ಪಾರ್ಕ್, ಬೆಂಗಳೂರು ಇಲ್ಲಿನ ಆವರಣದಲ್ಲಿ ನಿಗಧಿತ ಜಾಗದಲ್ಲಿ ಮಕ್ಕಳ ಮನರಂಜನಾ ಆಟಿಕೆಗಳಾದ ಕರೋಸೆಲ್ (4000 Sq. ft), ಡೈನೋಸಾರ್ ಪಾರ್ಕ್ (1500 Sq. ft), ಹೆಲಿಕಾಪ್ಟರ್ ಸವಾರಿ (4306 Sq. ft), ಹೊರಾಂಗಣ ನಾಣ್ಯ ಆಟಗಳು (1000 Sq. ft), ಬೇರ್ ಮ್ಯಾನ್ (600 Sq. ft), ಜಿಪ್‌ಲೈನ್, ಟೋರಾ ಟೋರಾ (500 Sq. ft), ರಾಕ್ ಕ್ಲೈಂಬಿಂಗ್ ವಾಲ್ (500 Sq. ft) ಹಾಗೂ ಟ್ರಾಫಿಕ್ ಪಾರ್ಕ್ (5000 Sq. ft), ಒಟ್ಟು 17400 ಚದರಡಿಯ ಜಾಗದಲ್ಲಿ ನೂತನವಾಗಿ ಅಳವಡಿಸಿ ನಡೆಸಲು ಆಸಕ್ತ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮದಂತೆ ಒಂದು ವರ್ಷದ ಅವಧಿಗೆ ಗುತ್ತಿಗೆ ಆಧಾರದಲ್ಲಿ ನಿರ್ವಹಿಸಲು ಅರ್ಹ ಬಿಡ್ಡುದಾರರಿಂದ ಟೆಕ್ನಿಕಲ್ ಮತ್ತು ಆರ್ಥಿಕ ಬಿಡ್ ನೀಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ (KTPP) 1999 ನಿಯಮಗಳು 2000 ಪ್ರಕಾರ e-Procurement ಮೂಲಕ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ವಿಳಾಸ: https://kppp.karnataka.gov.in ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ **ದಿನಾಂಕ: 01.12.2025 ರಿಂದ ದಿನಾಂಕ: 07.01.2026 ಸಂಜೆ 4.00 ಗಂಟೆಗೆ.** ತಾಂತ್ರಿಕ ಲಕೋಟೆ ತೆರೆಯುವ **ದಿನಾಂಕ: 09.01.2026 ಸಂಜೆ 4.00 ಗಂಟೆಗೆ** ಹಾಗೂ ಹಣಕಾಸಿನ ಲಕೋಟೆಯನ್ನು ತೆರೆಯುವ **ದಿನಾಂಕ: 15.01.2026.** ಹೆಚ್ಚಿನ ಮಾಹಿತಿಯನ್ನು ಬಾಲಭವನ ಸೊಸೈಟಿ, ಕಬ್ಬನ್‌ಪಾರ್ಕ್, ಬೆಂಗಳೂರು ಈ ಕಛೇರಿಯಿಂದ ಪಡೆಯಬಹುದು.

ಸಹಿ/– (ಮುರಳೀಧರ ಎಸ್. ತಳ್ಳಿಕೇರಿ)
ಸರ್ಕಾರದ ಉಪ ಕಾರ್ಯದರ್ಶಿ–2
ಹಾಗೂ ರಾಜ್ಯ ಟೆಂಡರ್ ಬುಲೆಟಿನ್ ಅಧಿಕಾರಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ
ವಾಸಾಸಂಇ/ವಾ.ಪ್ರ/4197/ಎಂಎಎ/25–26

ನೈಋತ್ಯ ರೈಲ್ವೆ
ಟೆಂಡರ್ ಪ್ರಕಟಣೆ ಸಂ. ಹೆಚ್‌ಇ–ಟಿಆರ್‌ಡಿ–2025–26–ಒಟಿ–32
ದಿನಾಂಕ : 28–11–2025
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ನಿಲ್ದಾಣಗಳು, ಪ್ಲಾಟ್‌ಫಾರಂಗಳು, ಪಾದಚಾರಿ ಮೇಲ್ಸೇತುವೆಗಳು, ರಸ್ತೆ ಮೇಲ್ಸೇತುವೆಗಳು ಮತ್ತು ಎಲ್‌ಸಿ ಗೇಟ್‌ಗಳಲ್ಲಿ ಟ್ರ್ಯಾಕ್ ಡಿಸ್ಟ್ರಿಬ್ಯೂಷನ್ ಸ್ವತ್ತುಗಳ ಸುರಕ್ಷತೆಗಾಗಿ ಸುರಕ್ಷತೆ ಮತ್ತು ವಿಶ್ವಾಸಾರ್ಹತೆ ಕಾರ್ಯ ಯೋಜನೆಯ ಅನುಷ್ಠಾನ.	ರೂ. 1,29,48,655/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 29–12–2025 ರಂದು 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ ಮುಕ್ತಾಯದ ದಿನಾಂಕದವರೆಗೆ ಯಾವುದೇ ತಿದ್ದುಪಡಿಗಾಗಿ ವೆಬ್‌ಸೈಟ್‌ಗೆ ಭೇಟಿ ನೀಡುತ್ತಿರಿ.
ಹಿರಿಯ ವಿಭಾಗೀಯ ವಿದ್ಯುತ್ ಇಂಜಿನಿಯರ್ / ಟ್ರ್ಯಾಕ್ಷನ್ ಡಿಸ್ಟ್ರಿಬ್ಯೂಷನ್ / ಹುಬ್ಬಳ್ಳಿ
ಪಿಯುಬಿ/704/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2025–26
ಕಾಯ್ದಿರಿಸಿಲ್ಲದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆಪ್‌ನ್ನು ಡೌನ್‌ಲೋಡ್ ಮಾಡಿ
South Western Railway-SWR | SWRRLY | @SWRAILWAYHQ | @sw_railways

ನೈಋತ್ಯ ರೈಲ್ವೆ
ಇ–ಟೆಂಡರ್ ಪ್ರಕಟಣೆ ಸಂ. ಆರ್‌ಇ–ಎಸ್‌ಬಿಸಿ–ಇ–259–ಟಿಡಬ್ಲ್ಯುಎಸ್–ಎಎಸ್‌ಕೆ ದಿನಾಂಕ : 19–11–2025
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ನೈಋತ್ಯ ರೈಲ್ವೆಯ ಸಿಇಇ/ ಯೋಜನೆ/ನೈಋತ್ಯ ರೈಲ್ವೆ ವ್ಯಾಪ್ತಿಯಲ್ಲಿನ ಅರಸೀಕೆರೆ ಜಂಕ್ಷನ್ ನಿಲ್ದಾಣದಲ್ಲಿ ದುರಸ್ತಿ ಸೌಲಭ್ಯದ ಜೊತೆಗೆ ಟವರ್ ವ್ಯಾಗನ್ ಶೆಡ್, ಸೈಡಿಂಗ್, ಸಂಪರ್ಕ ರಸ್ತೆ ನಿರ್ಮಾಣ, ನೀರು ಮತ್ತು ಒಳಚರಂಡಿ ವ್ಯವಸ್ಥೆಗಳು ಮತ್ತು ಬಾಕಿ ಉಳಿದ / ವಿವಿಧ ಕಾಮಗಾರಿಗಳು	ರೂ. 5,40,06,155.82

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 10–12–2025 ರಂದು 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ್ಯ ಇಂಜಿನಿಯರ್ / ರೈಲ್ವೆ ವಿದ್ಯುದೀಕರಣ ಬೆಂಗಳೂರು
ಪಿಯುಬಿ/710/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2025–26
ಕಾಯ್ದಿರಿಸಿಲ್ಲದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆಪ್‌ನ್ನು ಡೌನ್‌ಲೋಡ್ ಮಾಡಿ
South Western Railway-SWR | SWRRLY | @SWRAILWAYHQ | @sw_railways

ನಿಧನ

ಶ್ರೀ ಕೆ.ಎಂ.ಗೋಪಾಲಕೃಷ್ಣ
ನಿವೃತ್ತ ಅಧಿಕಾರಿಗಳು-ಕೃಷಿ ಇಲಾಖೆ
ಲೇಟ್ ಪಟೇಲ್ ಮುನಿಬಚ್ಚಪ್ಪನವರ ಮಗ
ಕೇತಮಾರನಹಳ್ಳಿ, ಬೆಂಗಳೂರು
ಇವರು ದಿನಾಂಕ: 04.12.2025, ಗುರುವಾರ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅಂತ್ಯಕ್ರಿಯೆಯನ್ನು ದಿ: 05.12.2025 ಶುಕ್ರವಾರ, ಮ.1.00 ಗಂಟೆಗೆ ಹರಿಶ್ಚಂದ್ರಘಾಟ್, ರಾಜಾಜಿನಗರ, ಬೆಂಗಳೂರು ಇಲ್ಲಿ ನಡೆಸಲಾಗುವುದು.
ದುಃಖತಪ್ತರು: ಪತ್ನಿ, ಮತ್ತು ಮಕ್ಕಳು ಪಟೇಲ್ ಕುಟುಂಬದವರು ಹಾಗೂ ಮುನಿವೆಂಕಟಪ್ಪನವರ ಕುಟುಂಬದವರು
ಮೊ: 99014 95959 / 97313 55998

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ–562 101
ದೂರವಾಣಿ ಸಂಖ್ಯೆ: ಕಛೇರಿ: 08156–295427 ಫ್ಯಾಕ್ಸ್: 08156–295427
ಇಮೇಲ್:eemidcbpura@gmail.com
ಸಂಖ್ಯೆ : ಕಾಸಬ/ಸ.ನೀ ಮತ್ತು ಅ.ಅ.ವಿ/ಚಿ.ಪುರ/ತಾಂಶಾ/ತಾಂಸ/ಟೆಂಡರ್ ಪ್ರಕಟಣೆ /2098/2025–26 ದಿನಾಂಕ : 04/12/2025
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:20/2025–26/ದಿನಾಂಕ: 04/12/2025
ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ ರವರಿಂದ ಕೆಡಬ್ಲ್ಯೂ–2 ಮತ್ತು 3 ಟೆಂಡರ್ ಡಾಕ್ಯೂಮೆಂಟ್ ಅಳವಡಿಸಿಕೊಂಡು ಕೆಟಿಪಿಪಿ ನಿಯಮಾವಳಿ ಅನ್ವಯ ಎರಡು ಲಕೋಟೆ ಪದ್ಧತಿಯಲ್ಲಿ 4702 ವಿಶೇಷ ಘಟಕ ಯೋಜನೆ ಮತ್ತು 4702 ಗಿರಿಜನ ಉಪ ಯೋಜನೆ ಅಡಿಯಲ್ಲಿ ಟೆಂಡರ್ ಕರೆಯಲಾಗಿದೆ. ಗರಿಷ್ಠ ಅಂದಾಜು ಮೊತ್ತ 100.00 ಲಕ್ಷ ಮತ್ತು ಕನಿಷ್ಟ ಅಂದಾಜು ಮೊತ್ತ ರೂ. 50.00 ಲಕ್ಷ. ನಿಗಧಿತ ಇ.ಎಂ.ಡಿ ಮೊತ್ತವನ್ನು ಕೆಪಿಪಿ–ಪೋರ್ಟ್‌ಲ್‌ನಲ್ಲಿದ್ದಂತೆ ಸಲ್ಲಿಸುವುದು. ಟೆಂಡರ್ ಪ್ರೊಸೆಸ್ಸಿಂಗ್ ಫೀ ಕೆಪಿಪಿ–ಪೋರ್ಟ್‌ಲ್ ನಿಯಮಾನುಸಾರ, ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್‌ಸೈಟ್ www.kppp.karnataka.gov.inನಲ್ಲಿ ದಿನಾಂಕ: 04/12/2025ರ ಸಂಜೆ 04:30 ಗಂಟೆಯಿಂದ ಪಡೆಯಬಹುದು (Download). ಡಾಕ್ಯುಮೆಂಟ್‌ಗಳನ್ನು ಸಲ್ಲಿಸಲು ಕೊನೆಯ (Upload) ದಿನಾಂಕ: 12/12/2025 ಸಂಜೆ 04:30 ಗಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 15/12/2025 ರ ಬೆಳಿಗ್ಗೆ 11:00 ಗಂಟೆಯ ನಂತರ. ಮೇಲಿನ ವಿವರಗಳು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತವೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ www.kppp.karnataka.gov.in ಅಂತರ್ಜಲ ತಾಣದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು. ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ಅನುಮೋದಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.
ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ.

ಮಕ್ಕಳ ಜ್ಞಾನ ವೃದ್ಧಿಗೆ ಡಿಎಚ್‌ಐಇ ಸಹಕಾರಿ

ಅಂತರ ಶಾಲಾ ಸ್ಪರ್ಧೆಯಲ್ಲಿ 400ಕ್ಕೂ ಅಧಿಕ ವಿದ್ಯಾರ್ಥಿಗಳು ಭಾಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡೆಕ್ಕನ್ ಹೆರಾಲ್ಡ್ ಇನ್ ಎಜುಕೇಶನ್ (ಡಿಎಚ್‌ಐಇ) ಕಬ್ಬನ್ ಉದ್ಯಾನದಲ್ಲಿರುವ ಬಾಲಭವನದ ಆವರಣದಲ್ಲಿ ಆಯೋಜಿಸಿರುವ ಡಿಎಚ್‌ಐಇ ಎಕ್ಸ್‌ಪ್ರೆಷನ್ಸ್ ಅಂತರ ಶಾಲಾ 'ಸ್ಪೆಲ್ ಬೀ' ಹಾಗೂ 'ವರ್ಡ್ ವಿಂಡರ್' ಸ್ಪರ್ಧೆಯಲ್ಲಿ ಗುರುವಾರ ನೂರಾರು ಮಕ್ಕಳು ಭಾಗವಹಿಸಿದ್ದರು.

ಎರಡೂ ಸ್ಪರ್ಧೆಗಳು ಮಕ್ಕಳ ಪದಪುಂಜ ವೃದ್ಧಿಗೆ ಸಹಕಾರಿ ಆಗಿದ್ದವು. ನಗರದ ವಿವಿಧ ಶಾಲೆಗಳಿಂದ ಬಂದಿದ್ದ 400ಕ್ಕೂ ಹೆಚ್ಚು ವಿದ್ಯಾರ್ಥಿಗಳು ಈ ಸ್ಪರ್ಧೆಗಳಲ್ಲಿ ಪಾಲ್ಗೊಂಡಿದ್ದರು. ಕಿರಿಯರ ವಿಭಾಗ, ಹಿರಿಯರ ವಿಭಾಗದಲ್ಲಿ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಪ್ರತಿ ವಿಭಾಗದ ಸ್ಪರ್ಧೆ ವೇಳೆಯಲ್ಲೂ ನೆರೆದಿದ್ದ ವಿದ್ಯಾರ್ಥಿಗಳು, ಶಿಕ್ಷಕರು ಚಪ್ಪಾಳೆ ತಟ್ಟಿ ಹುರಿದುಂಬಿಸಿದರು.

ಸ್ಪೆಲ್ ಬೀ ಸ್ಪರ್ಧೆ: ಹಿರಿಯ ಮತ್ತು ಕಿರಿಯ ವಿಭಾಗದ ವಿದ್ಯಾರ್ಥಿಗಳಿಗೆ ಸೇಂಟ್ ಜೋಸೆಫ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಅರುಳ್‌ಮಣಿ ಅವರು ಸ್ಪೆಲ್ ಬೀ ಸ್ಪರ್ಧೆ ನಡೆಸಿಕೊಟ್ಟರು. ಅಂತಿಮ ಸುತ್ತಿಗೆ ಕಿರಿಯರ ವಿಭಾಗದಲ್ಲಿ ಏಳು ಮಕ್ಕಳು ಹಾಗೂ ಹಿರಿಯರ ವಿಭಾಗದಲ್ಲಿ ಆರು ವಿದ್ಯಾರ್ಥಿಗಳು ಆಯ್ಕೆಯಾಗಿದ್ದರು.

ಕಿರಿಯರ ವಿಭಾಗದ ಅಂತಿಮ ಸುತ್ತಿನಲ್ಲಿ ಒಂದು ಚಮಚದ ವಿವಿಧ ಭಾಗಗಳನ್ನು ಹೆಸರಿಸುವುದು, ಇಂಗ್ಲಿಷ್ ಪದವೊಂದರ ಸ್ಪೆಲಿಂಗ್ ಅನ್ನು ಹೇಳುವುದು, ಹಿರಿಯರ ವಿಭಾಗದಲ್ಲಿ ಕುದುರೆಯ ದೇಹದ ಭಾಗಗಳನ್ನು ಗುರುತಿಸುವುದು, ವಿವಿಧ ಪ್ರಾಣಿಗಳ ಹೆಸರು ಬರೆಯುವುದು ಹಾಗೂ ಪದವೊಂದರ ಸ್ಪೆಲಿಂಗ್ ಅನ್ನು ತಪ್ಪದೇ ಹೇಳುವುದು ಮಕ್ಕಳ ಬುದ್ಧಿಮತ್ತೆಗೆ ಸವಾಲು ಎಸೆದವು.

ವರ್ಡ್ ವಿಂಡರ್ ಸ್ಪರ್ಧೆ: 'ಶಾಲಾ ಮಕ್ಕಳ ಕಲಿಕೆಗಾಗಿ ಈ ಸ್ಪರ್ಧೆಯನ್ನು ರೂಪಿಸಲಾಗಿದೆ. ಶಬ್ದಗಳನ್ನು ಗುರುತಿಸುವ ಮೂಲಕ ಅವರ ಜ್ಞಾನವನ್ನ ಹೆಚ್ಚಿಸಿಕೊಳ್ಳಲು, ತಂಡವಾಗಿ ಹೇಗೆ ಕೆಲಸ ಮಾಡಬೇಕು ಎಂಬುದನ್ನು ಕಲಿತುಕೊಳ್ಳಲು ಹಾಗೂ ಸ್ಪರ್ಧಾ ಮನೋಭಾವನೆ ವೃದ್ಧಿಸಿಕೊಳ್ಳಲು ವರ್ಡ್ ವಿಂಡರ್ ಸ್ಪರ್ಧೆ ನೆರವಾಗಲಿದೆ' ಎಂದು ಸ್ಪರ್ಧೆಯನ್ನು ನಿರ್ವಹಿಸಿದ ಸಂಜಯ್ ಅವರು ತಿಳಿಸಿದರು.

ಈ ಕಾರ್ಯಕ್ರಮಕ್ಕೆ ಬಾಲಭವನ ಸೊಸೈಟಿಯ ಸಹಯೋಗವಿದೆ.

ಸ್ಪೆಲ್ ಬೀ ಸ್ಪರ್ಧೆಯ ವಿಜೇತರು

ಕಿರಿಯರ ವಿಭಾಗ

ಪ್ರಥಮ: ಧೃತಿ ಮಧುಕರ್, ನ್ಯಾಷನಲ್ ಪಬ್ಲಿಕ್ ಶಾಲೆ
₹18.60 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ಬೆಂಗಳೂರು: ಡ್ರಗ್ಸ್ ವಿರುದ್ಧ ನಗರದ ವಿವಿಧ ಠಾಣಾ ಪೊಲೀಸರು ಕಾರ್ಯಾಚರಣೆ ಮುಂದುವರಿಸಿದ್ದು, ಪ್ರತ್ಯೇಕ ಐದು ಪ್ರಕರಣಗಳಲ್ಲಿ ₹18.60 ಕೋಟಿ ಮೌಲ್ಯದ ಹೈಡ್ರೊಗಾಂಜಾ ಸೇರಿದಂತೆ ವಿವಿಧ ಮಾದರಿಯ ಡ್ರಗ್ಸ್ ಜಪ್ತಿ ಮಾಡಿದ್ದಾರೆ.

ಆರ್‌ಎಂಸಿ ಯಾರ್ಡ್, ಆರ್.ಟಿ. ನಗರ, ಜೆ.ಸಿ. ನಗರ, ಮಹಾಲಕ್ಷ್ಮಿ ಲೇಔಟ್ ಹಾಗೂ ಮಲ್ಲೇಶ್ವರ ಠಾಣೆಯ ಪೊಲೀಸರು, 10 ಮಂದಿ ಡ್ರಗ್ಸ್ ಪೆಡ್ಲರ್‌ಗಳನ್ನು ಬಂಧಿಸಿದ್ದಾರೆ.

ಮಹಾಲಕ್ಷ್ಮಿ ಲೇಔಟ್‌ನ ರಾಣಿ ಅಬ್ಬಕ್ಕ ಮೈದಾನದ ಬಳಿ ಮಹಿಳೆಯೊಬ್ಬರು ಹೈಡ್ರೊ ಗಾಂಜಾವನ್ನು ಕಾರಿನಲ್ಲಿ ಇಟ್ಟುಕೊಂಡು ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದರು. ಈ ವೇಳೆ ಪೊಲೀಸರು ಕಾರ್ಯಾಚರಣೆ ನಡೆಸಿ ಮಹಿಳೆಯನ್ನು ಬಂಧಿಸಿದ್ದಾರೆ.

ಬ್ಯಾಗ್‌ನಲ್ಲಿ ಗಾಂಜಾ ತಂದು ಮಾರಾಟಕ್ಕೆ ಯತ್ನಿಸುತ್ತಿದ್ದ ಆರೋಪಿಯನ್ನು ಆರ್‌ಎಂಸಿ ಯಾರ್ಡ್ ಪೊಲೀಸರು ಬಂಧಿಸಿದ್ದಾರೆ. ಆರೋಪಿಯಿಂದ 8 ಕೆ.ಜಿ. 350 ಗ್ರಾಂ ಗಾಂಜಾ ವಶಕ್ಕೆ ಪಡೆದುಕೊಂಡಿದ್ದಾರೆ.

ಜೆ.ಸಿ.ನಗರ ಪೊಲೀಸರು ಕಾರ್ಯಾಚರಣೆ ನಡೆಸಿ ವಿದೇಶಿ ಡ್ರಗ್ಸ್ ಪೆಡ್ಲರ್ ಬಂಧಿಸಿದ್ದಾರೆ. ಆರೋಪಿಯಿಂದ 21 ಗ್ರಾಂ ಎಂಡಿಎಂಎ ಕ್ರಿಸ್ಟಲ್ಸ್ ಜಪ್ತಿ ಮಾಡಿದ್ದಾರೆ.

ಪ್ರಸನ್ನ ಕುಮಾರ್ ವಿಶೇಷ ಪ್ರಾಸಿಕ್ಯೂಟರ್

ಬೆಂಗಳೂರು: ಪತ್ನಿಗೆ (ಡಾ.ಕೃತಿಕಾ ರೆಡ್ಡಿ) ಅನಸ್ತೇಶಿಯಾ ನೀಡಿ ಕೊಂದ ಆರೋಪ ಎದುರಿಸುತ್ತಿರುವ ಪತಿ ಡಾ. ಜಿ.ಎಸ್.ಮಹೇಂದ್ರ ರೆಡ್ಡಿ ವಿರುದ್ಧದ ಪ್ರಕರಣದಲ್ಲಿ ಹೈಕೋರ್ಟ್ ವಕೀಲ ಪಿ.ಪ್ರಸನ್ನ ಕುಮಾರ್ ಅವರನ್ನು ವಿಶೇಷ ಪ್ರಾಸಿಕ್ಯೂಟರ್ ಆಗಿ ನೇಮಕ ಮಾಡಲಾಗಿದೆ.

ಈ ನೇಮಕ ಕುರಿತಂತೆ ರಾಜ್ಯ ಗೃಹ ಇಲಾಖೆ ಬುಧವಾರ ಅಧಿಸೂಚನೆ ಹೊರಡಿಸಿದೆ. ಪಿ.ಪ್ರಸನ್ನ ಕುಮಾರ್ ಕರ್ನಾಟಕದ ಸಿಬಿಐ ಮತ್ತು ಎನ್‌ಐಎ ಪ್ರಾಸಿಕ್ಯೂಟರ್ ಕೂಡಾ ಆಗಿದ್ದಾರೆ.

₹1.75 ಕೋಟಿಯ ರಕ್ತಚಂದನ ಜಪ್ತಿ

ಮೂವರ ಬಂಧನ: ಆರ್.ಟಿ. ನಗರ, ಹುಳಿಮಾವು ಪೊಲೀಸರ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹುಳಿಮಾವು ಹಾಗೂ ಆರ್.ಟಿ.ನಗರ ಠಾಣೆಯ ಪೊಲೀಸರು ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಕಾರ್ಯಾಚರಣೆ ನಡೆಸಿ, ಅಕ್ರಮವಾಗಿ ರಕ್ತಚಂದನ ಮರದ ತುಂಡುಗಳನ್ನು ಮಾರಾಟ ಮಾಡುತ್ತಿದ್ದ ಮೂವರನ್ನು ಬಂಧಿಸಿದ್ದಾರೆ.

ಆರೋಪಿಗಳಿಂದ ₹1.75 ಕೋಟಿ ಮೌಲ್ಯದ 1,897 ಕೆ.ಜಿ ರಕ್ತಚಂದನದ ತುಂಡುಗಳನ್ನು ಜಪ್ತಿ ಮಾಡಿದ್ದಾರೆ.

ಥಣಿಸಂದ್ರದ ಅಹಮದ್ ಪಾಷಾ ಎಂಬಾತನನ್ನು ಹುಳಿಮಾವು ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಆಂಧ್ರಪ್ರದೇಶದ ರಾಜಶೇಖರ್ ಹಾಗೂ ವರಪ್ರಸಾದ್ ಎಂಬುವವರನ್ನು ಆರ್.ಟಿ.ನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ರಾಜಶೇಖರ್ ಹಾಗೂ ವರಪ್ರಸಾದ್ ಪದವೀಧರರು. ಉದ್ಯೋಗ ಹುಡುಕುವ ಬದಲು ಆಂಧ್ರಪ್ರದೇಶದ ಮದನಪಲ್ಲಿಯ ಸುಂಡೆಪಲ್ಲಿ ಬಳಿ ರಕ್ತಚಂದನ ಮರದ ತುಂಡುಗಳನ್ನು ಕಳ್ಳತನ ಮಾಡುತ್ತಿದ್ದರು. ನಂತರ, ರಕ್ತಚಂದನದ ತುಂಡುಗಳನ್ನು ಬೊಲೆರೊ ವಾಹನದಲ್ಲಿ ನಗರಕ್ಕೆ ತಂದು ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದರು. ಇಬ್ಬರಿಂದ ₹75 ಲಕ್ಷ ಮೌಲ್ಯದ 754 ಕೆ.ಜಿ ಮರದ ತುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಹುಳಿಮಾವು ಪೊಲೀಸರು ಬಂಧಿಸಿರುವ ಅಹಮದ್ ಪಾಷಾ ಎಂಬಾತ ಆಂಧ್ರಪ್ರದೇಶ ಕಡಪದಿಂದ ರಕ್ತಚಂದನ ತರಿಸಿಕೊಂಡು, ತಮಿಳುನಾಡಿಗೆ ಹೋಗಿ ಮಾರಾಟ ಮಾಡುತ್ತಿದ್ದ. ಈತನೊಂದಿಗೆ ಕೃತ್ಯದಲ್ಲಿ ಭಾಗಿಯಾಗಿದ್ದ ಬಾಲಕನನ್ನು ವಶಕ್ಕೆ ಪಡೆದು ಬಾಲಮಂದಿರಕ್ಕೆ ಕಳುಹಿಸಲಾಗಿದೆ.

ಕಡಿಮೆ ಬೆಲೆಗೆ ರಕ್ತಚಂದನ ಖರೀದಿಸಿ, ನಗರಕ್ಕೆ ತಂದು ನಂತರ ತಮಿಳುನಾಡಿಗೆ ಸಾಗಿಸಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದ. ಈ ಪ್ರಕರಣದಲ್ಲಿ ಆರೋಪಿಗಳಿಂದ ₹1 ಕೋಟಿ ಮೌಲ್ಯದ 1,143 ಕೆ.ಜಿ ರಕ್ತಚಂದನ, ಕೃತ್ಯಕ್ಕೆ ಬಳಸಿದ್ದ ಮೂರು ಕಾರುಗಳನ್ನು ಜಪ್ತಿ ಮಾಡಲಾಗಿದೆ ಎಂದು ಮೂಲಗಳು ಹೇಳಿವೆ.

ಆರೋಪಿಗಳಿಂದ ಜಪ್ತಿ ಮಾಡಿಕೊಂಡ ರಕ್ತಚಂದನ ಮರದ ತುಂಡುಗಳನ್ನು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಅವರು ಪರಿಶೀಲಿಸಿದರು

ಪತ್ನಿ ಕೊಂದು ಪತಿ ಆತ್ಮಹತ್ಯೆ

ಬೆಂಗಳೂರು: ಚಿಕ್ಕೇಗೌಡನ ಪಾಳ್ಯದಲ್ಲಿ ಪತ್ನಿಯನ್ನು ಕೊಂದು ಬಿಎಂಟಿಸಿ ನಿವೃತ್ತ ಚಾಲಕರೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಬೇಬಿ (60) ಕೊಲೆಯಾದವರು. ಕೃತ್ಯದ ಬಳಿಕ ವೆಂಕಟೇಶನ್ (65) ಅವರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ವೆಂಕಟೇಶನ್ ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಪುತ್ರಿ ಮದುವೆಯಾಗಿ ಪತಿ ಮನೆಯಲ್ಲಿ ನೆಲಸಿದ್ದಾರೆ. ಬೇಬಿ ದಂಪತಿ, ಮಗ ಮತ್ತು ಸೊಸೆಯ ಜತೆಗೆ ಬಾಡಿಗೆ ಮನೆಯಲ್ಲಿ ವಾಸ ಆಗಿದ್ದರು.

ವೆಂಕಟೇಶನ್ ಅವರು ಐದು ವರ್ಷಗಳ ಹಿಂದೆ ನಿವೃತ್ತರಾಗಿದ್ದರು. ಪತ್ನಿಯ ಆರೋಗ್ಯ ಸಮಸ್ಯೆಯಿಂದ ಬೇಸತ್ತಿದ್ದರು. ವೆಂಕಟೇಶನ್ ಅವರ ಮಗ ಮತ್ತು ಸೊಸೆ ಮಂಗಳವಾರ ಕೆಲಸಕ್ಕೆ ಹೋಗಿದ್ದರು. ಆಗ ಪತ್ನಿಯ ಕುತ್ತಿಗೆಗೆ ಬಿಗಿದು ಕೊಲೆ ಮಾಡಿದ್ದಾರೆ. ಸುಬ್ರಮಣ್ಯಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೇಂದ್ರ ಕಾರಾಗೃಹಕ್ಕೆ ಎನ್‌ಐಎ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಮೇಲೆ ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ಅಧಿಕಾರಿಗಳು ಹಾಗೂ ಸಿಬ್ಬಂದಿ ಗುರುವಾರ ದಾಳಿ ನಡೆಸಿ, ಉಗ್ರರನ್ನು ಇಟ್ಟಿರುವ ಬ್ಯಾರಕ್‌ಗಳಲ್ಲಿ ಪರಿಶೀಲನೆ ನಡೆಸಿ ಮಾಹಿತಿ ಕಲೆಹಾಕಿದರು.

ಇಸ್ಲಾಮಿಕ್ ಸ್ಟೇಟ್ (ಐ.ಎಸ್) ಭಯೋತ್ಪಾದಕ ಸಂಘಟನೆಯ ಉಗ್ರ ಜುಹಾದ್ ಹಮೀದ್ ಶಕೀಲ್ ಮನ್ನಾ ತಾನಿದ್ದ ಬ್ಯಾರಕ್‌ನಲ್ಲಿ ಮೊಬೈಲ್ ಹಿಡಿದು ಮಾತನಾಡುತ್ತಿದ್ದ ವಿಡಿಯೊವೊಂದು ಇತ್ತೀಚೆಗೆ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು. ಆ ಪ್ರಕರಣಕ್ಕೆ ಸಂಬಂಧಿಸಿದಂತೆ ಕಳೆದ ವಾರವೂ ಜೈಲಿಗೆ ಭೇಟಿ ನೀಡಿದ್ದ ಎನ್‌ಐಎ ಅಧಿಕಾರಿಗಳು, ಪ್ರಾಥಮಿಕ ಮಾಹಿತಿ ಕಲೆ ಹಾಕಿದ್ದರು. ಗುರುವಾರ ಬೆಳಿಗ್ಗೆಯೂ ಭೇಟಿ ನೀಡಿ, ಉಗ್ರ ಶಕೀಲ್ ಮನ್ನಾನನ್ನು ವಿಚಾರಣೆಗೆ ಒಳಪಡಿಸಿದ್ದಾರೆ ಎಂದು ಗೊತ್ತಾಗಿದೆ.

ಶಕೀಲ್ ಮನ್ನಾ

ಬ್ಯಾರಕ್‌ಗೆ ಮೊಬೈಲ್ ತಂದುಕೊಟ್ಟವರು ಯಾರು? ಮೊಬೈಲ್‌ನಲ್ಲಿ ಯಾರ ಜತೆಗೆ ಮಾತನಾಡುತ್ತಿದ್ದ? ಎಷ್ಟು ದಿನದಿಂದ ಮೊಬೈಲ್ ಬಳಸುತ್ತಿದ್ದ ಎಂಬ ಪ್ರಶ್ನೆಗಳನ್ನು ಕೇಳಿ ಉಗ್ರನಿಂದ ಎನ್‌ಐಎ ಅಧಿಕಾರಿಗಳು ಮಾಹಿತಿ ಪಡೆದುಕೊಂಡಿದ್ದಾರೆ ಎಂಬುದು ಗೊತ್ತಾಗಿದೆ.

‘ತನ್ನ ಸಹಚರರ ಜತೆಗೆ ಉಗ್ರ ಸಂಪರ್ಕದಲ್ಲಿರುವ ಅನುಮಾನ ಇದೆ. ಮೊಬೈಲ್ ಕರೆಗಳ ವಿವರ ಪರಿಶೀಲನೆ ನಡೆಸಲಾಗುತ್ತಿದೆ’ ಎಂದು ಮೂಲಗಳು ಹೇಳಿವೆ.

ಅತ್ಯಾಚಾರ, ಸರಣಿ ಕೊಲೆಯ ಪಾತಕಿ ಉಮೇಶ್ ರೆಡ್ಡಿ, ದುಬೈನಿಂದ ಚಿನ್ನ ಕಳ್ಳಸಾಗಣೆ ಮಾಡಿದ ಪ್ರಕರಣದ ಆರೋಪಿ ತರುಣ್ ರಾಜ್ ಸಹ ಬ್ಯಾರಕ್‌ನಲ್ಲಿ ಮೊಬೈಲ್ ಹಿಡಿದು ಮಾತನಾಡಿದ್ದ ಹಾಗೂ ಟಿ.ವಿ ವೀಕ್ಷಣೆ ಮಾಡುತ್ತಿದ್ದ ವಿಡಿಯೊಗಳೂ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದವು. ಮಾಂಸ, ಮದ್ಯ ಸೇವಿಸಿ ಜೈಲಿನಲ್ಲಿ ವಿಚಾರಣಾಧೀನ ಕೈದಿಗಳು ನೃತ್ಯ ಮಾಡಿದ್ದ ಮತ್ತೊಂದು ವಿಡಿಯೊ ಸಹ ಹರಿದಾಡಿತ್ತು. ಮೂರೂ ಘಟನೆಗಳ ಸಂಬಂಧ ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದ್ದು, ವಿಡಿಯೊದಲ್ಲಿ ಕಾಣಿಸಿಕೊಂಡಿದ್ದ ವಿಚಾರಣಾಧೀನ ಕೈದಿಗಳು ಹಾಗೂ ಸಜಾಬಂದಿಗಳನ್ನು ಪೊಲೀಸರು ವಿಚಾರಣೆ ನಡೆಸಿದ್ದರು. ರಾಜ್ಯ ಸರ್ಕಾರವು ಉನ್ನತಮಟ್ಟದ ತನಿಖೆಗೆ ಸಮಿತಿ ರಚಿಸಿದೆ. ಇದೀಗ ಎನ್‌ಐಎ ಸಹ ತನಿಖೆ ಆರಂಭಿಸಿದೆ.

Banking Partner SBI | Refreshment Partner Mogu Mogu | Special Partner BHIMA | Nutrition Partner ನಂದಿನಿ | Associate Sponsors ಪೂರ್ವಿಕಾ, VIPS, talent sprint, ICS MAHESH PU COLLEGE
Associate Sponsors SIDDAGANGA, ಮಾರ್ಗದರ್ಶಿ | TV partner asianet ಸುವರ್ಣ ನ್ಯೂಸ್ | Knowledge partner QURIOSITY

ರೇಣುಕಸ್ವಾಮಿ ಪೋಷಕರಿಗೆ ಸಮನ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಡಿ.17ರಂದು ನಡೆಯುವ ವಿಚಾರಣೆ ವೇಳೆ ಹಾಜರಿರುವಂತೆ ಸೂಚಿಸಿ ಮೃತನ ತಂದೆ ಹಾಗೂ ತಾಯಿ (ಸಾಕ್ಷಿ ಸಂಖ್ಯೆ 7 ಹಾಗೂ 8) ಅವರಿಗೆ ಇಲ್ಲಿನ 57ನೇ ಎಸಿಎಂಎಂ ನ್ಯಾಯಾಲಯವು ಸಮನ್ಸ್ ಜಾರಿಗೊಳಿಸಿದೆ.

‘ಸಮನ್ಸ್ ಜಾರಿಗೊಳಿಸಬೇಕು’ ಎಂದು ಕೋರಿ ತನಿಖಾಧಿಕಾರಿಗಳ ಪರವಾಗಿ ವಕೀಲರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಾಲಯ ಮಾನ್ಯ ಮಾಡಿದೆ.

ಪ್ರಕರಣದ ಒಟ್ಟು 272 ಸಾಕ್ಷಿಗಳ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ ಸಹಾಯಕ ಪ್ರಾಸಿಕ್ಯೂಟರ್ (ಎಪಿಪಿ) ಸಚಿನ್ ಅವರು ಪ್ರಮುಖ ಸಾಕ್ಷಿಗಳಾಗಿರುವ ರೇಣುಕಸ್ವಾಮಿ ಅವರ ತಂದೆ–ತಾಯಿಯನ್ನು ಪಾಟಿ ಸವಾಲಿಗೆ ಒಳಪಡಿಸಬೇಕಿದೆ ಎಂದು ಕೋರಿದ್ದರು. ಪವಿತ್ರಾಗೌಡ, ನಟ ದರ್ಶನ್ ಸೇರಿದಂತೆ ಇತರೆ ಆರೋಪಿಗಳ ಪರ ವಕೀಲರು ಈ ಮನವಿಗೆ ಆಕ್ಷೇಪಿಸಿದ್ದರು. ದರ್ಶನ್ ಪರ ವಕೀಲ ಸುನಿಲ್ ಅವರು ಸಲ್ಲಿಸಿದ್ದ ಅರ್ಜಿಯನ್ನು ಕೋರ್ಟ್ ವಜಾಗೊಳಿಸಿದೆ.

ದರ್ಶನ್

ರೇಣುಕಾಸ್ವಾಮಿ

ಪ್ರದೋಷ್‌ಗೆ ಮಧ್ಯಂತರ ಜಾಮೀನು: ಪ್ರಕರಣದ 14ನೇ ಆರೋಪಿಯಾದ ಪ್ರದೋಷ್ ಅವರಿಗೆ ನ್ಯಾಯಾಲಯವು ನಾಲ್ಕು ದಿನಗಳ ಮಧ್ಯಂತರ ಜಾಮೀನು ಮಂಜೂರು ಮಾಡಿದೆ.

ಅನಾರೋಗ್ಯದಿಂದ ಬಳಲುತ್ತಿದ್ದ ಪ್ರದೋಷ್ ಅವರ ತಂದೆ ಸುಬ್ಬರಾವ್ ಇತ್ತೀಚೆಗೆ ನಿಧನರಾಗಿದ್ದರು. ತಂದೆಯ ತಿಂಗಳ ತಿಥಿ ಕಾರ್ಯಕ್ಕೆಂದು ಪ್ರದೋಷ್ ಅವರಿಗೆ ಡಿ.4ರಿಂದ ಡಿ.7ರ ವರೆಗೆ ಜಾಮೀನು ನೀಡಲಾಗಿದೆ. ಈ ಹಿಂದೆ ಅಂತ್ಯಸಂಸ್ಕಾರ ಹಾಗೂ ಇತರೆ ಕಾರ್ಯಗಳನ್ನು ನಡೆಸಲು 20 ದಿನಗಳ ಮಧ್ಯಂತರ ಜಾಮೀನು ನೀಡಿತ್ತು.

ದರ್ಶನ್ ಬ್ಯಾರಕ್‌ಗೆ ಟಿ.ವಿ

ಬುಧವಾರ ನಡೆದ ವಿಚಾರಣೆ ವೇಳೆ ದರ್ಶನ್ ಅವರು, ‘ಬ್ಯಾರಕ್‌ನಲ್ಲಿ ಟಿ.ವಿ ಇಲ್ಲ. ಟಿ.ವಿ ಸೌಲಭ್ಯ ಕಲ್ಪಿಸಲು ಜೈಲಿನ ಅಧಿಕಾರಿಗಳಿಗೆ ಆದೇಶಿಸಬೇಕು’ ಎಂದು ಕೋರಿದ್ದರು. ಈ ಸಂಬಂಧ ವಿಚಾರಣೆ ನಡೆಸಿದ ನ್ಯಾಯಾಲಯವು ದರ್ಶನ್ ಇರುವ ಬ್ಯಾರಕ್‌ಗೆ ಟಿ.ವಿ ಅಳವಡಿಸುವಂತೆ ಮತ್ತು ಟಿ.ವಿ ಅಳವಡಿಕೆ ಮಾಡುವ ಸ್ಥಳದಲ್ಲಿ ಸಿ.ಸಿ ಟಿವಿ ಕ್ಯಾಮೆರಾ ಸಹ ಹಾಕುವಂತೆ ಜೈಲಿನ ಅಧಿಕಾರಿಗಳಿಗೆ ಸೂಚಿಸಿತು.

28 ಸಿಮ್ ಬಾಕ್ಸ್, 1,193 ಸಿಮ್ ಕಾರ್ಡ್ ಜಪ್ತಿ

ಜಪ್ತಿ ಮಾಡಿಕೊಂಡ ಸಿಮ್ ಹಾಗೂ ಲ್ಯಾಪ್‌ಟಾಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತರರಾಷ್ಟ್ರೀಯ ಕರೆಗಳನ್ನು ಸ್ಥಳೀಯ ಕರೆಗಳಾಗಿ ಪರಿವರ್ತಿಸುತ್ತಿದ್ದ ಕೇಂದ್ರವೊಂದರ ಮೇಲೆ ಸಿಸಿಬಿ ಪೊಲೀಸರು ದಾಳಿ ನಡೆಸಿ ₹40 ಲಕ್ಷ ಮೌಲ್ಯದ ಪರಿಕರ ಜಪ್ತಿ ಮಾಡಿದ್ದಾರೆ.

28 ಸಿಮ್ ಬಾಕ್ಸ್‌ಗಳು, ವಿವಿಧ ಕಂಪನಿಗಳ 1,193 ಸಿಮ್ ಕಾರ್ಡ್‌ಗಳು, 1 ಲ್ಯಾಪ್‌ಟಾಪ್, 3 ರೂಟರ್ ಸೇರಿದಂತೆ ಹಲವು ಉಪಕರಣ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಎಲೆಕ್ಟ್ರಾನಿಕ್ ಸಿಟಿಯ ಎರಡನೇ ಹಂತದ ನಾಯ್ಡು ಲೇಔಟ್‌ನಲ್ಲಿರುವ ಕಟ್ಟಡವೊಂದರ ನಾಲ್ಕನೇ ಮಹಡಿಯಲ್ಲಿ ಆರೋಪಿಗಳು ಮನೆ ಬಾಡಿಗೆ ಪಡೆದು ಕೃತ್ಯ ಎಸಗುತ್ತಿದ್ದರು. ಆರೋಪಿಗಳು ತಲೆಮರೆಸಿಕೊಂಡಿದ್ದು ಹುಡುಕಾಟ ನಡೆಸಲಾಗುತ್ತಿದೆ ಎಂದು ಮೂಲಗಳು ಹೇಳಿವೆ.

ಮಿನಿ ಟೆಲಿಫೋನ್ ಎಕ್ಸ್‌ಚೇಂಜ್ ರೀತಿಯಲ್ಲಿ ಅಂತರರಾಷ್ಟ್ರೀಯ ಕರೆಗಳನ್ನು ಸ್ಥಳೀಯ ಕರೆಗಳನ್ನಾಗಿ ಪರಿವರ್ತಿಸಲಾಗುತಿತ್ತು. ಪೊಲೀಸರು ವಶಕ್ಕೆ ಪಡೆದಿರುವ 1,193 ಸಿಮ್ ಕಾರ್ಡ್‌ಗಳಲ್ಲಿ ಕೆಲವು ಸಿಮ್‌ಗಳನ್ನು ಸೈಬರ್ ಅಪರಾಧ, ವಂಚನೆ ಪ್ರಕರಣಗಳಲ್ಲಿ ಬಳಸಿಕೊಂಡಿರುವ ಶಂಕೆ ವ್ಯಕ್ತವಾಗಿದೆ.

ಒಂದು ವರ್ಷದಿಂದ ಆರೋಪಿಗಳು ಈ ದಂಧೆ ನಡೆಸುತ್ತಿದ್ದರು. ದೂರಸಂಪರ್ಕ ಇಲಾಖೆಗೆ ಆರ್ಥಿಕ ನಷ್ಟ ಉಂಟು ಮಾಡುತ್ತಿರುವುದು ಹಾಗೂ ದೇಶದ ಭದ್ರತೆಗೆ ಅಪಾಯ ಉಂಟು ಮಾಡುತ್ತಿದ್ದ ಸಂಗತಿ ತನಿಖೆಯಿಂದ ಗೊತ್ತಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಅವರು ತಿಳಿಸಿದರು.

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೬೦ | ಬೆಂಗಳೂರು, ಬುಧವಾರ ೦೩ ಡಿಸೆಂಬರ್, ೨೦೨೫ (ಮಾರ್ಗಶಿರಾ, ೧೨ ಶಕವರ್ಷ, ೧೯೪೭) | ಸಂಚಿಕೆ ೨೩೦
Volume 160 | BENGALURU, WEDNESDAY 03, DECEMBER, 2025 (MARGASHIRA, 12, SHAKAVARSHA, 1947) | Issue 230

ಭಾಗ 3
ಸರ್ಕಾರದ ಆಯಾ ಇಲಾಖೆಗಳ ಮುಖ್ಯಸ್ಥರ ಮತ್ತು ಸ್ಥಳೀಯ ಪ್ರಾಧಿಕಾರಿಗಳಿಗೆ ಸಂಬಂಧಿಸಿದ ಅಧಿಸೂಚನೆಗಳು
ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

ನಮೂನೆ–V
ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು.
[ಕರ್ನಾಟಕ ತಿದ್ದುಪಡಿ ನಿಯಮ–5, 20(1) (ಬಿ)]

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ–2013ರ ಕಲಂ–11(1)ರ ಮೇರೆಗೆ ಅಧಿಸೂಚನೆ

ಕಗೃಮಂ/ಭೂಸ್ವಾವಿ/ಬೆಂಗಳೂರು/73/2025–26 ದಿನಾಂಕ: 01/12/2025

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತುಪುನರ್ ನಿರ್ಮಾಣ ಕಾಯ್ದೆ–2013ರ ಕಲಂ – 11(1)ರ ಮೇರೆಗೆ ಹೊರಡಿಸಲಾದ ಅಧಿಸೂಚನೆಗೆ ತಿದ್ದುಪಡಿ ಪ್ರಕಟಣೆ ಸಂಖ್ಯೆ: ಕಗೃಮಂ/ಭೂಸ್ವಾವಿ/ಬೆಂಗಳೂರು/73/2025–26 ದಿನಾಂಕ: 27–11–2025ರ ಮೇರೆಗೆ ಹೊರಡಿಸಲಾದ ಅಧಿಸೂಚನೆಯು ದಿನಾಂಕ: 28–11–2025ರ ಕರ್ನಾಟಕ ರಾಜ್ಯ ಪತ್ರದ ಭಾಗ ಸಂಖ್ಯೆ: 3ರ ಪುಟ ಸಂಖ್ಯೆ: 11402 ರಿಂದ 11405ರವರೆಗೆ ಪ್ರಕಟವಾಗಿದ್ದು, ಈ ಅಧಿಸೂಚನೆಗೆ ಈ ಕೆಳಕಡಂತೆ ತಿದ್ದುಪಡಿ ಅಧಿಸೂಚನೆ ಹೊರಡಿಸಲಾಗಿದೆ.

ಪ್ಯಾರಾ ಸಂಖ್ಯೆ:	ಈಗಾಗಲೇ ಪ್ರಕಟವಾಗಿರುವ ನಮೂದು	ಬದಲಾಗಿ ಓದಿಕೊಳ್ಳಬೇಕಾಗಿರುವ ತಿದ್ದುಪಡಿ ನಮೂದು
1 (1ನೇ ಸಾಲು)	ಸಾರ್ಜಜನಿಕ	ಸಾರ್ವಜನಿಕ
1 (6 & 7ನೇ ಸಾಲು)	ಮೂಲ ಕಾಯ್ದೆಯ ಅಧ್ಯಾಯ II & III ರಲ್ಲಿನ ಉಪನಿಭಂಧನೆಗಳು ಅನ್ವಯಿಸಿರುವುದರಿಂದ ಸರ್ಕಾರದ ಸಂಖ್ಯೆ: ಆರ್.ಡಿ. 134 ಎಕ್ಯೂಬಿ 2015 ದಿನಾಂಕ: 08.09.2025ರಂತೆ ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಈ ಅಧಿಸೂಚನೆಯನ್ನು ದಿನಾಂಕ: 18.09.2025ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾಗಿರುತ್ತದೆ.	ಮೂಲ ಕಾಯ್ದೆಯ ಅಧ್ಯಾಯ II & III ರಲ್ಲಿನ ಉಪನಿಭಂಧನೆಗಳು ಅನ್ವಯಿಸಿರುವುದರಿಂದ ವಿನಾಯಿತಿ ನೀಡಿ ಸರ್ಕಾರದ ಸಂಖ್ಯೆ: ಆರ್.ಡಿ. 134 ಎಕ್ಯೂಬಿ 2015 ದಿನಾಂಕ: 08.09.2025ರಂತೆ ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಈ ಅಧಿಸೂಚನೆಯನ್ನು ದಿನಾಂಕ: 18.09.2025ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾಗಿರುತ್ತದೆ.

ಸಹಿ/–
ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

ಬೆಂಗಳೂರು, ಬುಧವಾರ ೦೩ ಡಿಸೆಂಬರ್, ೨೦೨೫ (ಮಾರ್ಗಶಿರಾ, ೧೨ ಶಕವರ್ಷ, ೧೯೪೭)
BENGALURU, WEDNESDAY 03, DECEMBER, 2025 (MARGASHIRA, 12, SHAKAVARSHA, 1947)

ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

ಕಗೃಮಂ/ಭೂಸ್ವಾವಿ/ಬೆಂಗಳೂರು/74/2025–26 ದಿನಾಂಕ: 01/12/2025
ಅಧಿಸೂಚನೆ
ನಮೂನೆ–V
[ಕರ್ನಾಟಕ ತಿದ್ದುಪಡಿ ನಿಯಮ–5, 20(1) (ಬಿ)]

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತುಪುನರ್ ನಿರ್ಮಾಣ ಕಾಯ್ದೆ–2013ರ ಕಲಂ – 11(1)ರ ಮೇರೆಗೆ ಹೊರಡಿಸಲಾದ ಅಧಿಸೂಚನೆಗೆ ತಿದ್ದುಪಡಿ ಪ್ರಕಟಣೆ ಸಂಖ್ಯೆ: ಕಗೃಮಂ/ಭೂಸ್ವಾವಿ/ಬೆಂಗಳೂರು/74/2025–26 ದಿನಾಂಕ: 27–11–2025ರ ಮೇರೆಗೆ ಹೊರಡಿಸಲಾದ ಅಧಿಸೂಚನೆಯು ದಿನಾಂಕ: 28–11–2025ರ ಕರ್ನಾಟಕ ರಾಜ್ಯ ಪತ್ರದ ಭಾಗ ಸಂಖ್ಯೆ: 3ರ ಪುಟ ಸಂಖ್ಯೆ: 11406 ರಿಂದ 11408ರವರೆಗೆ ಪ್ರಕಟವಾಗಿದ್ದು, ಈ ಅಧಿಸೂಚನೆಗೆ ಈ ಕೆಳಕಡಂತೆ ತಿದ್ದುಪಡಿ ಅಧಿಸೂಚನೆ ಹೊರಡಿಸಲಾಗಿದೆ.

ಪ್ಯಾರಾ ಸಂಖ್ಯೆ:	ಈಗಾಗಲೇ ಪ್ರಕಟವಾಗಿರುವ ನಮೂದು	ಬದಲಾಗಿ ಓದಿಕೊಳ್ಳಬೇಕಾಗಿರುವ ತಿದ್ದುಪಡಿ ನಮೂದು
1 (1ನೇ ಸಾಲು)	ಸಾರ್ಜಜನಿಕ	ಸಾರ್ವಜನಿಕ
1 (6 & 7ನೇ ಸಾಲು)	ಮೂಲ ಕಾಯ್ದೆಯ ಅಧ್ಯಾಯ II & III ರಲ್ಲಿನ ಉಪನಿಭಂಧನೆಗಳು ಅನ್ವಯಿಸಿರುವುದರಿಂದ ಸರ್ಕಾರದ ಸಂಖ್ಯೆ: ಆರ್.ಡಿ. 134 ಎಕ್ಯೂಬಿ 2015 ದಿನಾಂಕ: 08.09.2025ರಂತೆ ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಈ ಅಧಿಸೂಚನೆಯನ್ನು ದಿನಾಂಕ: 18.09.2025ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾಗಿರುತ್ತದೆ.	ಮೂಲ ಕಾಯ್ದೆಯ ಅಧ್ಯಾಯ II & III ರಲ್ಲಿನ ಉಪನಿಭಂಧನೆಗಳು ಅನ್ವಯಿಸಿರುವುದರಿಂದ ವಿನಾಯಿತಿ ನೀಡಿ ಸರ್ಕಾರದ ಸಂಖ್ಯೆ: ಆರ್.ಡಿ. 134 ಎಕ್ಯೂಬಿ 2015 ದಿನಾಂಕ: 08.09.2025ರಂತೆ ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಈ ಅಧಿಸೂಚನೆಯನ್ನು ದಿನಾಂಕ: 18.09.2025ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾಗಿರುತ್ತದೆ.

ಸಹಿ/–
ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

Page-2
ವಾಸಾಸಂಇ/ವಾಪ್ರ/ಜಿಎ/4204/2025–26

ಪಟ್ಟಣ ಪಂಚಾಯಿತಿ ಕಾರ್ಯಾಲಯ, ದೊಡ್ಡತೋಗೂರು

ಬೇಗೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ – 560 100
e-Mail:ka.doddathoguru.tp@gmail.com | Web: www.doddathoguru.mrc.gov.in

ಸಂ: ದೊಪಪಂ/ಇಶಾ/ಟೆಂಡರ್/01/2025–26 ದಿನಾಂಕ:03.12.2025

ಸಾರ್ವಜನಿಕ ಪ್ರಕಟಣೆ

ದೊಡ್ಡತೋಗೂರು ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿನ ಖಾಸಗಿ ಹಾಗೂ ಸರ್ಕಾರಿ ಶಿಕ್ಷಣ ಸಂಸ್ಥೆಗಳು ಖಾಸಗಿ ಹಾಗೂ ಸರ್ಕಾರಿ ಆಸ್ಪತ್ರೆಗಳ, ಬಸ್ ನಿಲ್ದಾಣಗಳ ಮುಖ್ಯಸ್ಥರಿಗೆ ಈ ಮೂಲಕ ತಿಳಿಸುವುದೇನೆಂದರೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸ್ವಯಂ ಪ್ರೇರಿತ ರಿಟ್ ಅರ್ಜಿ ಸಂಖ್ಯೆ 5/2025 ರಲ್ಲಿ ನೀಡಿರುವ ನಿರ್ದೇಶನದಂತೆ ತಮ್ಮ ಸಂಸ್ಥೆಯ ಆವರಣದಲ್ಲಿ ಯಾವುದೇ ಬೀದಿ ನಾಯಿಗಳು ವಾಸವಿದ್ದಲ್ಲಿ ಅದನ್ನು ಪರಿಶೀಲಿಸಿ ಕೂಡಲೇ ಅದರ ಸಂಖ್ಯೆಯನ್ನು ಲೆಕ್ಕ ಮಾಡಿ ಪಟ್ಟಣ ಪಂಚಾಯಿತಿಗೆ ವರದಿ ನೀಡುವುದು. (1) ತಮ್ಮ ಸಂಸ್ಥೆಯ ಆವರಣದಲ್ಲಿ ಬೀದಿ ನಾಯಿಗಳ ಉಪಟಳ ತಡೆಯಲು ಹಾಗೂ ಅವುಗಳ ಪ್ರದೇಶ ನಿಯಂತ್ರಿಸಲು ಕ್ರಮ ವಹಿಸುವುದು. (2) ನಗರ ಸ್ಥಳೀಯ ಸಂಸ್ಥೆಯಿಂದ ಬೀದಿ ನಾಯಿಗಳನ್ನು ಸ್ಥಳಾಂತರಿಸಲು ಸಹಕರಿಸಲು ಹಾಗೂ ಅವುಗಳ ಪ್ರವೇಶ ನಿರ್ಭಂದಿಸುವದನ್ನು ಮೇಲ್ವಿಚಾರಣೆ ಮಾಡಲು ತಮ್ಮ ಸಂಸ್ಥೆ ವತಿಯಿಂದ ಒಬ್ಬ ಜವಾಬ್ದಾರಿಯುತ ನೌಕರರನ್ನು ನೋಡಲು ಅಧಿಕಾರಿಯಾಗಿ ನೇಮಕ ಮಾಡುವುದು (3) ಮಾನ್ಯ ಸರ್ವೋಚ್ಚ ನ್ಯಾಯಲಯದ ನಿರ್ದೇಶನದಂತೆ ತಮ್ಮ ಸಂಸ್ಥೆಯ ವ್ಯಾಪ್ತಿಯಲ್ಲಿ ಪುನಃ ನಾಯಿಗಳು ವಾಸ ಮಾಡಲು ಅವಕಾಶ ಕೊಟ್ಟಲ್ಲಿ ಅವನ್ನು ಸ್ಥಳಾಂತರಿಸುವ ವೆಚ್ಚವನ್ನು ತಮ್ಮ ಸಂಸ್ಥೆಯಿಂದ ವಸೂಲಿ ಮಾಡಲಾಗುವುದು (4) ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶ ಉಲ್ಲಂಘನೆ ಮಾಡಿದ್ದಲ್ಲಿ ನ್ಯಾಯಾಲಯದ ಆದೇಶದಂತೆ ತಮ್ಮ ವಿರುದ್ಧ ಕಾನೂನು ಕ್ರಮ ವಹಿಸಲಾಗುವುದು.

ಸಹಿ/–
ಮುಖ್ಯಾಧಿಕಾರಿ
ಪಟ್ಟಣ ಪಂಚಾಯಿತಿ, ದೊಡ್ಡತೋಗೂರು

ವಾಸಾಸಂಇ/ವಾಪ್ರ/ಜಿಎ/4201/2025–26

ಬೆಂಗಳೂರು ಕೇಂದ್ರ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಚೇರಿ, ಗಾಂಧಿನಗರ ವಿಭಾಗ,
2ನೇ ಮಹಡಿ, ಬಿಎಂಪಿ ಕಾಂಪ್ಲೆಕ್ಸ್, ಧನ್ವಂತರಿ ರಸ್ತೆ, ಬೆಂಗಳೂರು–560009.

ಸಂಖ್ಯೆ: ಕಾಪಾಅ/ಗಾಂಧಿನಗರ/ಟೆಂಡರ್/ಇ–ಪ್ರೊಕ್/007/2025–26 ದಿನಾಂಕ: 04–12–2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ಜಿಓಕೆ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)
ಕಾರ್ಯಪಾಲಕ ಅಭಿಯಂತರರು, ಗಾಂಧಿನಗರ ವಿಭಾಗ, ಬಿಸಿಸಿಸಿ, ಬೆಂಗಳೂರು ಇವರು ಆಯುಕ್ತರು, ಬಿಸಿಸಿಸಿ ಇವರ ಪರವಾಗಿ ಈ ಕೆಳಕಂಡ ಕಾಮಗಾರಿಗಾಗಿ ಬಿಸಿಸಿಸಿ ಅಥವಾ ಸಿಪಿಡಬ್ಲ್ಯೂಡಿ/ಕೆಪಿಡಬ್ಲ್ಯೂಡಿ/ರೈಲ್ವೇಸ್/ ಎಂಇಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೊಂದಾಯಿತಗೊಂಡ ಅರ್ಹ ಗುತ್ತಿಗೆದಾರರಿಂದ ಐಟಂ ದರದ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1	ಗಾಂಧಿನಗರ ವಿಭಾಗದಲ್ಲಿ ದಟ್ಟಣೆಯನ್ನು ಕಡಿಮೆಗೊಳಿಸಿ, ಗಾಳಿಯ ಹರಿವು ಸುಧಾರಿಸಿ, ಹಸಿರುಮಯವನ್ನಾಗಿಸಲು ಮುಖ್ಯ ಮತ್ತು ಉಪ ಮುಖ್ಯ ರಸ್ತೆಗಳ ಮಾರ್ಗವಾಗಿ ಸಂಚಾರಿ ಜಂಕ್ಷನ್‌ಗಳ ಸುಧಾರಣೆ ಕಾಮಗಾರಿಗಾಗಿ ಡಿಪಿಆರ್ ತಯಾರಿಸಲು ಸಮಾಲೋಚನಾ ಸೇವೆಗಳನ್ನು ಒದಗಿಸುವುದು.
	ಯೋಜನಾ ಮೊತ್ತ : **ರೂ. 1320.00 ಲಕ್ಷಗಳು**. ಇಎಂಡಿ: **ರೂ. 1,30,000/–**. ಕಾಮಗಾರಿ ಪೂರ್ಣಗೊಳಿಸಲು ನಿಗದಿಪಡಿಸಿದ ಕಾಲಾವಧಿ: **28 ದಿನಗಳು**.

ಟೆಂಡರ್ ದಿನಾಂಕಗಳು : (1) ಆರ್‌ಎಫ್‌ಪಿ ದಾಖಲೆಗಳನ್ನು ಕೆಪಿಪಿ ಪೋರ್ಟಲ್ **https://kppp.karnataka.gov.in**ನಿಂದ **ದಿನಾಂಕ: 08.12.2025ರಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಪೂರ್ವ–ಬಿಡ್ ಸಭೆಯ ದಿನಾಂಕ: **13.12.2025ರಂದು ಸಂಜೆ 4.00 ಗಂಟೆಗೆ.** (3) ಪೂರ್ಣಗೊಂಡ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **15.12.2025ರ ಸಂಜೆ 4.30 ಗಂಟೆ ಮುಂಚಿತವಾಗಿ.** (4) ತಾಂತ್ರಿಕ ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕ: **17.12.2025ರಂದು ಮಧ್ಯಾಹ್ನ 12.30 ಗಂಟೆಗೆ.** (5) ಆರ್ಥಿಕ ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕ: **ತಾಂತ್ರಿಕ ಪ್ರಸ್ತಾವನೆಗಳ ಅನುಮೋದನೆಯ ನಂತರ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ಕೆಪಿಪಿ ಪೋರ್ಟಲ್ **https://kppp.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಗಾಂಧಿನಗರ ವಿಭಾಗ, ಬಿಸಿಸಿಸಿ

ಹಾನಿಕಾರಕ ಸರಕುಗಳ ಮೇಲೆ ಸೆಸ್

ಆರೋಗ್ಯ, ರಾಷ್ಟ್ರೀಯ ಭದ್ರತಾ ಸೆಸ್ ಮಸೂದೆ ಮಂಡನೆ • ರಾಜ್ಯಗಳ ಜತೆ ಆದಾಯ ಹಂಚಿಕೆ

ನಿರ್ಮಲಾ ಸೀತಾರಾಮನ್

ನವದೆಹಲಿ (ಪಿಟಿಐ): ಆರೋಗ್ಯಕ್ಕೆ ಹಾನಿಕಾರಕ ಎಂದು ಪರಿಗಣಿಸಲಾಗಿರುವ ಪಾನ್ ಮಸಾಲಾದಂತಹ ಸರಕುಗಳ ಮೇಲೆ ಸೆಸ್ ವಿಧಿಸಲು ಅವಕಾಶ ನೀಡುವ 'ಆರೋಗ್ಯ ಮತ್ತು ರಾಷ್ಟ್ರೀಯ ಭದ್ರತಾ ಸೆಸ್ ಮಸೂದೆ–2025' ಅನ್ನು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಗುರುವಾರ ಲೋಕಸಭೆಯಲ್ಲಿ ಮಂಡಿಸಿದರು.

'ಅಗತ್ಯ ವಸ್ತುಗಳ ಮೇಲೆ ಈ ಸೆಸ್ ಹೇರುವುದಿಲ್ಲ, ಇದರಿಂದ ಬರುವ ಆದಾಯವನ್ನು ಆರೋಗ್ಯ ಯೋಜನೆಗಳಿಗೆ ಖರ್ಚು ಮಾಡಲು ರಾಜ್ಯಗಳೊಂದಿಗೆ ಹಂಚಿಕೊಳ್ಳಲಾಗುವುದು' ಎಂದು ಮಸೂದೆ ಮಂಡನೆ ವೇಳೆ ಅವರು ತಿಳಿಸಿದರು.

ಎರಡು ಪ್ರಮುಖ ಕ್ಷೇತ್ರಗಳಾದ ಆರೋಗ್ಯ ಮತ್ತು ರಾಷ್ಟ್ರೀಯ ಭದ್ರತೆಗಾಗಿ ಸಂಪನ್ಮೂಲ ಒದಗಿಸುವ ಮಹತ್ವದ ಉದ್ದೇಶವನ್ನು ಈ ಮಸೂದೆ ಹೊಂದಿದೆ ಎಂದು ಅವರು ಹೇಳಿದರು.

'ಈ ಸೆಸ್ ಅನ್ನು ಯಾವುದೇ ಅಗತ್ಯ ವಸ್ತುಗಳ ಮೇಲೆ ವಿಧಿಸುವುದಿಲ್ಲ. ಆರೋಗ್ಯಕ್ಕೆ ಅಪಾಯಕಾರಿ ಎಂಬಂತಹ ಸರಕುಗಳ ಮೇಲೆ ಮಾತ್ರ ವಿಧಿಸಲಾಗುವುದು. ಜನರು ಇಂಥ ಅನಾರೋಗ್ಯಕಾರಿ ಸರಕುಗಳನ್ನು ಬಳಸದಂತೆ ತಡೆಯುವ ಉದ್ದೇಶವನ್ನೂ ಈ ಮಸೂದೆ ಹೊಂದಿದೆ' ಎಂದರು.

ಮಸೂದೆಯಲ್ಲಿ, ಪಾನ್ ಮಸಾಲಾ ಉತ್ಪಾದನಾ ಕಾರ್ಖಾನೆಗಳಲ್ಲಿನ ಯಂತ್ರಗಳ ಉತ್ಪಾದನಾ ಸಾಮರ್ಥ್ಯದ ಮೇಲೆಯೂ ಸೆಸ್ ವಿಧಿಸಲು ಪ್ರಸ್ತಾಪಿಸಲಾಗಿದೆ ಎಂದು ಹೇಳಿದರು.

'ಜಿಎಸ್‌ಟಿ ಅನ್ನು ಬಳಕೆ ಹಂತದಲ್ಲಿ ವಿಧಿಸಲಾಗುತ್ತದೆ ಮತ್ತು ಪಾನ್ ಮಸಾಲಾ ಮೇಲೆ ಅಬಕಾರಿ ಸುಂಕ ವಿಧಿಸಲಾಗುತ್ತಿಲ್ಲ. ಆದ್ದರಿಂದ ಈ ಸೆಸ್ ಅನ್ನು ಪಾನ್ ಮಸಾಲಾ ಘಟಕಗಳ ಉತ್ಪಾದನಾ ಸಾಮರ್ಥ್ಯದ ಆಧಾರ ಮೇಲೆ ವಿಧಿಸಲಾಗುತ್ತದೆ' ಎಂದರು.

'ಈ ಸೆಸ್‌ನಿಂದ ಬರುವ ಆದಾಯದ ಒಂದು ಭಾಗವನ್ನು ಆರೋಗ್ಯ ಜಾಗೃತಿ ಅಥವಾ ಇತರ ಆರೋಗ್ಯ ಸಂಬಂಧಿ ಯೋಜನೆಗಳ ಮೂಲಕ ರಾಜ್ಯಗಳ ಜತೆಗೆ ಹಂಚಿಕೊಳ್ಳಲಾಗುವುದು' ಎಂದರು.

ಪ್ರಸ್ತುತ ಪಾನ್ ಮಸಾಲಾ, ತಂಬಾಕು ಇತರ ಸಂಬಂಧಿತ ಉತ್ಪನ್ನಗಳ ಮೇಲೆ ಶೇ 28ರಷ್ಟು ಜಿಎಸ್‌ಟಿ ಮತ್ತು ವಿವಿಧ ದರದಲ್ಲಿ ಪರಿಹಾರ ಸೆಸ್ ವಿಧಿಸಲಾಗುತ್ತಿದೆ. ಪರಿಹಾರ ಸೆಸ್ ಲೆವಿ ಅಂತ್ಯಗೊಂಡಂತೆ, ಜಿಎಸ್‌ಟಿ ದರವು ಶೇ 40ಕ್ಕೆ ಏರುತ್ತದೆ. ಹೆಚ್ಚುವರಿಯಾಗಿ ತಂಬಾಕಿನ ಮೇಲೆ ಅಬಕಾರಿ ಸುಂಕವನ್ನು ಮತ್ತು ಪಾನ್ ಮಸಾಲಾ ಮೇಲೆ ಆರೋಗ್ಯ ಮತ್ತು ರಾಷ್ಟ್ರೀಯ ಸೆಸ್ ವಿಧಿಸಲಾಗುತ್ತದೆ ಎಂದು ಅವರು ಹೇಳಿದರು.

ಯಾರು ಏನಂತಾರೆ?

'ಅಧಿಕಾರಶಾಹಿ ಹಸ್ತಕ್ಷೇಪ'

ಉತ್ಪಾದನಾ ಘಟಕಗಳ ಸಾಮರ್ಥ್ಯ ಆಧರಿಸಿ ಸೆಸ್ ವಿಧಿಸಿದರೆ ಅಧಿಕಾರಶಾಹಿ ಹಸ್ತಕ್ಷೇಪ ಹೆಚ್ಚುತ್ತದೆ. ಇದು 'ಇನ್‌ಸ್ಪೆಕ್ಟರ್ ರಾಜ್' ವ್ಯವಸ್ಥೆಗೆ ಮತ್ತೆ ದಾರಿ ಮಾಡಿಕೊಡುತ್ತದೆ. ಮಸೂದೆಯಲ್ಲಿ ನ್ಯೂನತೆಗಳನ್ನು ಸರಿಪಡಿಸಲು ಪರಿಶೀಲನಾ ಸಮಿತಿಗೆ ಕಳುಹಿಸಬೇಕು

ವರುಣ್ ಚೌಧರಿ, ಕಾಂಗ್ರೆಸ್ ಸಂಸದ

'ತಂಬಾಕು ಉತ್ಪನ್ನ ನಿಷೇಧಿಸಿ'

ಸೆಸ್ ವಿಧಿಸುವುದರಿಂದ ಪಾನ್ ಮಸಾಲಾ, ತಂಬಾಕು ಬಳಕೆಯನ್ನು ತಡೆಯಲು ಸಾಧ್ಯವೇ? ಇದಕ್ಕಾಗಿ ಬಿಹಾರದಂತೆ ಪಾನ್ ಮಸಾಲಾ, ತಂಬಾಕು ಉತ್ಪನ್ನ, ಮಾರಾಟ ನಿಷೇಧಿಸಬೇಕು

ಸುಧಾಕರ್ ಸಿಂಗ್, ಆರ್‌ಜೆಡಿ ಸಂಸದ

'ಸೆಸ್‌ನಿಂದ ಹಣ ಸಂಗ್ರಹ'

ಸಂಸತ್ ಭವನಕ್ಕೆ ₹20,000 ಕೋಟಿ, ಪ್ರಧಾನಿ ಅವರ ಕಚೇರಿ 'ಸೇವಾ ತೀರ್ಥ'ಕ್ಕೆ ನೂರಾರು ಕೋಟಿ ಖರ್ಚು ಮಾಡಲಾಗಿದೆ. ಆ ಹಣವನ್ನು ಪಾನ್ ಮಸಾಲಾ ಮೇಲಿನ ಸೆಸ್‌ನಿಂದ ಸಂಗ್ರಹಿಸಲು ಸರ್ಕಾರ ಮುಂದಾಗಿದೆ

ಸುಗತಾ ರಾಯ್, ಟಿಎಂಸಿ ಸಂಸದ

'ನಲುಗಲಿವೆ ಎಂಎಸ್‌ಎಂಇ'

ಕೇಂದ್ರ ಸರ್ಕಾರವು ಆದಾಯವನ್ನು ಹೆಚ್ಚಿಸಿಕೊಳ್ಳಲು ಸೆಸ್‌ಗಳ ಮೇಲೆ ಅತಿಯಾಗಿ ಅವಲಂಬಿತವಾಗಿದೆ. ಸೆಸ್‌ಗಳನ್ನು ಹೆಚ್ಚಾಗಿ ವಿಧಿಸುವುದು ಉತ್ತಮ ಆಡಳಿತದ ಲಕ್ಷಣವಲ್ಲ. ಇದರಿಂದ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು (ಎಂಎಸ್‌ಎಂಇ) ಸಂಕಷ್ಟಕ್ಕೆ ಒಳಗಾಗಿ ನಲುಗಲಿವೆ.

ಸುಮತಿ, ಡಿಎಂಕೆ ಸಂಸದೆ

'ಎಸ್‌ಐಆರ್: ಹೆಚ್ಚುವರಿ ಸಿಬ್ಬಂದಿ ನಿಯೋಜಿಸಿ'

ನವದೆಹಲಿ (ಪಿಟಿಐ): ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣಾ ಕಾರ್ಯಕ್ಕೆ (ಎಸ್‌ಐಆರ್) ನೇಮಿಸಲಾಗಿರುವ ಬೂತ್ ಮಟ್ಟದ ಅಧಿಕಾರಿಗಳ (ಬಿಎಲ್‌ಒ) ಕಾರ್ಯ ಒತ್ತಡ ಕಡಿಮೆಗೊಳಿಸಲು ಹೆಚ್ಚುವರಿ ಸಿಬ್ಬಂದಿ ನಿಯೋಜಿಸುವುದನ್ನು ಪರಿಗಣಿಸುವಂತೆ ಸುಪ್ರೀಂ ಕೋರ್ಟ್ ಗುರುವಾರ ರಾಜ್ಯ ಸರ್ಕಾರಗಳಿಗೆ ನಿರ್ದೇಶಿಸಿದೆ.

ನಟ ವಿಜಯ್ ಅವರ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪಕ್ಷ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಅವರ ಪೀಠ ಈ ಕುರಿತು ಸೂಚಿಸಿತು.

'ನಿಗದಿತ ಅವಧಿಯಲ್ಲಿ ಮುಗಿಸಬೇಕಾದ ಎಸ್‌ಐಆರ್‌ನಿಂದ ಬಿಎಲ್‌ಒಗಳ ಕೆಲಸದ ಒತ್ತಡ ಹೆಚ್ಚಾಗಿದೆ. ಇದನ್ನು ನಿರ್ವಹಿಸಲಾಗದೆ ಕೆಲ ಬಿಎಲ್‌ಒಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಟಿವಿಕೆ ಅರ್ಜಿಯಲ್ಲಿ ತಿಳಿಸಿದೆ. ಈ ಕರ್ತವ್ಯ ನಿರ್ವಹಿಸಲು ಆಗದ ಸಿಬ್ಬಂದಿ ವಿರುದ್ಧ ಪ್ರಜಾಪ್ರತಿನಿಧಿ ಕಾಯ್ದೆ (ಆರ್‌ಪಿ) ಅಡಿ ಕ್ರಮ ತೆಗೆದುಕೊಳ್ಳದಂತೆ ಆಯೋಗಕ್ಕೆ ಸೂಚಿಸುವಂತೆ ಅರ್ಜಿಯಲ್ಲಿ ಕೋರಿದೆ.

ಟಿವಿಕೆ ಪರ ವಾದ ಮಂಡಿಸಿದ ಹಿರಿಯ ವಕೀಲ ಗೋಪಾಲ್ ಶಂಕರನಾರಾಯಣನ್, 'ಶಿಕ್ಷಕರು, ಅಂಗನವಾಡಿ ಕಾರ್ಯಕರ್ತರು ಸೇರಿದಂತೆ ವಿವಿಧ ಹಂತದ ಸಿಬ್ಬಂದಿಯನ್ನು ಬಿಎಲ್‌ಒ ಗಳಾಗಿ ನೇಮಿಸಲಾಗಿದೆ. ಕರ್ತವ್ಯ ನಿರ್ವಹಿಸಲು ವಿಫಲರಾಗುವ ಬಿಎಲ್‌ಒ ಗಳ ವಿರುದ್ಧ ಆಯೋಗ ಎಫ್‌ಐಆರ್ ದಾಖಲಿಸುತ್ತಿದೆ. ಈ ಎಲ್ಲ ಒತ್ತಡಗಳಿಂದಾಗಿ ಕೆಲ ಬಿಎಲ್‌ಒಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ತಿಳಿಸಿದರು.

'ಕೆಲಸದ ಒತ್ತಡ ಕಡಿಮೆ ಮಾಡಲು ಹೆಚ್ಚುವರಿ ಸಿಬ್ಬಂದಿ ನಿಯೋಜಿಸುವ ನಿಟ್ಟಿನಲ್ಲಿ ರಾಜ್ಯಗಳು ಕ್ರಮವಹಿಸಬಹುದು. ದೈನಂದಿನ ಕರ್ತವ್ಯಗಳ ಜತೆಗೆ ಹೆಚ್ಚುವರಿ ಕೆಲಸದ ನಿರ್ವಹಣೆಯಿಂದ ಸಿಬ್ಬಂದಿಗೆ ತೊಂದರೆಗಳಾಗುತ್ತಿದ್ದರೆ ಸರ್ಕಾರಗಳು ಅದನ್ನು ನಿವಾರಿಸಲು ಗಮನ ಹರಿಸಬೇಕು' ಎಂದು ಸಿಜೆಐ ಹೇಳಿದರು.

ಯಾವುದೇ ಸಿಬ್ಬಂದಿ ಎಸ್‌ಐಆರ್ ಕರ್ತವ್ಯದಿಂದ ವಿನಾಯಿತಿ ಪಡೆಯಲು 'ನಿರ್ದಿಷ್ಟ ಕಾರಣ' ಹೊಂದಿದ್ದರೆ, ಸಕ್ಷಮ ಅಧಿಕಾರಿ ಅದನ್ನು ಪರಿಶೀಲಿಸಿ ಮನವಿಯನ್ನು ಪರಿಗಣಿಸಬಹುದು. ಆ ಸಿಬ್ಬಂದಿಯ ಬದಲಿಗೆ ಇನ್ನೊಬ್ಬರನ್ನು ಅಲ್ಲಿಗೆ ನಿಯೋಜಿಸಬಹುದು ಎಂದು ಪೀಠ ಹೇಳಿದೆ.

'ಪೌರತ್ವ ನಿರ್ಧಾರ: ಇಆರ್‌ಒಗಿಲ್ಲ ಅಧಿಕಾರ'

'ಮತದಾರರ ನೋಂದಣಾಧಿಕಾರಿ ಗಳಿಗೆ (ಇಆರ್‌ಒ) ಮತದಾರರೊಬ್ಬರ ಪೌರತ್ವ ನಿರ್ಧರಿಸುವ ಹಕ್ಕು ಇಲ್ಲ. ಹೀಗಾಗಿ, ಚುನಾವಣಾ ಆಯೋಗ ಕೈಗೊಂಡಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಹಲವು ನ್ಯೂನತೆಗಳಿಂದ ಕೂಡಿದೆ' ಎಂದು ಸುಪ್ರೀಂ ಕೋರ್ಟ್‌ಗೆ ಗುರುವಾರ ಮಾಹಿತಿ ನೀಡಲಾಗಿದೆ.

ಎಸ್‌ಐಆರ್ ಪ್ರಶ್ನಿಸಿರುವ ಅರ್ಜಿದಾರರೊಬ್ಬರ ವಾದ ಮಂಡಿಸಿದ ವಕೀಲ ಪ್ರಶಾಂತ್ ಭೂಷಣ್, ಈ ವಿಷಯ ತಿಳಿಸಿದ್ದಾರೆ.

'ಎಸ್‌ಐಆರ್ ಪಾರದರ್ಶಕವಾಗಿ ನಡೆಯುತ್ತಿಲ್ಲ. ಪೌರತ್ವ ನಿರ್ಧರಿಸುವ ಅಧಿಕಾರ ವ್ಯಾಪ್ತಿಗೆ ಸಂಬಂಧಿಸಿ ಸ್ಪಷ್ಟತೆಯೂ ಇಲ್ಲ' ಎಂದು ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಹಾಗೂ ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಅವರು ಇದ್ದ ಪೀಠಕ್ಕೆ ಅವರು ತಿಳಿಸಿದ್ದಾರೆ.

ವಾಹನ ಬಿಡಿಸಿಕೊಳ್ಳಲು ಬೇಕಾದ ಬ್ಯಾಂಕ್ ಖಾತರಿಗೆ ಪರ್ಯಾಯ ದಾರಿ • ಮಸೂದೆ ತಿದ್ದುಪಡಿ

ಗೋ ಅಕ್ರಮ ಸಾಗಣೆ: ನಷ್ಟ ಪರಿಹಾರ ಬಾಂಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾನುವಾರುಗಳನ್ನು ಅಕ್ರಮವಾಗಿ ಸಾಗಿಸುವ ಸಂದರ್ಭದಲ್ಲಿ ವಶಪಡಿಸಿಕೊಳ್ಳುವ ವಾಹನ, ಇತರೆ ಸಾಮಗ್ರಿಗಳನ್ನು ಬಿಡಿಸಿಕೊಳ್ಳಲು ಬ್ಯಾಂಕ್ ಖಾತರಿ ನೀಡಲು ಸಾಧ್ಯವಾಗದಿದ್ದರೆ, ನಷ್ಟ ಪರಿಹಾರ ಬಾಂಡ್ ನೀಡಲು ಅವಕಾಶ ಕಲ್ಪಿಸುವ ಉದ್ದೇಶದಿಂದ ಜಾನುವಾರು ಹತ್ಯೆ ತಡೆ ಮಸೂದೆಗೆ ಸರ್ಕಾರ ತಿದ್ದುಪಡಿ ತಂದಿದೆ.

ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಮಸೂದೆಯ ತಿದ್ದುಪಡಿಗೆ ಅಂಗೀಕಾರ ದೊರೆತಿದೆ.

ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಸಚಿವ ಎಚ್‌.ಕೆ. ಪಾಟೀಲ ಈ ಕುರಿತ ವಿವರ ನೀಡಿದರು.

'ರಾಜ್ಯದಲ್ಲಿ ಜಾನುವಾರುಗಳ ಮೇಲಿನ ಹಿಂಸೆ ತಡೆಯಲು ಮತ್ತು ಗೋಹತ್ಯೆಯನ್ನು ಸಂಪೂರ್ಣವಾಗಿ ನಿಷೇಧಿಸಲು 'ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಕಾಯ್ದೆ- 2020' ಈಗಾಗಲೇ ಜಾರಿಯಲ್ಲಿದೆ. ಈ ಕಾಯ್ದೆ ಅನ್ವಯ ಅನಧಿಕೃತವಾಗಿ ಜಾನುವಾರು ಸಾಗಣೆ ಮಾಡುವ ಸಂದರ್ಭದಲ್ಲಿ ವಶಪಡಿಸಿಕೊಂಡ ವಾಹನ, ಇತರೆ ಸಾಮಗ್ರಿ ಬಿಡಿಸಿಕೊಳ್ಳಲು ಅಪರಾಧ ನಡೆದ ಸಂದರ್ಭದಲ್ಲಿಅಂದಾಜಿಸಿದ ಮೌಲ್ಯಕ್ಕೆ ಸಮನಾಗಿ ಬ್ಯಾಂಕ್ ಖಾತರಿ ನೀಡುವುದು ಕಡ್ಡಾಯವಾಗಿದೆ' ಎಂದರು.

'ಆದರೆ, ಹೀಗೆ ವಶಪಡಿಸಿಕೊಂಡ ವಾಹನದ ಬಾಡಿಗೆಯಿಂದಲೇ ಸಣ್ಣಪುಟ್ಟ ವಾಹನಗಳ ಮಾಲೀಕರು ಜೀವನ ನಡೆಸುತ್ತಿದ್ದಾರೆ. ₹ 3 ಲಕ್ಷದಿಂದ ₹ 5 ಲಕ್ಷವರೆಗೆ ಮತ್ತು ಅದಕ್ಕಿಂತ ಹೆಚ್ಚಿನ ಬೆಲೆಯ ವಾಹನಗಳನ್ನು ಬಿಡಿಸಿಕೊಳ್ಳಲು ಬ್ಯಾಂಕ್ ಖಾತರಿ ನೀಡುವುದು ಕಷ್ಟಸಾಧ್ಯವೆನಿಸಿದೆ. ಇಂತಹ ಸಂದರ್ಭದಲ್ಲಿ 'ನಷ್ಟ ಪರಿಹಾರ ಬಾಂಡ್' ಮೂಲಕ ಬಿಡುಗಡೆ ಮಾಡುವಂತೆ ಹೈಕೋರ್ಟ್ 2022ರಲ್ಲಿ ಆದೇಶಿಸಿದೆ. ಹೀಗಾಗಿ, ಕಾಯ್ದೆ ತಿದ್ದುಪಡಿಗೆ ಮಸೂದೆ ಮಂಡಿಸಲಾಗುವುದು' ಎಂದು ಸಚಿವರು ತಿಳಿಸಿದರು.

ಸಂಪುಟ ಸಭೆಯ ಇತರ ನಿರ್ಣಯಗಳು

- 'ಇನ್ವೆಸ್ಟ್ ಕರ್ನಾಟಕ–2025'ದ ಪರಿಷ್ಕೃತ ವೆಚ್ಚ ₹ 100.70 ಕೋಟಿಗೆ ಅನುಮೋದನೆ
- ಕೇಂದ್ರ ಪುರಸ್ಕೃತ ಯೋಜನೆಯಾದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಗಣಕೀಕರಣ ಯೋಜನೆಯಲ್ಲಿ 5,491 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ (ಪ್ಯಾಕ್ಸ್‌ಗಳ) ಗಣಕೀಕರಣವನ್ನು ಪೂರ್ಣಗೊಳಿಸಲು ಸತಾರಾ ಸರ್ವೀಸಸ್ ಆ್ಯಂಡ್ ಸಲ್ಯೂಷನ್ಸ್ ಸಂಸ್ಥೆಗೆ 4,453 ಪ್ಯಾಕ್ಸ್‌ಗಳಿಗೆ ₹ 57.88 ಕೋಟಿ ಮೊತ್ತದಲ್ಲಿ ಮತ್ತು ಚಾಯ್ಸಿ ಕನ್ಸಲ್ಟೆನ್ಸಿ ಸಂಸ್ಥೆಗೆ 1,038 ಪ್ಯಾಕ್ಸ್ ₹ 13.49 ಕೋಟಿ ಮೊತ್ತದಲ್ಲಿ ಹಂಚಿಕೆ
- ಆರೋಗ್ಯ ವಿಶ್ವವಿದ್ಯಾಲಯದ ವತಿಯಿಂದ ಕಲಬುರಗಿ, ಗದಗ, ದಾವಣಗೆರೆ, ಮಂಗಳೂರು, ಭೀಮನಕುಪ್ಪೆ (ಬೆಂಗಳೂರಿನ ಕೆಂಗೇರಿ ಹತ್ತಿರ) ಮತ್ತು ಮೈಸೂರಿನಲ್ಲಿ ಅತ್ಯಾಧುನಿಕ ಪ್ರಯೋಗಾಲಯ ₹452.89 ಕೋಟಿಗಳ ಅಂದಾಜು ಮೊತ್ತದಲ್ಲಿ ಸ್ಥಾಪನೆ
- ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಅಧೀನದಲ್ಲಿ ಜಿಲ್ಲಾಸ್ಪತ್ರೆ ಆವರಣದಲ್ಲಿ ಕ್ರಿಟಿಕಲ್ ಕೇರ್ ಬ್ಲಾಕ್ ₹ 28.69 ಕೋಟಿಯಲ್ಲಿ ನಿರ್ಮಾಣ
- ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿ ಕಾರ್ಯ ನಿರ್ವಹಿಸುತ್ತಿರುವ 19 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ ₹ 304 ಕೋಟಿಯಲ್ಲಿ ಸ್ವಂತ ಕಟ್ಟಡ ನಿರ್ಮಾಣ
- ಹೆಬ್ಬಾಳದಲ್ಲಿರುವ ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆಯಲ್ಲಿ ಕುರಿ ಮತ್ತು ಮೇಕೆಗಳ ನೀಲಿ ನಾಲಿಗೆ ರೋಗ ಹಾಗೂ ಇತರೆ ರೋಗಗಳಿಗೆ ಲಸಿಕೆ ತಯಾರಿಸಲು ಅತ್ಯಾಧುನಿಕ ಲಸಿಕಾ ತಯಾರಿಕಾ ತಯಾರಿಕಾ ಪ್ರಯೋಗಾಲಯ ₹ 27ಕೋಟಿ ಮೊತ್ತದಲ್ಲಿ ಸ್ಥಾಪನೆ
- ಬೆಂಗಳೂರು ನಿರಾಶ್ರಿತರ ಪರಿಹಾರ ಕೇಂದ್ರಕ್ಕೆ ಸೇರಿದ ಮೂರು ಎಕರೆ ಜಮೀನನ್ನು ನೆಫ್ರೊ ಯುರಾಲಜಿ ಸಂಸ್ಥೆಯ ಆಸ್ಪತ್ರೆ ನಿರ್ಮಾಣಕ್ಕೆ ಗುತ್ತಿಗೆ ಆಧಾರದಲ್ಲಿ ಮಂಜೂರು
- ರಾಜ್ಯದಾದ್ಯಂತ 334 ಆಯುಷ್ಮಾನ್ ಆರೋಗ್ಯ ಮಂದಿರ ₹217.10 ಕೋಟಿ ಮೊತ್ತದಲ್ಲಿ ನಿರ್ಮಾಣ
- 15ನೇ ಹಣಕಾಸು ಆಯೋಗದಡಿ ₹ 22 ಕೋಟಿ ಅಂದಾಜು ಮೊತ್ತದಲ್ಲಿ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ, ₹ 80 ಕೋಟಿ ಅಂದಾಜು ಮೊತ್ತದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ನಿರ್ಮಾಣ
- ಕಳೆದ ಎರಡು ವರ್ಷಗಳಲ್ಲಿ ಫಾರ್ಮಸಿ ಡಿಪ್ಲೊಮಾ ತೇರ್ಗಡೆಯಾಗಿರುವ ಸುಮಾರು 1,000 ವಿದ್ಯಾರ್ಥಿಗಳನ್ನು ಮಂಜೂರಾದ ಖಾಲಿಯಿರುವ ಹುದ್ದೆಗಳ ಎದುರಾಗಿ ಪಾರದರ್ಶಕ ಆಯ್ಕೆ ವಿಧಾನದ ಮೂಲಕ 11 ತಿಂಗಳ ಅವಧಿಗೆ ನಿಗದಿತ ಮೊತ್ತದ ಸ್ಟೈಫಂಡ್ ಪಾವತಿಯ ಮೇಲೆ ಅಪ್ರೆಂಟಿಸ್‌ಗಳಾಗಿ ನೇಮಕ
- 108- ಆರೋಗ್ಯ ಕವಚ ಸೇವೆಯಡಿಯಲ್ಲಿ ನೇಮಕಗೊಳ್ಳಲಿರುವ ತುರ್ತು ವೈದ್ಯಕೀಯ ಸಿಬ್ಬಂದಿ ಮತ್ತು ಚಾಲಕರುಗಳಿಗೆ ಚಾಲ್ತಿಯಲ್ಲಿರುವ ಮೂಲ ವೇತನವನ್ನು ಕನಿಷ್ಠ ವೇತನ ದರದಲ್ಲಿ ಹಾಗೂ ಪ್ರತಿ ವರ್ಷದ ಹಿಂದಿನ ಸೇವಾ ಅನುಭವಕ್ಕಾಗಿ ಶೇ 1ರಷ್ಟು ದರದಲ್ಲಿ 15 ವರ್ಷದವರೆಗೆ ಗರಿಷ್ಠ ಶೇ 15ರಷ್ಟು ಅನುಭವ ಕಾರ್ಯಕ್ಷಮತೆ ಆಧಾರಿತ ಪ್ರೋತ್ಸಾಹ ಧನ ಶೇ 10ರವರೆಗೆ ನೀಡಲು ಒಪ್ಪಿಗೆ
- ಅರಸೀಕೆರೆ ತಾಲ್ಲೂಕಿನ ಬಾಣಾವರ ಹಾಗೂ ಗಂಡಸಿ ಬ್ಲಾಕ್‌ನ 530 ಜನವಸತಿಗಳಲ್ಲಿ ₹ 73.22 ಕೋಟಿಯಲ್ಲಿ 5 ವರ್ಷಗಳ ಅವಧಿಯಲ್ಲಿ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆ ಕಾರ್ಯಾಚರಣೆ ಮತ್ತು ನಿರ್ವಹಣೆ.
- ಮಂಡ್ಯ ಜಿಲ್ಲೆ ಕೆ.ಆರ್. ಪೇಟೆ ತಾಲ್ಲೂಕಿನ ಗೊಡೇಹೊಸಹಳ್ಳಿ ಬಳಿ ಹೇಮಾವತಿ ನದಿಯಿಂದ ನೀರು ಎತ್ತಿ ಮಂಡ್ಯ ಜಿಲ್ಲೆಯ ಕೆ.ಆರ್. ಪೇಟೆ ಮತ್ತು ನಾಗಮಂಗಲ ತಾಲ್ಲೂಕು ಹಾಗೂ ಚನ್ನರಾಯಪಟ್ಟಣ ತಾಲ್ಲೂಕುಗಳ ಕೆರೆ ತುಂಬಿಸುವ (ಹಂತ-2) ₹ 67 ಕೋಟಿ ಮೊತ್ತದ ಯೋಜನೆಗೆ ಒಪ್ಪಿಗೆ
- ಇಂಡಿ ತಾಲ್ಲೂಕಿನ ಚಡಚಣ ಹಾಗೂ ಸುತ್ತಮುತ್ತಲಿನ ಗ್ರಾಮಗಳ 9,215 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಹಾಗೂ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಲು ರೂಪಿಸಲಾದ ಚಡಚಣ ಏತ ನೀರಾವರಿ ಯೋಜನೆಯ ₹ 485 ಕೋಟಿಗಳ ಪರಿಷ್ಕೃತ ಅಂದಾಜಿಗೆ ಅನುಮೋದನೆ

ಯಾವುದೆಲ್ಲ ಮಸೂದೆಗಳಿಗೆ ಸಂಪುಟ ಅಸ್ತು

- ಕರ್ನಾಟಕ ಸಾಮಾಜಿಕ ಬಹಿಷ್ಕಾರ (ತಡೆಗಟ್ಟುವಿಕೆ, ನಿಷೇಧ ಮತ್ತು ಪರಿಹಾರ)
- ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ (ತಿದ್ದುಪಡಿ)
- ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ (ತಿದ್ದುಪಡಿ)
- ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ (ತಿದ್ದುಪಡಿ)
- ಶ್ರೀ ಚಾಮುಂಡೇಶ್ವರಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರ ಮತ್ತು ಇತರೆ ಕಾನೂನುಗಳ (ತಿದ್ದುಪಡಿ)
- ಕರ್ನಾಟಕ ಒಳನಾಡು ನೌಕೆ ನಿಯಮಗಳು– 2025

ರಾಹುಲ್ ಗಾಂಧಿ ಪೌರತ್ವ ಪ್ರಶ್ನಿಸಿ ಅರ್ಜಿ: ಇಂದು ವಿಚಾರಣೆ

ಪ್ರಜಾವಾಣಿ ವಾರ್ತೆ



ರಾಹುಲ್ ಗಾಂಧಿ

ರಾಯ್‌ಬರೇಲಿ (ಉತ್ತರ ಪ್ರದೇಶ): 'ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಬ್ರಿಟನ್ ಪೌರತ್ವ ಹೊಂದಿದ್ದು, ಇದು ಭಾರತದ ಕಾನೂನಿನ ಉಲ್ಲಂಘನೆ' ಎಂದು ಆರೋಪಿಸಿ ಸಲ್ಲಿಸಲಾಗಿರುವ ಕ್ರಿಮಿನಲ್ ಅರ್ಜಿಯನ್ನು ಪರಿಗಣಿಸಿರುವ ಇಲ್ಲಿನ ಶಾಸಕರ–ಸಂಸದರ ವಿಶೇಷ ನ್ಯಾಯಾಲಯ, ಡಿಸೆಂಬರ್ 5ರಂದು ವಿಚಾರಣೆ ನಿಗದಿ ಮಾಡಿದೆ.

ಬೆಂಗಳೂರಿನ ಎಸ್.ವಿಘ್ನೇಶ್ ಶಿಶಿರ್ ಅವರು ಈ ಅರ್ಜಿ ಸಲ್ಲಿಸಿದ್ದಾರೆ.

ಅರ್ಜಿಯನ್ನು ವಿಚಾರಣೆಗೆ ಪರಿಗಣಿಸಿದ ನ್ಯಾಯಾಧೀಶ ವಿವೇಕ್ ಕುಮಾರ್, ಈ ವಿಚಾರವಾಗಿ ಈ ವರೆಗೆ ನಡೆದಿರುವ ತನಿಖೆ ಕುರಿತಂಥೆ ವಿಸ್ತೃತ ವರದಿಯನ್ನು ಸಲ್ಲಿಸುವಂತೆ ಕೊತ್ವಾಲಿ ಪೊಲೀಸ್ ಠಾಣೆಗೆ ನಿರ್ದೇಶಿಸಿದರು ಎಂದು 'ದಿ ಪ್ರಿಂಟ್' ವರದಿ ಮಾಡಿದೆ

'ರಾಹುಲ್ ಗಾಂಧಿಯವರು ಬಿಎನ್‌ಎಸ್‌ಎಸ್, ವಿದೇಶಿಯರ ಕಾಯ್ದೆ, ಪಾಸ್‌ಪೋರ್ಟ್ ಹಾಗೂ ಇತರ ಕಾನೂನುಗಳನ್ನು ಉಲ್ಲಂಘಿಸಿದ್ದಾರೆ. ಶತ್ರುದೇಶಗಳಿಗೆ ಮಾಹಿತಿ ನೀಡಿ, ನಕಲಿ ಪಾಸ್‌ಪೋರ್ಟ್ ಪಡೆದಿದ್ದಾರೆ' ಎಂದು ವಿಘ್ನೇಶ್ ಅವರು ಅರ್ಜಿಯಲ್ಲಿ ಆರೋಪಿಸಿದ್ದಾರೆ.

'ಹೊರ ರಾಜ್ಯದ ಕಾರ್ಮಿಕರ ಮೇಲೆ ನಿಗಾ'

ಕಾರವಾರ: 'ಕದಂಬ ನೌಕಾನೆಲೆಯ ವಿಸ್ತರಣೆ ಕಾಮಗಾರಿ ಸೇರಿ ಇಲ್ಲಿ ಕಾರ್ಯನಿರ್ವಹಿಸಲು ಬರುವ ಎಲ್ಲ ಕಾರ್ಮಿಕರ ಹಿನ್ನೆಲೆಯನ್ನು ಹಲವು ಬಾರಿ ಪರಿಶೀಲಿಸ ಲಾಗುತ್ತದೆ' ಎಂದು ಕರ್ನಾಟಕ ನೌಕಾನೆಲೆಯ ಮುಖ್ಯಸ್ಥ ರಿಯರ್ ಅಡ್ಮಿರಲ್ ವಿಕ್ರಮ್ ಮೆನನ್ ಹೇಳಿದರು.

ಕದಂಬ ನೌಕಾನೆಲೆಯಲ್ಲಿ ಗುರುವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಹೊರ ರಾಜ್ಯದ ಕಾರ್ಮಿಕರಿದ್ದರೆ, ಅವರ ಆಧಾರ್ ಕಾರ್ಡ್ ಜೊತೆಗೆ ಕೌಟುಂಬಿಕ ಹಿನ್ನೆಲೆ ಸೇರಿ ಇತರ ಮಾಹಿತಿಯನ್ನು ಪೊಲೀಸ್ ಮತ್ತು ಗುಪ್ತಚರ ವ್ಯವಸ್ಥೆ ಮೂಲಕ ಸಂಗ್ರಹಿಸುತ್ತೇವೆ. ಇದರ ನಂತರವಷ್ಟೇ ಕೆಲಸಕ್ಕೆ ನಿಯೋಜಿಸಿಕೊಳ್ಳಲು ಅವಕಾಶ ನೀಡಲಾಗುತ್ತದೆ' ಎಂದರು.

'ನೌಕಾದಳದ ಯಾವುದೇ ಮಾಹಿತಿಯನ್ನು ಸಾಮಾಜಿಕ ಮಾಧ್ಯಮ ಅಥವಾ ಸ್ನೇಹಿತರು, ಪರಿಚಯಸ್ಥರೊಂದಿಗೆ ಹಂಚಿಕೊಳ್ಳದಂತೆ ಸಿಬ್ಬಂದಿಗೂ ಎಚ್ಚರಿಕೆ ನೀಡಲಾಗಿದೆ. ನೌಕಾನೆಲೆ ವ್ಯಾಪ್ತಿಯೊಳಗೆ ಮೀನುಗಾರಿಕೆಗೆ ಅವಕಾಶ ನೀಡದಂತೆ ಮೀನುಗಾರಿಕೆ ಇಲಾಖೆ ಹಿರಿಯ ಅಧಿಕಾರಿಗಳ ಜೊತೆಗೆ ಸಭೆ ನಡೆಸಲಾಗಿದೆ' ಎಂದರು.

ನೌಕಾಪಡೆ ದಿನಾಚರಣೆ ಅಂಗವಾಗಿ ತಿರುವನಂತಪುರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ನೌಕಾಪಡೆ ಸಿಬ್ಬಂದಿ ಕಾರ್ಯಾಚರಣೆಯೊಂದರ ಪ್ರಾತ್ಯಕ್ಷಿಕೆ ಪ್ರಸ್ತುತಪಡಿಸಿದರು –ಪಿಟಿಐ ಚಿತ್ರ

ದ್ವೇಷ ಭಾಷಣ: 7 ವರ್ಷ ಜೈಲು

ಒಂದನೇ ಪುಟದಿಂದ...

'ರಾಜ್ಯದಲ್ಲಿ ದ್ವೇಷ ಭಾಷಣ ಮತ್ತು ದ್ವೇಷಾಪರಾಧಗಳ ಪ್ರಸರಣ, ಪ್ರಕಟಣೆ ಅಥವಾ ಪ್ರಚಾರ ಮಾಡುವುದರಿಂದ ಸಮಾಜದ ಸಾಮರಸ್ಯ ಹದಗೆಡಿಸುವುದು ಮತ್ತು ದ್ವೇಷ ಹರಡಿಸುವಿಕೆಗೆ ಕಡಿವಾಣ ಹಾಕಲು ಮತ್ತು ಅಂತಹ ಅಪರಾಧ ಗಳನ್ನು ಎಸಗುವ ವ್ಯಕ್ತಿ, ವ್ಯಕ್ತಿಗಳು, ಸಂಘಟನೆ ಯವರನ್ನು ಶಿಕ್ಷೆಗೆ ಒಳಪಡಿಸುವ ಉದ್ದೇಶ ದಿಂದ ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷಾಪರಾಧಗಳ (ಪ್ರತಿಬಂಧಕ) ಮಸೂದೆ ರೂಪಿಸಲಾಗಿದೆ' ಎಂದು ಅವರು ವಿವರಿಸಿದರು.

ಧಾರ್ಮಿಕ, ಜನಾಂಗೀಯ, ಜಾತಿ ಅಥವಾ ಸಮುದಾಯ, ಲಿಂಗ, ಲೈಂಗಿಕ ದೃಷ್ಟಿಕೋನ, ಜನ್ಮಸ್ಥಳ, ಭಾಷೆ, ವಾಸಸ್ಥಳ, ಅಂಗವೈಕಲ್ಯ ಅಥವಾ ಬುಡಕಟ್ಟು ಜನರ ಕುರಿತು ಯಾವುದೇ ವ್ಯಕ್ತಿಗೆ ಹಾನಿ ಮಾಡುವುದು ಅಥವಾ ದ್ವೇಷ ಉತ್ತೇಜಿಸುವುದು ಅಥವಾ ಪ್ರಚಾರ ಮಾಡುವುದನ್ನು ದ್ವೇಷಾಪರಾಧ ಎಂದು ಪರಿಗಣಿಸಲಾಗುತ್ತದೆ. ಮೊದಲ ಬಾರಿ ಇಂತಹ ಕೃತ್ಯದಲ್ಲಿ ಭಾಗಿಯಾದರೆ ಏಳುವರ್ಷಗಳವರೆಗೆ ಜೈಲು ಶಿಕ್ಷೆಗೆ ಗುರಿಪಡಿಸಬಹುದು. ಇದೇ ಅಪರಾಧವನ್ನು ಪುನರಾವರ್ತಿಸಿದರೆ ಎರಡು ವರ್ಷದಿಂದ 10 ವರ್ಷದವರೆಗೆ ವಿಸ್ತರಿಸಬಹುದಾದ ಜೈಲು ಮತ್ತು ₹ 1 ಲಕ್ಷ ದಂಡ ವಿಧಿಸಲು ಮಸೂದೆ ಅವಕಾಶ ಕಲ್ಪಿಸಿದೆ.

ದ್ವೇಷಾಪರಾಧದಿಂದ ಆಗಿರುವ ಹಾನಿಯ ತೀವ್ರತೆ ಪರಿಗಣಿಸಿ ಸಂತ್ರಸ್ತರಿಗೆ ನ್ಯಾಯಾಲಯವು ಸೂಕ್ತ ಪರಿಹಾರ ಘೋಷಿಸಬಹುದು. ಇಂತಹ ಕೃತ್ಯವೂ ಜಾಮೀನುರಹಿತ ಅಪರಾಧ ಎಂದು ಪರಿಗಣಿಸಲ್ಪಡಲಿದೆ. ಇವುಗಳನ್ನು ಜೆಎಂಎಫ್‌ಸಿ ನ್ಯಾಯಾಲಯ ವಿಚಾರಣೆ ನಡೆಸಲಿದೆ.

ಟಿಇಟಿ ವಿನಾಯಿತಿ ಶಿಕ್ಷಕರಿಗೆ ನಿರಾಳ

ಒಂದನೇ ಪುಟದಿಂದ...

ಅಲ್ಲದೆ, 800 ಸರ್ಕಾರಿ (ಮ್ಯಾಗ್ನೆಟ್) ಶಾಲೆಗಳನ್ನು ಏಷ್ಯನ್ ಅಭಿವೃದ್ಧಿ ಬ್ಯಾಂಕ್, ಕೆಕೆಆರ್‌ಡಿಬಿ ಸೇರಿದಂತೆ ವಿವಿಧ ನಿಧಿಗಳ ಸಹಾಯದಿಂದ ಕೆಪಿಎಸ್ ಮಾನದಂಡಗಳ ಕೈಪಿಡಿಯಂತೆ 'ಕರ್ನಾಟಕ ಪಬ್ಲಿಕ್ ಸ್ಕೂಲ್‌ಗಳಾಗಿ ಉನ್ನತೀಕರಿಸಲು, ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಲು ಸಂಸ್ಥೆಯೊಂದನ್ನು ಆಯ್ಕೆ ಮಾಡಿಕೊಳ್ಳಲೂ ಸಂಪುಟ ಅನುಮೋದನೆ ನೀಡಿದೆ.

ದೇಶೀಯ, ಅಂತರರಾಷ್ಟ್ರೀಯ ಮಾರ್ಗಗಳಲ್ಲಿನ ವಿಮಾನಗಳ ಹಾರಾಟ ಸ್ಥಗಿತ

ದೆಹಲಿ, ಮುಂಬೈ ಸೇರಿ ಹಲವೆಡೆ ವ್ಯತ್ಯಯ

ಮುಂಬೈ (ಪಿಟಿಐ/ಎಎಫ್‌ಪಿ): ಭಾರತದ ಅತೀ ದೊಡ್ಡ ಏರ್‌ಲೈನ್ಸ್ 'ಇಂಡಿಗೊ' ಸಂಸ್ಥೆಯು 1,232ಕ್ಕೂ ದೇಶೀಯ ಹಾಗೂ ಅಂತರರಾಷ್ಟ್ರೀಯ ಮಾರ್ಗಗಳಲ್ಲಿನ ವಿಮಾನಗಳ ಹಾರಾಟವನ್ನು ಗುರುವಾರ ಸ್ಥಗಿತಗೊಳಿಸಿತು. ಇದರಿಂದ, ಸತತ ಮೂರನೇ ದಿನವೂ ಸಂಸ್ಥೆಯ ವಿಮಾನಗಳ ಹಾರಾಟಗಳಲ್ಲಿ ವ್ಯತ್ಯಯ ಉಂಟಾಗಿ ಬೆಂಗಳೂರು, ದೆಹಲಿ, ಮುಂಬೈ ಹಾಗೂ ಇತರೆ ನಗರಗಳಿಂದ ವಿವಿಧೆಡೆಗೆ ತೆರಳುವ ಲಕ್ಷಾಂತರ ಪ್ರಯಾಣಿಕರು ಸಂಕಷ್ಟಕ್ಕೆ ಸಿಲುಕಿದರು.

ಸಮಯಪಾಲನೆಗೆ ಹೆಸರುವಾಸಿಯಾಗಿದ್ದ 'ಇಂಡಿಗೊ' ಸಮಯ ಮರು ಹೊಂದಾಣಿಕೆ ಮಾಡಿದ್ದರಿಂದ ನೂರಾರು ವಿಮಾನಗಳ ಹಾರಾಟದಲ್ಲಿ ವಿಳಂಬವಾದವು. ಸಂಸ್ಥೆಯ ಸಮಯಪಾಲನೆ ನಿಖರತೆ ಅವಧಿಯೂ ಶೇಕಡ 19.7ಕ್ಕೆ ಕುಸಿದಿದ್ದು, ಗುರುವಾರ ಮಧ್ಯಾಹ್ನದವರೆಗೂ 300ಕ್ಕೂ ಅಧಿಕ ವಿಮಾನಗಳ ಹಾರಾಟದಲ್ಲಿ ವ್ಯತ್ಯಯ ಉಂಟಾಗಿತ್ತು ಎಂದು ಮೂಲಗಳು ತಿಳಿಸಿವೆ.

ದೆಹಲಿ ವಿಮಾನ ನಿಲ್ದಾಣದಲ್ಲಿ 95 ವಿಮಾನಗಳ ಹಾರಾಟ ರದ್ದುಗೊಂಡರೆ, ಮುಂಬೈ ನಿಲ್ದಾಣದಲ್ಲಿ 85 ಹಾಗೂ ಹೈದರಾಬಾದ್‌ನಲ್ಲಿ 75 ಹಾಗೂ ಬೆಂಗಳೂರು ವಿಮಾನ ನಿಲ್ದಾಣದಲ್ಲಿ 50 ವಿಮಾನಗಳ ಹಾರಾಟ ರದ್ದುಗೊಂಡಿತ್ತು. ಉಳಿದಂತೆ, ಇತರೆ ವಿಮಾನ ನಿಲ್ದಾಣಗಳಲ್ಲಿ ಹಾರಾಟವೂ ರದ್ದಾಗಿತ್ತು ಎಂದು ಮೂಲಗಳು ಧೃಢಪಡಿಸಿವೆ.

ದೇಶದ ಪ್ರಮುಖ ಆರು ವಿಮಾನ ನಿಲ್ದಾಣಗಳಾದ ದೆಹಲಿ, ಮುಂಬೈ, ಚೆನ್ನೈ, ಕೋಲ್ಕತ್ತ, ಬೆಂಗಳೂರು ಹಾಗೂ ಹೈದರಾಬಾದ್ ವಿಮಾನ ನಿಲ್ದಾಣಗಳಲ್ಲಿ ಇಂಡಿಗೊ ವಿಮಾನ ನಿಲ್ದಾಣದ ಸಮಯ ಪರಿಪಾಲನೆಯು ಬುಧವಾರ ಶೇ 19.7ಕ್ಕೆ ಇಳಿಕೆಯಾಗಿತ್ತು. ಮಂಗಳವಾರ ಈ ಪ್ರಮಾಣವು ಶೇಕಡ 35ರಷ್ಟಿತ್ತು ಎಂದು ಅಂಕಿಅಂಶಗಳಿಂದ ಕಂಡುಬಂದಿದೆ.

ಪರಿಸ್ಥಿತಿ ಕುರಿತಂತೆ ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯವು (ಡಿಜಿಸಿಎ) ವಿಮಾನಯಾನ ಸಂಸ್ಥೆಯ ಅಧಿಕಾರಿಗಳ ಜೊತೆಗೆ ಗುರುವಾರ ತುರ್ತು ಸಭೆ ನಡೆಸಿ ಚರ್ಚಿಸಿದೆ.

ಇಂಡಿಗೊ ವಿಮಾನಗಳ ವ್ಯತ್ಯಯ ಉಂಟಾದ ಕುರಿತು ಕಾರಣ ಹಾಗೂ ಸದ್ಯದ ಪರಿಸ್ಥಿತಿ ಕುರಿತು ವಿಸ್ತೃತ ವರದಿ ನೀಡುವಂತೆ ಇಂಡಿಗೊ ಸಂಸ್ಥೆಗೆ ಡಿಜಿಸಿಎ ಅಧಿಕಾರಿಗಳು ಸೂಚನೆ ನೀಡಿದ್ದು, ವಿಮಾನಗಳ ಹಾರಾಟ ರದ್ದು ಹಾಗೂ ವಿಳಂಬವನ್ನು ಕಡಿಮೆಗೊಳಿಸುವಂತೆ ತಿಳಿಸಿದೆ.

ಷೇರು ಕುಸಿತ: ವಿಮಾನಗಳ ಹಾರಾಟ ರದ್ದುಗೊಂಡಿದ್ದರಿಂದ ಷೇರು ಮಾರುಕಟ್ಟೆಯಲ್ಲಿ ಇಂಡಿಗೊ ಷೇರುಗಳ ಮೌಲ್ಯವು ಗುರುವಾರ ಮಧ್ಯಾಹ್ನದ ವೇಳೆಗೆ ಶೇಕಡ 3ರಷ್ಟು ಕುಸಿತ ದಾಖಲಿಸಿತು.

ಸಂಸ್ಥೆಯಲ್ಲಿ ವಿಮಾನ ಕರ್ತವ್ಯದ ಸಮಯದ ಮಿತಿ (ಎಫ್‌ಡಿಟಿಎಲ್) ಎರಡನೇ ಹಂತವನ್ನು ಜಾರಿಗೊಳಿಸಿದ್ದರಿಂದ ಸಿಬ್ಬಂದಿ ಕೊರತೆಯಾಗಿದೆ. ಇದರಿಂದಲೇ ವಿಮಾನಗಳ ಹಾರಾಟದಲ್ಲಿ ವ್ಯತ್ಯಯ ಉಂಟಾಗಿದೆ ಎಂದು ಮೂಲಗಳು ತಿಳಿಸಿವೆ.

ಇಂಡಿಗೊ ಏರ್‌ಲೈನ್ಸ್ ಸಂಸ್ಥೆಯು ದೇಶೀಯ ಹಾಗೂ ಅಂತರರಾಷ್ಟ್ರೀಯ ಮಾರ್ಗದಲ್ಲಿ 2,300 ವಿಮಾನಗಳ ಹಾರಾಟ ನಡೆಸುತ್ತಿವೆ. ಕಳೆದೆರಡು ದಿನಗಳ ವಿಮಾನಗಳ ಹಾರಾಟ ವ್ಯತ್ಯಯ ಉಂಟಾಗಿದ್ದಕ್ಕೆ ಪ್ರಯಾಣಿಕರ ಕ್ಷಮೆಯಾಚಿಸಿದ್ದು, ಪರಿಸ್ಥಿತಿ ಸಹಜಸ್ಥಿತಿಗೆ ತರುವ ನಿಟ್ಟಿನಲ್ಲಿ ವಿಮಾನಗಳ ಹಾರಾಟವನ್ನು ಮರು ಹೊಂದಾಣಿಕೆ ಮಾಡಲಾಗುತ್ತಿದೆ ಎಂದು ತಿಳಿಸಿದೆ.

ಎಫ್‌ಐಪಿ ಆಕ್ರೋಶ: 'ವಿಮಾನಗಳ ಕೆಲಸದ ಹೊಸ ನೀತಿ ಹಾಗೂ ಪೈಲಟ್‌ಗಳ ವಿಶ್ರಾಂತಿ ನೀತಿ ಜಾರಿಗೊಳಿಸಲು ಸಂಸ್ಥೆಗೆ ಎರಡು ವರ್ಷಗಳ ಕಾಲ ಗಡುವನ್ನು ಸರ್ಕಾರ ನೀಡಿತ್ತು. ಆದರೂ, ಹೊಸ ನೇಮಕಾತಿಯನ್ನು ಸ್ಥಗಿತಗೊಳಿಸಿತ್ತು' ಎಂದು ಭಾರತೀಯ ಪೈಲಟ್‌ಗಳ ಒಕ್ಕೂಟ (ಎಫ್‌ಐಪಿ)ವು ಆಕ್ರೋಶ ವ್ಯಕ್ತಪಡಿಸಿದೆ.

ಪ್ರಯಾಣಿಕರ ಸುರಕ್ಷತೆ ಹಾಗೂ ವಿಶ್ವಾಸಾರ್ಹತೆಗೆ ತಕ್ಕಂತೆ ಸಂಸ್ಥೆಯು ಅಗತ್ಯ ಸಿಬ್ಬಂದಿ ಹೊಂದದ ಹೊರತಾಗಿ ಯಾವುದೇ ಕಾರಣಕ್ಕೂ ಋತುಮಾನಗಳ (ಸೀಸನಲ್) ವಿಮಾನಗಳ ಹಾರಾಟಕ್ಕೂ ಅವಕಾಶ ನೀಡಬಾರದು ಎಫ್‌ಐಪಿಯು ಡಿಜಿಸಿಎ ಅನ್ನು ಒತ್ತಾಯಿಸಿದೆ.

'ಇಂಡಿಗೊ ವಿಮಾನಯಾನ ಸಂಸ್ಥೆಯಲ್ಲಿ ಸಿಬ್ಬಂದಿ ಕಾರ್ಯಾಚರಣೆ ವ್ಯತ್ಯಯ ಉಂಟಾಗಲು ಸಂಸ್ಥೆಯು ಪೂರ್ವ ಸಿದ್ಧತೆಯ ಕೊರತೆಯೇ ಕಾರಣ' ಎಂದು ಭಾರತೀಯ ವಿಮಾನಯಾನ ಪೈಲಟ್‌ಗಳ ಸಂಘ (ಎಎಲ್‌ಪಿಎ) ಆರೋಪಿಸಿದೆ. ಇದು ಡಿಜಿಸಿಎ ಪ್ರಕಟಿಸಿರುವ ಹೊಸ ನಿಯಾಮವಳಿಗಳ ಮೇಲೆ ಒತ್ತಡ ತಂತ್ರವೂ ಇರಬಹುದು ಎಂದು ಎಚ್ಚರಿಸಿದೆ.

ಸಿಬ್ಬಂದಿ ಕೆಲಸದ ಮಾನದಂಡ

ಮಾನದಂಡ	ಹಳೆಯದು	ಹೊಸತು
ವಾರದ ವಿಶ್ರಾಂತಿ	36 ಗಂಟೆ	48 ಗಂಟೆ
ರಾತ್ರಿ ಕೆಲಸದ ಅವಧಿ	12 ರಿಂದ 5	12 ರಿಂದ 6
ದಿನಕ್ಕೆ ಕೆಲಸದ ಗರಿಷ್ಠ ಅವಧಿ	10 ರಿಂದ 12	10 ಗಂಟೆ
ಒಟ್ಟು ಕೆಲಸದ ಅವಧಿ(14ದಿನಕ್ಕೆ)	100 ಗಂಟೆ	95 ಗಂಟೆ

ಎರಡು ವಿಮಾನಗಳಿಗೆ ಬಾಂಬ್ ಬೆದರಿಕೆ ಕರೆ

ಅಹಮದಾಬಾದ್ (ಪಿಟಿಐ): ಸೌದಿ ಅರೇಬಿಯಾದ ಮದೀನಾದಿಂದ ಹೈದರಾಬಾದ್‌ಗೆ ತೆರಳುತ್ತಿದ್ದ ಇಂಡಿಗೊ ವಿಮಾನಕ್ಕೆ ಬೆದರಿಕೆ ಕರೆ ಬಂದ ಅಹಮದಾಬಾದ್‌ನಲ್ಲಿ ಸುರಕ್ಷಿತವಾಗಿ ಇಳಿಸಲಾಯಿತು.

'ಮಧ್ಯಾಹ್ನ 12.30ಕ್ಕೆ ವಿಮಾನವನ್ನು ಇಲ್ಲಿನ ಸರ್ದಾರ್ ವಲ್ಲಭಬಾಯಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಳಿಸಲಾಯಿತು. ಎಲ್ಲ ಪ್ರಯಾಣಿಕರನ್ನು ಇಳಿಸಿದ ಬಳಿಕ ವಿಮಾನವನ್ನು ಕೂಲಂಕಷವಾಗಿ ಪರಿಶೀಲಿಸಲಾಯಿತು' ಎಂದು ಡಿಸಿಪಿ (ವಲಯ 4) ಅತುಲ್ ಬನ್ಸಾಲ್ ತಿಳಿಸಿದ್ದಾರೆ.

ಶಾರ್ಜಾದಿಂದ ಹೈದರಾಬಾದ್‌ಗೆ ಬಂದಿಳಿದ ಇಂಡಿಗೊ ವಿಮಾನದಲ್ಲಿ ಬಾಂಬ್ ಇಡಲಾಗಿದೆ ಎಂದು ಹೈದರಾಬಾದ್‌ನ ರಾಜೀವ್ ಗಾಂಧಿ ವಿಮಾನ ನಿಲ್ದಾಣದ ಅಧಿಕಾರಿಗಳು ಇ–ಮೇಲ್ ಸ್ವೀಕರಿಸಿದ್ದರು. ವಿಮಾನ ಕೆಳಗಿಳಿಯುತ್ತಿದ್ದಂತೆಯೇ, ಭದ್ರತಾ ಸಿಬ್ಬಂದಿಗಳು ಶೋಧ ನಡೆಸಿ ಹುಸಿ ಕರೆ ಎಂದು ಖಚಿತಪಡಿಸಿದರು.

ರಾಯಪುರದಲ್ಲಿ ವಿಮಾನಕ್ಕೆ ಕಾಯುತ್ತಿದ್ದ ಪ್ರಯಾಣಿಕರು – ಪಿಟಿಐ ಚಿತ್ರ

ಪ್ರಯಾಣಿಕರ ಆಕ್ರೋಶ

ಇಂಡಿಗೊ ಈಗ ಭೀಕರ ಸ್ಥಿತಿಯಲ್ಲಿದೆ. ಒಂದಾದ ನಂತರ ಒಂದರಂತೆ ವಿಮಾನಗಳ ಹಾರಾಟ ರದ್ದುಗೊಂಡಿದೆ. ಪ್ರಯಾಣಿಕರು ಸಂಸ್ಥೆಯ ಸಿಬ್ಬಂದಿ ಜೊತೆ ಜಗಳಕ್ಕೆ ಇಳಿದಿದ್ದಾರೆ. ಹಾರಾಟದ ಬಗ್ಗೆ ಯಾವುದೇ ಸ್ಪಷ್ಟತೆಯಿಲ್ಲ. ಇಂದು ಪ್ರಯಾಣಿಸುವ ಉದ್ದೇಶವಿದ್ದರೆ, ನಿಲ್ದಾಣಕ್ಕೆ ಬರಬೇಡಿ

ಅರುಣ್ ಪ್ರಭುದೇಸಾಯಿ, ಅರ್ಮ್ಕೋನ್ ಮಿಡಿಯಾ ಸಂಸ್ಥಾಪಕ

ಇಂಡಿಗೊ ವಿಮಾನಗಳ ಹಾರಾಟ ರದ್ದಾಗಿ, ಪ್ರಯಾಣಿಕರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಹೆಚ್ಚಿನ ಪ್ರಯಾಣದರ, ಕಳಪೆ ಮೂಲಸೌಕರ್ಯ, ವಿಮಾನ ರದ್ದತಿಗಳು ಪುನರಾವರ್ತನೆಯಾಗುತ್ತಿವೆ. ವಿಮಾನಯಾನ ಸಚಿವರು ಈ ಕುರಿತು ಸ್ವಯಂಪ್ರೇರಿತರಾಗಿ ಹೇಳಿಕೆ ನೀಡಬಹುದು ಎಂದು ನಿರೀಕ್ಷಿಸುತ್ತೇನೆ

ಪ್ರಿಯಾಂಕ ಚತುರ್ವೇದಿ, ಶಿವಸೇನಾ (ಯುಬಿಟಿ) ರಾಜ್ಯಸಭಾ ಸಂಸದೆ

ಶೇಕಡ 60ರಷ್ಟು ಮಾರುಕಟ್ಟೆಯ ಪಾಲು ಜವಾಬ್ದಾರಿಯಿಂದ ಬರುತ್ತದೆ ಹೊರತು ನೆಪದಿಂದ ಅಲ್ಲ. ಇಂಡಿಗೊ ಸಂಸ್ಥೆಯು ಸಾವಿರಾರು ಪ್ರಯಾಣಿಕರಿಗೆ ತೊಂದರೆ ಉಂಟುಮಾಡಿದೆ. ಈ ಕುರಿತು ಡಿಜಿಸಿಎ ಕಠಿಣವಾದ ಕ್ರಮ ಕೈಗೊಳ್ಳಬೇಕು

ಸತ್ಯಜಿತ್ ತಂಬೆ ಪಾಟೀಲ್, ಪಕ್ಷೇತರ ಶಾಸಕ ಮಹಾರಾಷ್ಟ್ರ

ಸೋಮಣ್ಣ ಅಥವಾ ಜಗದೀಶ ಶೆಟ್ಟರ್ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸುವಂತೆ ಮನವಿ

ತಂತ್ರಗಾರಿಕೆ ಬದಲಿಸಿದ ಬಿಜೆಪಿ ಭಿನ್ನರು

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಬದಲಾವಣೆಗೆ ಪಟ್ಟು ಹಿಡಿದು ವರ್ಷದಿಂದ ಹೋರಾಟ ಮಾಡಿದ್ದ ಬಿಜೆಪಿ ಭಿನ್ನರು ಇದೀಗ ತಮ್ಮ ತಂತ್ರಗಾರಿಕೆ ಬದಲಿಸಿದ್ದಾರೆ.

'ಬಿಜೆಪಿಯಲ್ಲಿ ಸಾಮಾನ್ಯವಾಗಿ ಮೂರು ವರ್ಷದ ಅವಧಿಗೆ ಅಧ್ಯಕ್ಷರನ್ನು ನೇಮಕ ಮಾಡಲಾಗುತ್ತದೆ. ವಿಜಯೇಂದ್ರ ಅವರು ಅಧ್ಯಕ್ಷರಾಗಿ ಎರಡು ವರ್ಷಗಳು ಕಳೆದಿವೆ. ಇನ್ನೂ ಒಂದು ವರ್ಷದ ಅವಧಿಗೆ ವಿಜಯೇಂದ್ರ ಮುಂದುವರಿಕೆಗೆ ನಮ್ಮ ಅಡ್ಡಿ ಇಲ್ಲ. ಆದರೆ, 2028ರ ವಿಧಾನಸಭಾ ಚುನಾವಣೆಗೆ ಮುನ್ನ ವಿಜಯೇಂದ್ರ ಬದಲಿಸಬೇಕು. ಎಲ್ಲರನ್ನೂ ವಿಶ್ವಾಸಕ್ಕೆ ಪಡೆದು ಪಕ್ಷವನ್ನು ಮುನ್ನಡೆಸುವವರಿಗೆ ನಾಯಕತ್ವ ನೀಡಬೇಕು' ಎಂದು ಭಿನ್ನರು ದಾಳ ಉರುಳಿಸಿದ್ದಾರೆ. ಕೇಂದ್ರ ಸಚಿವ ವಿ.ಸೋಮಣ್ಣ ಅಥವಾ ಸಂಸದ ಜಗದೀಶ ಶೆಟ್ಟರ್ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಬೇಕು ಎಂದು ವರಿಷ್ಠರಿಗೆ ಮನವಿ ಮಾಡಿದ್ದಾರೆ.

ಕಳೆದ ಮೂರು ದಿನಗಳಿಂದ ರಾಷ್ಟ್ರ ರಾಜಧಾನಿಯಲ್ಲಿ ಮೊಕ್ಕಾಂ ಹೂಡಿರುವ ಶಾಸಕರಾದ ರಮೇಶ ಜಾರಕಿಹೊಳಿ, ಬಿ.ಪಿ. ಹರೀಶ್, ಮಾಜಿ ಶಾಸಕರಾದ ಕುಮಾರ್ ಬಂಗಾರಪ್ಪ, ಶ್ರೀಮಂತ ಪಾಟೀಲ, ಮುಖಂಡ ಎನ್. ಆರ್.ಸಂತೋಷ್ ಮತ್ತಿತರರು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಭೇಟಿಗೆ ಪ್ರಯತ್ನ ನಡೆಸಿದ್ದಾರೆ. ಬಿಜೆಪಿ ರಾಜ್ಯ ಉಸ್ತುವಾರಿ ರಾಧಾಮೋಹನ್ ದಾಸ್ ಅಗರವಾಲ್ ಅವರನ್ನು ಭೇಟಿ ಮಾಡಿ ತಮ್ಮ ನಿಲುವು ತಿಳಿಸಿದ್ದಾರೆ.

ತಟಸ್ಥರ ಗುಂಪಿನಲ್ಲಿ ಗುರುತಿಸಿಕೊಂಡಿರುವ ವಿ.ಸೋಮಣ್ಣ, ಸಂಸದರಾದ ಬಸವರಾಜ ಬೊಮ್ಮಾಯಿ, ಡಾ.ಕೆ. ಸುಧಾಕರ್, ಜಗದೀಶ ಶೆಟ್ಟರ್ ಮತ್ತಿತರರನ್ನು ಭೇಟಿ ಮಾಡಿ ಸಮಾಲೋಚಿಸಿದ್ದಾರೆ. ಕೇಂದ್ರದ ಭಾರಿ ಕೈಗಾರಿಕೆ ಹಾಗೂ ಉಕ್ಕು ಸಚಿವ ಎಚ್‌.ಡಿ.ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿ ಚರ್ಚಿಸಿದ್ದಾರೆ. ಈ ವೇಳೆ ಕುಮಾರಸ್ವಾಮಿ, 'ನಾನು ಬಿಜೆಪಿ ಜತೆಗೆ ಇದ್ದೇನೆ. ಆದರೆ, ಭಿನ್ನಮತದ ಜತೆಗೆ ಅಲ್ಲ' ಎಂದೂ ಸ್ಪಷ್ಟಪಡಿಸಿದ್ದಾರೆ.

ಗುರುವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಕುಮಾರ್ ಬಂಗಾರಪ್ಪ, 'ಶಾಸಕ ಬಸನಗೌಡ ಪಾಟೀಲ ಯತ್ನಾಳ ಉಚ್ಚಾಟನೆಯ ಬಳಿಕ ನಾವು ಉತ್ಸಾಹ ಕಳೆದುಕೊಂಡಿಲ್ಲ. ವರಿಷ್ಠರ ಮುಂದೆ ನಮ್ಮ ವಿಚಾರಗಳನ್ನು ತಿಳಿಸಿದ್ದೇವೆ. ಜತೆಗೆ, ಪಕ್ಷ ಸಂಘಟನೆ ಮಾಡುತ್ತಿದ್ದೇವೆ. 2028ಕ್ಕೆ ಪಕ್ಷವನ್ನು ಅಧಿಕಾರಕ್ಕೆ ತರಬೇಕು. ಸಂಘಟನೆಗೆ ಒತ್ತು ಕೊಡುವ ವ್ಯಕ್ತಿಗಳು ನಮಗೆ ಬೇಕು' ಎಂದರು.

'ಬಿಜೆಪಿಯಲ್ಲಿ ಯಾವುದೇ ಬಣವಿಲ್ಲ'

ಬಿ.ವೈ. ವಿಜಯೇಂದ್ರ

ಕೊಟ್ಟೂರು (ವಿಜಯನಗರ ಜಿಲ್ಲೆ): 'ಬಿಜೆಪಿಯಲ್ಲಿ ಯಾವುದೇ ಬಣಗಳಿಲ್ಲ. ಬಡಿದಾಟವೂ ಇಲ್ಲ. ಇರುವುದೊಂದೇ, ಅದು ಬಿಜೆಪಿ ಬಣ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಗುರುವಾರ ಹೇಳಿದರು.

ಬಿಜೆಪಿಯಲ್ಲಿನ ಕೆಲ ಭಿನ್ನಮತೀಯರು ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಅವರನ್ನು ಭೇಟಿಯಾದ ವಿಷಯದ ಬಗ್ಗೆ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 'ಕುಮಾರಸ್ವಾಮಿ ಕೇಂದ್ರ ಸಚಿವರು. ಅವರನ್ನು ಯಾರು ಬೇಕಾದರೂ ಭೇಟಿ ಆಗಬಹುದು. ಶಾಸಕರು ಅಲ್ಲದೇ ಗ್ರಾಮ ಪಂಚಾಯಿತಿ ಸದಸ್ಯರು ಕೂಡ ಭೇಟಿ ಮಾಡಬಹುದು' ಎಂದರು.

ಕೆ.ಎನ್.ರಾಜಣ್ಣ ಪುತ್ರ ರಾಜೇಂದ್ರ ಬಿಜೆಪಿ ನಾಯಕರ ಸಂಪರ್ಕದಲ್ಲಿ ಇರುವ ವಿಷಯ ಕೇಳಿದಾಗ, 'ಇದರ ಮಾಹಿತಿ ನನಗಿಲ್ಲ' ಎಂದರು. 'ರಾಜ್ಯ ಸರ್ಕಾರ ರೈತರ ಸಮಸ್ಯೆಯನ್ನು ಬಗೆಹರಿಸುವುದನ್ನು ಬಿಟ್ಟು ಕುರ್ಚಿ ಕಿತ್ತಾಟದಲ್ಲಿ ತೊಡಗಿದೆ' ಎಂದು ಅವರು ಹೇಳಿದರು.

ಎಂವಿಐ, ಎಇಇ ನೇಮಕಾತಿ: ಅನುಮತಿ ವಾಪಸ್

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ವಿಶೇಷ ಪ್ರಕರಣ ಎಂದು ಪರಿಗಣಿಸಿದ ರಾಜ್ಯ ಸರ್ಕಾರ
- ಕೆಪಿಎಸ್‌ಸಿ ಕಾರ್ಯದರ್ಶಿಗೆ ಪತ್ರ

ಬೆಂಗಳೂರು: ಮೋಟಾರು ವಾಹನ ನಿರೀಕ್ಷಕ (ಎಂವಿಐ) ಮತ್ತು ಸಹಾಯಕ ಕಾರ್ಯಪಾಲಕ ಎಂಜಿನಿಯರ್ (ಎಇಇ) ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ‘ವಿಶೇಷ ಪ್ರಕರಣ’ವೆಂದು ಪರಿಗಣಿಸಿ ಮುಂದುವರಿಸಲು ಕೆಪಿಎಸ್‌ಸಿಗೆ ನೀಡಿದ್ದ ಅನುಮತಿಯನ್ನು ರಾಜ್ಯ ಸರ್ಕಾರ ಹಿಂಪಡೆದಿದೆ.

ಈ ಬಗ್ಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಕಾರ್ಯದರ್ಶಿ ಕೆಪಿಎಸ್‌ಸಿ ಕಾರ್ಯದರ್ಶಿಗೆ ಗುರುವಾರ ಪತ್ರ ಬರೆದಿದ್ದಾರೆ.

ಲೋಕೋಪಯೋಗಿ ಇಲಾಖೆಯ ಎಇಇ ಒಟ್ಟು 42 (ಈ ಪೈಕಿ 12 ಹೈಕ) ಹುದ್ದೆಗಳ ನೇಮಕಾತಿಗೆ 2024ರ ಸೆ. 18ರಂದು ಹಾಗೂ ಸಾರಿಗೆ ಇಲಾಖೆಯಲ್ಲಿನ ಎಂವಿಐ ಒಟ್ಟು 76 (ಈ ಪೈಕಿ 6 ಹೈಕ) ಹುದ್ದೆಗಳಿಗೆ ನೇಮಕಾತಿಗೆ 2024ರ ಮಾರ್ಚ್ 14ರಂದು ಕೆಪಿಎಸ್‌ಸಿ ಅಧಿಸೂಚನೆ ಹೊರಡಿಸಿತ್ತು.

ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಅಳವಡಿಸಬೇಕೆಂಬ ಕಾರಣಕ್ಕೆ 2024ರ ಅ. 28ಕ್ಕೂ ಮೊದಲು ನೇಮಕಾತಿಗೆ ಅಧಿಸೂಚನೆ ಹೊರಡಿಸಿ, ಆ ಅಧಿಸೂಚನೆಯಲ್ಲಿ ಅ. 28ರ ನಂತರ ಯಾವುದಾದರೂ ತಿದ್ದುಪಡಿ ಆಗಿದ್ದರೆ, ಅಂತಹ ಎಲ್ಲ ಅಧಿಸೂಚನೆಗಳನ್ನೂ ರದ್ದುಪಡಿಸಬೇಕು. ಒಳ ಮೀಸಲಾತಿ ಅಳವಡಿಸಿ ಮರು ಅಧಿಸೂಚನೆ ಹೊರಡಿಸಿ, ನೇಮಕಾತಿ ಪ್ರಕ್ರಿಯೆ ನಡೆಸಬೇಕು ಎಂದು 2025ರ ಸೆ. 4ರಂದು ಸರ್ಕಾರ ಆದೇಶ ಹೊರಡಿಸಿತ್ತು.

ಇದರ ಅನ್ವಯ ಎರಡೂ ತಿದ್ದುಪಡಿ ಅಧಿಸೂಚನೆಗಳನ್ನು ರದ್ದುಪಡಿಸಲು ಕೆಪಿಎಸ್‌ಸಿ ನಿರ್ಣಯ ತೆಗೆದುಕೊಂಡಿತ್ತು. ಆದರೆ, ಅದನ್ನು ಮರೆಮಾಚಿ ಈ ಹುದ್ದೆಗಳಿಗೆ ನೇಮಕಾತಿ ಮುಂದುವರಿಸಲು ಕೆಪಿಎಸ್‌ಸಿ ಅಧ್ಯಕ್ಷ ಮತ್ತು ಕಾರ್ಯದರ್ಶಿ ಸರ್ಕಾರದಿಂದ ಅನುಮತಿ ಪಡೆದಿದ್ದಾರೆಂದು ಆರೋಪಿಸಿ ಆಯೋಗದ ಸಭೆಯಲ್ಲಿ ಸದಸ್ಯರು ಆಕ್ಷೇಪಿಸಿದ್ದರು.

ರಾಜ್ಯದ ಅಲ್ಪಸಂಖ್ಯಾತರಿಗೆ ಅಲ್ಪ ಸಾಲ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಷ್ಟ್ರೀಯ ಅಲ್ಪಸಂಖ್ಯಾತರ ಅಭಿವೃದ್ಧಿ ಮತ್ತು ಹಣಕಾಸು ನಿಗಮದ ಮೂಲಕ ಕಳೆದ ಮೂವತ್ತು ವರ್ಷಗಳಲ್ಲಿ ಕೇರಳದಲ್ಲಿ ₹2,964 ಕೋಟಿ ಸಾಲ ನೀಡಿದ್ದರೆ, ರಾಜ್ಯದಲ್ಲಿ ಕೊಟ್ಟಿರುವುದು ₹138 ಕೋಟಿ ಮಾತ್ರ.

ಲೋಕಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ರಾಯಚೂರು ಸಂಸದ ಜಿ.ಕುಮಾರ ನಾಯಕ ಪ್ರಶ್ನೆಗೆ ಅಲ್ಪಸಂಖ್ಯಾತ ಕಲ್ಯಾಣ ಸಚಿವ ಕಿರಣ್ ರಿಜಿಜು ನೀಡಿರುವ ಉತ್ತರದಲ್ಲಿ ಈ ಮಾಹಿತಿ ಇದೆ. ನೆರೆಯ ತಮಿಳುನಾಡಿನಲ್ಲಿ ₹660 ಕೋಟಿ ಸಾಲ ಕೊಡಲಾಗಿದೆ.

ಕರ್ನಾಟಕದಲ್ಲಿ 96 ಲಕ್ಷ ಅಲ್ಪಸಂಖ್ಯಾತರು ವಾಸವಾಗಿದ್ದು, ಇದು ರಾಜ್ಯದ ಒಟ್ಟು ಜನಸಂಖ್ಯೆಯ ಶೇ 15.92. ರಾಜ್ಯಕ್ಕೆ ಕಳೆದ 30 ವರ್ಷಗಳಲ್ಲಿ ಕೇವಲ ₹3.73 ಕೋಟಿ ಮೈಕ್ರೋ ಸಾಲ ಮತ್ತು ₹134 ಕೋಟಿ ಟರ್ಮ್ ಲೋನ್ ಮಾತ್ರ ದೊರಕಿರುವುದು ಅಸಮರ್ಪಕ ಎಂದು ಕುಮಾರ ನಾಯಕ ದೂರಿದರು. ಕಳೆದ ಐದು ವರ್ಷಗಳಲ್ಲಿ ರಾಜ್ಯದಲ್ಲಿ 680 ಜನರು ಮಾತ್ರ ಈ ಸಾಲ ಪಡೆದಿದ್ದಾರೆ.

ಚಟಿಕೆ ಸುದ್ದಿ

ಹಾವೇರಿ: ಜಮೀನಿನಲ್ಲಿ 4 ವರ್ಷದ ಚಿರತೆ ಸೆರೆ

ಬೋನಿನಲ್ಲಿ ಚಿರತೆ ಸೆರೆ ಸಿಕ್ಕಿದೆ

ರಟ್ಟೀಹಳ್ಳಿ (ಹಾವೇರಿ ಜಿಲ್ಲೆ): ತಾಲ್ಲೂಕಿನ ಕಡೂರು ಗ್ರಾಮದ ಹೊರವಲಯದ ತಡಕಲಿಮಟ್ಟಿ ಗುಡ್ಡದ ಜಮೀನಿನಲ್ಲಿ ಅರಣ್ಯ ಇಲಾಖೆ ಅಳವಡಿಸಿದ್ದ ಬೋನಿಗೆ ನಾಲ್ಕು ವರ್ಷದ ಹೆಣ್ಣು ಚಿರತೆಯೊಂದು ಸೆರೆ ಸಿಕ್ಕಿದೆ.

ತಾಲ್ಲೂಕಿನ ಕಣವಿಶಿದ್ಗೇರಿ ಗ್ರಾಮದ ಜಮೀನುವೊಂದರಲ್ಲಿ ಕಳೆದ ತಿಂಗಳು ಚಿರತೆ ದಾಳಿಯಿಂದ ರೈತರೊಬ್ಬರು ಮೃತಪಟ್ಟಿದ್ದರು. ಇದಾದ ಬಳಿಕ ಅರಣ್ಯ ಇಲಾಖೆ ಬೋನು ಇರಿಸಿತ್ತು.

‘ಮಂಗಳವಾರ ಮಧ್ಯರಾತ್ರಿ ಚಿರತೆ ಸಿಕ್ಕಿದೆ. ಇನ್ನಷ್ಟು ಚಿರತೆಗಳು ಇರುವ ಬಗ್ಗೆ ಅನುಮಾನವಿದೆ’ ಎಂದು ಹಿರೇಕೆರೂರ ವಲಯ ಅರಣ್ಯಾಧಿಕಾರಿ ವಿಜಯಕುಮಾರ ತಿಳಿಸಿದರು.

ರಾಹುಲ ಜಾರಕಿಹೊಳಿ ಅಪೆಕ್ಸ್ ಬ್ಯಾಂಕ್ ನಿರ್ದೇಶಕ

ರಾಹುಲ ಜಾರಕಿಹೊಳಿ

ಬೆಳಗಾವಿ: ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗೆ ನಿರ್ದೇಶಕರಾಗಿ ಅವಿರೋಧ ಆಯ್ಕೆಯಾದ ರಾಹುಲ ಸತೀಶ ಜಾರಕಿಹೊಳಿ ಅವರನ್ನು ಅಪೆಕ್ಸ್ ಬ್ಯಾಂಕ್‌ಗೆ ನಿರ್ದೇಶಕರಾಗಿ ಅವಿರೋಧ ಆಯ್ಕೆಯಾಗಿದ್ದಾರೆ.

ಎರಡು ದಶಕಗಳಿಂದ ಶಾಸಕ ಲಕ್ಷ್ಮಣ ಸವದಿ ಅವರೇ ಅಪೆಕ್ಸ್ ಬ್ಯಾಂಕ್ ನಿರ್ದೇಶಕರಾಗಿದ್ದರು. ಹಿರಿಯ ನಾಯಕರೆಲ್ಲರನ್ನು ಹಿಂದೆ ಸರಿಸಿ, ಯುವಕ ರಾಹುಲ್ ಅವರನ್ನು ಅಪೆಕ್ಸ್ ಬ್ಯಾಂಕ್‌ಗೆ ಕಳುಹಿಸಲಾಗಿದೆ.

‘ಲಕ್ಷ್ಮಣ ಸವದಿ ಅವರಿಗೆ ಈ ಬಾರಿ ಸಚಿವ ಸ್ಥಾನ ಸಿಗದಿದ್ದಲ್ಲಿ ಅಪೆಕ್ಸ್ ಬ್ಯಾಂಕ್ ಅಧ್ಯಕ್ಷರಾಗಿ ಮಾಡಲಾಗುತ್ತದೆ’ ಎಂಬ ಚರ್ಚೆ ಜಿಲ್ಲೆಯಲ್ಲಿ ಜೋರಾಗಿ ನಡೆದಿತ್ತು. ರಾಹುಲ ಆಯ್ಕೆ ಸವದಿ ಅವರಿಗೆ ತೀವ್ರ ಹಿನ್ನಡೆ ತಂದಿದೆ. ಲೋಕೋಪಯೋಗಿ ಇಲಾಖೆ ಸಚಿವ ಸತೀಶ ಜಾರಕಿಹೊಳಿ ಹಾಗೂ ಶಾಸಕ ಬಾಲಚಂದ್ರ ಜಾರಕಿಹೊಳಿ ಅವರ ಈ ಗೋಪ್ಯ ನಡೆ ರಾಜಕೀಯ ವಲಯದಲ್ಲಿ ಮತ್ತೆ ಚರ್ಚೆ ಹುಟ್ಟುಹಾಕಿದೆ.

ಕೊಡಗಿನಲ್ಲಿ ಸಂಭ್ರಮದ ಹುತ್ತರಿ

ಮಡಿಕೇರಿ: ಕೊಡಗು ಜಿಲ್ಲೆಯಾದ್ಯಂತ ಗುರುವಾರ ರಾತ್ರಿ ಸುಗ್ಗಿ ಹಬ್ಬ ಪುತ್ತರಿ (ಹುತ್ತರಿ) ಸಂಭ್ರಮ ಗರಿಗೆದರಿತು. ತಾಲ್ಲೂಕಿನ ಕಕ್ಕಬ್ಬೆಯ ಪಾಡಿ ಇಗ್ಗುತ್ತಪ್ಪ ದೇವಾಲಯದಲ್ಲಿ ಮೊದಲಿಗೆ ನೆರೆ ಕಟ್ಟುವುದು, ಕದಿರು ತೆಗೆಯುವುದು ಸೇರಿದಂತೆ ವಿವಿಧ ಆಚರಣೆಗಳು ನಡೆಯುತ್ತಿದ್ದಂತೆ ಜಿಲ್ಲೆಯಾದ್ಯಂತ ಬಾಣಬಿರುಸುಗಳನ್ನು ಹಾರಿ ಬಿಟ್ಟು ಜನ ಸಂಭ್ರಮಿಸಿದರು.

ನಂತರ, ಎಲ್ಲೆಡೆ ಭತ್ತದ ಕದಿರು ತೆಗೆದು ಪೂಜಿಸಿ ಹಬ್ಬವನ್ನು ಆಚರಿಸಿದರು.

₹20 ಲಕ್ಷ ಕೋಟಿಗೆ ಇ.ವಿ.ವಾಹನ ಮಾರುಕಟ್ಟೆ: ಗಡ್ಕರಿ

ನವದೆಹಲಿ: ‘2030ರ ವೇಳೆಗೆ ಎಲೆಕ್ಟ್ರಿಕ್ ವಾಹನ (ಇ.ವಿ) ಮಾರುಕಟ್ಟೆ ಒಟ್ಟು ₹20 ಲಕ್ಷ ಕೋಟಿಗೆ ಬೆಳೆಯಲಿದ್ದು, ಐದು ಕೋಟಿ ಹೊಸ ಉದ್ಯೋಗಗಳು ಸೃಷ್ಟಿಯಾಗಲಿವೆ’ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಗುರುವಾರ ಹೇಳಿದರು.

ಲೋಕಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಬೆಂಗಳೂರು ಕೇಂದ್ರ ಸಂಸದ ಪಿ.ಸಿ.ಮೋಹನ್ ಪ್ರಶ್ನೆಗೆ ಉತ್ತರಿಸಿದ ಅವರು, ‘ಪ್ರಸ್ತುತ ದೇಶದಲ್ಲಿ 57 ಲಕ್ಷ ಇ.ವಿ. ವಾಹನಗಳು ನೋಂದಣಿ ಆಗಿವೆ. ಕರ್ನಾಟಕದಲ್ಲಿ 2020ರಲ್ಲಿ 9,686 ವಾಹನಗಳು ನೋಂದಣಿ ಆಗಿದ್ದರೆ, 2025ರಲ್ಲಿ 1.69 ಲಕ್ಷ ನೋಂದಣಿಯಾಗಿವೆ’ ಎಂದರು.

‘2024-25ರಲ್ಲಿ ಇ.ವಿ. ವಾಹನಗಳ ಮಾರಾಟವು ಶೇ.208 ರಷ್ಟು ಹೆಚ್ಚಾಗಿದೆ. ಆದರೆ, ಪೆಟ್ರೋಲ್ ಮತ್ತು ಡೀಸೆಲ್ ಮಾರಾಟವು ಶೇ.4.2ರಷ್ಟು ಜಾಸ್ತಿ ಆಗಿದೆ. ಇ.ವಿ. ದ್ವಿಚಕ್ರ ವಾಹನಗಳ ಮಾರಾಟ ಶೇ.33ರಷ್ಟು, ಪೆಟ್ರೋಲ್ ಮತ್ತು ಡೀಸೆಲ್ ವಾಹನಗಳ ಮಾರಾಟ ಶೇ.14 ರಷ್ಟು ಹೆಚ್ಚಾಗಿದೆ’ ಎಂದರು.

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ

ಉಪ ಪ್ರಧಾನ ವ್ಯವಸ್ಥಾಪರು-4 ರವರ ಕಛೇರಿ, 1ನೇ ಮಹಡಿ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು – 560052. Email: dgm4bswml25@gmail.com

ಸಂಖ್ಯೆ: DGM-4/ BSWML/ Tend/ 01/ 2025-26/Call-2 and
ಸಂಖ್ಯೆ: DGM-4/ BSWML/ Tend/ 02/ 2025-26/Call-2
ದಿನಾಂಕ: 04.12.2025

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) – (2ನೇ ಕರೆ) (ಜಿಓಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

1) **ಉಪ ಪ್ರಧಾನ ವ್ಯವಸ್ಥಾಪಕರು-4, ಬೆಂಗಳೂರು** ಘನತ್ಯಾಜ್ಯ ನಿರ್ವಹಣೆ ನಿಯಮಿತ ಇವರು ಈ ಕೆಳಗೆ ವಿವರಿಸಿರುವ ಕಾಮಗಾರಿಗಳಿಗೆ ಅರ್ಹ ಬಿಡ್‌ದಾರರಿಂದ ವ್ಯವಸ್ಥಾಪಕ ನಿರ್ದೇಶಕರು, ಬಿಎಸ್‌ಡಬ್ಲ್ಯೂಎಂಎಲ್, ಬೆಂಗಳೂರು ಇವರ ಪರವಾಗಿ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ. ಬಿಡ್‌ದಾರರು ಈ ಕೆಳಗೆ ವಿವರಿಸಿರುವ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ (ಎಂದರೆ https://kppp.karnataka.gov.in) ಸಲ್ಲಿಸಬಹುದು. ಬಿಡ್‌ದಾರರು ಗುತ್ತಿಗೆ ನೀಡಿಕೆಗೆ ಅರ್ಹರಾಗಲು ಬಿಡ್‌ದಾರರಿಗೆ ಸೂಚನೆಗಳ ಕಲಂ 3 ರಲ್ಲಿ ನಿರ್ದಿಷ್ಟಪಡಿಸಿರುವ ಕನಿಷ್ಠ ಅರ್ಹತಾ ಅಗತ್ಯಗಳನ್ನು ಗಮನಿಸಲು ಕೋರಿದೆ.
2) ಟೆಂಡರ್ ದಸ್ತಾವೇಜನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಿಂದ **ದಿನಾಂಕ: 08.12.2025** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
3) ಇತರೆ ವಿವರಗಳನ್ನು ಟೆಂಡರ್ ದಸ್ತಾವೇಜುಗಳಲ್ಲಿ ನೋಡಬಹುದು.

ಕ್ರ. ಸಂ.	ಕಾಮಗಾರಿಯ ಹೆಸರು	ಪ್ಯಾಕೇಜ್ ಸಂಖ್ಯೆ	ಪಾಲಿಕೆ ಹೆಸರು	ವರ್ಷಕ್ಕೆ ಟೆಂಡರ್‌ಗೆ ಹಾಕಲಾದ ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ ಮೊತ್ತ (ರೂ. ಗಳಲ್ಲಿ)	ಟೆಂಡರ್ ದಾಖಲೆಯ ವೆಚ್ಚ	ಒಪ್ಪಂದದ ಅವಧಿ
1.	ಪ್ರಾಣಿಗಳ ತ್ಯಾಜ್ಯದ ಸಂಗ್ರಹಣೆ, ಸಾಗಣೆ ಮತ್ತು ಸಂಸ್ಕರಣೆಯ ಸಂಪೂರ್ಣ ಸೇವೆ ಅಂದರೆ. ಕೋಳಿ / ಕೋಳಿ ತ್ಯಾಜ್ಯ, ಮೀನು ತ್ಯಾಜ್ಯ, ಹಂದಿ ತ್ಯಾಜ್ಯ / ಇತರ **ಪ್ರಾಣಿಗಳ ತ್ಯಾಜ್ಯವನ್ನು** ನೇರವಾಗಿ ಅಂಗಡಿಗಳು / ಅಂಗಡಿಗಳಿಂದ / ಅಗತ್ಯವೆಂದು ಪರಿಗಣಿಸಲಾದ ಇತರ ಸ್ಥಳಗಳು (ಆಧಾರ ಎಲ್ಲಿದೆಯೋ ಹಾಗೆಯೇ)	2	ಬೆಂಗಳೂರು ಪೂರ್ವ ಮಹಾನಗರ ಪಾಲಿಕೆ	547.50	8,21,000/-	ಕೆಪಿಪಿ ಪೋರ್ಟಲ್ ಮೂಲಕ	60 ತಿಂಗಳು ಗಳು
2.	ಪ್ರಾಣಿಗಳ ತ್ಯಾಜ್ಯದ ಸಂಗ್ರಹಣೆ, ಸಾಗಣೆ ಮತ್ತು ಸಂಸ್ಕರಣೆಯ ಸಂಪೂರ್ಣ ಸೇವೆ ಅಂದರೆ. **ಮೂಳೆ ತ್ಯಾಜ್ಯವನ್ನು** ಅಂಗಡಿಗಳು / ಅಂಗಡಿಗಳಿಂದ / ಅಗತ್ಯವೆಂದು ಪರಿಗಣಿಸಲಾದ ಇತರ ಸ್ಥಳಗಳಿಂದ ನೇರವಾಗಿ ಸಂಗ್ರಹಿಸಲಾಗುತ್ತದೆ. (ಆಧಾರ ಎಲ್ಲಿದೆಯೋ ಹಾಗೆಯೇ)	1	ಬೆಂಗಳೂರು ಕೇಂದ್ರ ಮಹಾನಗರ ಪಾಲಿಕೆ	21.9	43,800/-	ಕೆಪಿಪಿ ಪೋರ್ಟಲ್ ಮೂಲಕ	60 ತಿಂಗಳು ಗಳು
		2	ಬೆಂಗಳೂರು ಪೂರ್ವ ಮಹಾನಗರ ಪಾಲಿಕೆ	10.95	27,500/-	ಕೆಪಿಪಿ ಪೋರ್ಟಲ್ ಮೂಲಕ	60 ತಿಂಗಳು ಗಳು
		3	ಬೆಂಗಳೂರು ಪಶ್ಚಿಮ ಮಹಾನಗರ ಪಾಲಿಕೆ	21.9	43,800/-	ಕೆಪಿಪಿ ಪೋರ್ಟಲ್ ಮೂಲಕ	60 ತಿಂಗಳು ಗಳು
		4	ಬೆಂಗಳೂರು ಉತ್ತರ ಮಹಾನಗರ ಪಾಲಿಕೆ	16.425	41,500/-	ಕೆಪಿಪಿ ಪೋರ್ಟಲ್ ಮೂಲಕ	60 ತಿಂಗಳು ಗಳು
		5	ಬೆಂಗಳೂರು ದಕ್ಷಿಣ ಮಹಾನಗರ ಪಾಲಿಕೆ	10.95	27,500/-	ಕೆಪಿಪಿ ಪೋರ್ಟಲ್ ಮೂಲಕ	60 ತಿಂಗಳು ಗಳು

ವೇಳಾಪಟ್ಟಿ:
1. ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ **24.12.2025 ರಂದು ಸಂಜೆ 4.00 ಗಂಟೆಯವರೆಗೆ.**
2. ಕೆಪಿಪಿ ಪೋರ್ಟಲ್‌ನಲ್ಲಿ ವಿಚಾರಣೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ **ದಿನಾಂಕ 12.12.2025 ರಂದು ಸಂಜೆ 4.00 ಗಂಟೆಯವರೆಗೆ.**
3. ಬಿಡ್ ಪೂರ್ವಭಾವಿ ಸಭೆ ಮುಖ್ಯ ಎಂಜಿನಿಯರ್ ಮತ್ತು ಮುಖ್ಯ ಜನರಲ್ ಮ್ಯಾನೇಜರ್ (ತಾಂತ್ರಿಕ), ಬಿಎಸ್‌ಡಬ್ಲ್ಯೂಎಂಎಲ್ ಅವರ ಅಧ್ಯಕ್ಷತೆಯಲ್ಲಿ **ದಿನಾಂಕ: 15.12.2025 ರಂದು ಮಧ್ಯಾಹ್ನ 3.00 ಗಂಟೆಗೆ,** ಸಭೆ ಸಭಾಂಗಣ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು – 52 ರಲ್ಲಿ ನಡೆಯಲಿದೆ.
4. ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ 26.12.2025 ರಂದು ಸಂಜೆ 4.00 ಗಂಟೆಯೊಳಗೆ ಅಥವಾ ಮುಂದಿನ ಕೆಲಸದ ದಿನದಂದು.**
5. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ಬಗ್ಗೆ ತಾಂತ್ರಿಕವಾಗಿ ಅರ್ಹ ಬಿಡ್‌ದಾರರಿಗೆ ತಿಳಿಸಲಾಗುವುದು.

ಸಹಿ/- ಉಪ ಪ್ರಧಾನ ವ್ಯವಸ್ಥಾಪಕರು-4
ಬಿಎಸ್‌ಡಬ್ಲ್ಯೂಎಂಎಲ್, ಬೆಂಗಳೂರು.

ವಾಸಾಸಂಇ/ವಾ.ಪ್ರ/4220/ಶಿರಡಿ ಸಾಯಿ/2025-26

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು, ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಮುಖ್ಯ ಅಭಿಯಂತರರ ಕಛೇರಿ (ದಕ್ಷಿಣ), 7ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು-09

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗೆ ಇಟ್ಟ ಮೊತ್ತ / ಇಎಂಡಿ ಮೊತ್ತ	ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ & ಸಮಯ	ಟೆಂಡರ್ ತೆರೆಯುವ ದಿನಾಂಕ & ಸಮಯ
1.	ದಕ್ಷಿಣ-1	ಬೆಂಜಮಂ/ಕಾನಿಅ(ದ-1)/ಸಅ/ತಾಂಅ/2660/2025-26 ದಿನಾಂಕ: 03-12-2025 (2ನೇ ಕರೆ) (ಪ್ರವರ್ಗ-II(A) ಗೆ ಮೀಸಲು)	Rs.68,28,759/- / Rs.68,300/-	12-12-2025 ರ ಸಂಜೆ 4.00 ಗಂಟೆಯವರೆಗೆ	15-12-2025 ರ ಸಂಜೆ 4.00 ಗಂಟೆಯ ನಂತರ
2.	ದಕ್ಷಿಣ-1	ಬೆಂಜಮಂ/ಕಾನಿಅ(ದ-1)/ಸಅ/ತಾಂಅ/2662/2025-26 ದಿನಾಂಕ: 03-12-2025 (2ನೇ ಕರೆ)	Rs.60,67,140/- / Rs.1,21,400/-		
					ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ದಕ್ಷಿಣ-1)
3.	ದಕ್ಷಿಣ ಪಶ್ಚಿಮ-2	ಬೆಂಜಮಂ/ಕಾನಿಅ(ದಪ-2)/ತಾಂಅ/ಪಿಬಿ/4270/2025-26 ದಿನಾಂಕ: 04-12-2025 (2ನೇ ಕರೆ) (ಪರಿಶಿಷ್ಟ ಜಾತಿಗೆ ಮೀಸಲು)	Rs.58,61,249/- / Rs.58,650/-	11-12-2025 ರ ಸಂಜೆ 5.00 ಗಂಟೆಯವರೆಗೆ	12-12-2025 ರ ಸಂಜೆ 4.30 ಗಂಟೆಯ ನಂತರ
					ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ದಕ್ಷಿಣ ಪಶ್ಚಿಮ-2)
		ಮುಖ್ಯ ಅಭಿಯಂತರರ ಕಛೇರಿ (ಪಶ್ಚಿಮ), 6ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು-09			
4.	ಉತ್ತರ ಪಶ್ಚಿಮ-2	ಬೆಂಜಮಂ/ಕಾನಿಅ(ಉಪ-2)/ತಾಂಅ/ಪಿಬಿ/4084/2025-26 ದಿನಾಂಕ: 04-12-2025	Rs.47,16,241/- / Rs.94,400/-	16-12-2025 ರ ಸಂಜೆ 4.00 ಗಂಟೆಯವರೆಗೆ	17-12-2025 ರ ಸಂಜೆ 4.30 ಗಂಟೆಗೆ
5.	ಉತ್ತರ ಪಶ್ಚಿಮ-2	ಬೆಂಜಮಂ/ಕಾನಿಅ(ಉಪ-2)/ತಾಂಅ/ಪಿಬಿ/4084/2025-26 ದಿನಾಂಕ: 04-12-2025	Rs.58,54,451/- / Rs.1,17,100/-		
6.	ಉತ್ತರ ಪಶ್ಚಿಮ-2	ಬೆಂಜಮಂ/ಕಾನಿಅ(ಉಪ-2)/ತಾಂಅ/ಪಿಬಿ/4084/2025-26 ದಿನಾಂಕ: 04-12-2025 (ಪರಿಶಿಷ್ಟ ಜಾತಿಗೆ ಮೀಸಲು)	Rs.62,15,577/- / Rs.62,200/-		
7.	ಉತ್ತರ ಪಶ್ಚಿಮ-2	ಬೆಂಜಮಂ/ಕಾನಿಅ(ಉಪ-2)/ತಾಂಅ/ಪಿಬಿ/4084/2025-26 ದಿನಾಂಕ: 04-12-2025	Rs.52,11,616/- / Rs.1,04,300/-		
8.	ಉತ್ತರ ಪಶ್ಚಿಮ-2	ಬೆಂಜಮಂ/ಕಾನಿಅ(ಉಪ-2)/ತಾಂಅ/ಪಿಬಿ/4084/2025-26 ದಿನಾಂಕ: 04-12-2025 (ಪರಿಶಿಷ್ಟ ಜಾತಿಗೆ ಮೀಸಲು)	Rs.20,80,508/- / Rs.25,000/-		
9.	ಉತ್ತರ ಪಶ್ಚಿಮ-2	ಬೆಂಜಮಂ/ಕಾನಿಅ(ಉಪ-2)/ತಾಂಅ/ಪಿಬಿ/4084/2025-26 ದಿನಾಂಕ: 04-12-2025	Rs.22,88,796/- / Rs.50,000/-		
10.	ಉತ್ತರ ಪಶ್ಚಿಮ-2	ಬೆಂಜಮಂ/ಕಾನಿಅ(ಉಪ-2)/ತಾಂಅ/ಪಿಬಿ/4084/2025-26 ದಿನಾಂಕ: 04-12-2025	Rs.12,65,858/- / Rs.31,700/-		
11.	ಉತ್ತರ ಪಶ್ಚಿಮ-2	ಬೆಂಜಮಂ/ಕಾನಿಅ(ಉಪ-2)/ತಾಂಅ/ಪಿಬಿ/4084/2025-26 ದಿನಾಂಕ: 04-12-2025 (ಪರಿಶಿಷ್ಟ ಪಂಗಡಕ್ಕೆ ಮೀಸಲು)	Rs.15,75,474/- / Rs.19,700/-		
12.	ಉತ್ತರ ಪಶ್ಚಿಮ-2	ಬೆಂಜಮಂ/ಕಾನಿಅ(ಉಪ-2)/ತಾಂಅ/ಪಿಬಿ/4084/2025-26 ದಿನಾಂಕ: 04-12-2025	Rs.51,57,524/- / Rs.1,03,200/-		
13.	ಉತ್ತರ ಪಶ್ಚಿಮ-2	ಬೆಂಜಮಂ/ಕಾನಿಅ(ಉಪ-2)/ತಾಂಅ/ಪಿಬಿ/4084/2025-26 ದಿನಾಂಕ: 04-12-2025 (ಪ್ರವರ್ಗ-II(A) ಗೆ ಮೀಸಲು)	Rs.55,47,809/- / Rs.55,500/-		
14.	ಉತ್ತರ ಪಶ್ಚಿಮ-2	ಬೆಂಜಮಂ/ಕಾನಿಅ(ಉಪ-2)/ತಾಂಅ/ಪಿಬಿ/4084/2025-26 ದಿನಾಂಕ: 04-12-2025	Rs.51,69,780/- / Rs.1,03,400/-		
					ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ ಪಶ್ಚಿಮ-2)

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಗಳನ್ನು https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಸಹಿದಾರರ ಕಛೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

DIPR/CP/AAPL/RO4208/25-26

ಮಹಾತ್ಮ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ

ಗ್ರಾಮ ಗಂಗೋತ್ರಿ ಆವರಣ, ನಾಗಾವಿ ರಸ್ತೇ, ಗದಗ, ದೂ: 08372-230338

ಟೆಂಡರ್ ಪ್ರಕಟಣೆ

ಮಹಾತ್ಮ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ, ಗದಗ ಇಲ್ಲಿಗೆ ದಿನಾಂಕ **13-12-2025 & 14-12-2025** ರಂದು ನಡೆಯುವ “ಅಖಿಲ ಭಾರತ ಪಂಚಾಯತ್ ಪರಿಷತ್‌ನ 18ನೇ ರಾಷ್ಟ್ರೀಯ ಸಮ್ಮೇಳನ” ಕಾರ್ಯಕ್ರಮಕ್ಕೆ ಶಾಮಿಯಾನಾ ವ್ಯವಸ್ಥೆಗಾಗಿ ಸೇವೆಯನ್ನು ಒದಗಿಸುವ ಸಲುವಾಗಿ ಟೆಂಡರ್ ಆಹ್ವಾನಿಸಲಾಗಿದೆ. ಅರ್ಹ ಟೆಂಡರದಾರರು ಇ-ಪ್ರೊಕ್ಯೂರಮೆಂಟ ಪೋರ್ಟಲ್ ಮೂಲಕ ಟೆಂಡರ ದಾಖಲಾತಿಗಳನ್ನು ಡೌನಲೋಡ್ ಮಾಡಿಕೊಂಡು ಈ ಕೆಳಕಾಣಿಸಿದ ವೇಳಾಪಟ್ಟಿಯಂತೆ ಟೆಂಡರ್ ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ಕಚೇರಿ ವೇಳೆಯುಲ್ಲಿ ಪಡೆಯಬಹುದಾಗಿದೆ. ದೂ : **08372-230338**

(1) ಟೆಂಡರ್ ಸಂ: KSRDPRU/2025-26/IND0009
(2) ಇ.ಎಂ.ಡಿ. ಮೊತ್ತ : ರೂ. **55,000/-**
(3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **11-12-2025,** 10:30 am
(4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **12-12-2025** 11:00 am.
(5) ಆರ್ಥಿಕ ಬಿಡ್ ತೆರೆಯುವ ದಿನಾಂಕ : **12-12-2025** 12:00 am.

ವಾಸಾಸಂಇ/ಗದಗ/ಕೆಎಸ್ಎಂಸಿಎ/423/2025-26 ಸಹಿ/- ಕುಲಸಚಿವರು

ಕರ್ನಾಟಕ ಸರ್ಕಾರ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಚಿತ್ರದುರ್ಗ.

ಸ್ಟೇಡಿಯಂ ಹತ್ತಿರ, ಜಿಲ್ಲಾ ಬಾಲಭವ ಆವರಣ, ಚಿತ್ರದುರ್ಗ.
ದೂ. ಸಂ:08194-235259 E-mail: ddwcdcta@gmail.com

ಸಂಖ್ಯೆ:/ಉನಿಚಿ/ಮಮಅಇ/ಅಂ.ಕೇ/ಸು.ಶೇ.ಕಿಟ್/ಸ/ಟೆಂಡರ್/2025-26
ದಿನಾಂಕ: 03.12.2025

ಸಂಕ್ಷಿಪ್ತ ಇ-ಟೆಂಡರ್ ಪ್ರಕಟಣೆ
(https//kppp.karnataka.gov.in ಮೂಲಕ)

2025-26ನೇ ಸಾಲಿಗೆ ಉಪನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಚಿತ್ರದುರ್ಗ ಜಿಲ್ಲೆಯ 07 ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿ ಸಕ್ಷಮ್ ಅಂಗನವಾಡಿ ಮತ್ತು ಪೋಷಣ್ 2.0 ಯೋಜನೆಯಡಿ ಒಟ್ಟು 300 ಸಕ್ಷಮ್ ಅಂಗನವಾಡಿ ಕೇಂದ್ರಗಳಿಗೆ ಶುದ್ಧ ಶೇಖರಣಾ ಕಿಟ್‌ಗಳನ್ನು ಖರೀದಿಸಲು ಗುತ್ತಿಗೆದಾರರನ್ನು ಗುರುತಿಸುವ ಸಲುವಾಗಿ ಇ-ಟೆಂಡರ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ನ ಅಂದಾಜು ಮೊತ್ತ ರೂ. 30.00ಲಕ್ಷಗಳು. ಪ್ರಕಟಣೆಸಂ.DWCD/2025-26/IND0079 dated:03/12/2025 ಕೊನೆಯ ದಿನಾಂಕ:17/12/2025 ವಿವರಗಳಿಗಾಗಿ https//kppp.karnataka.gov ಪರಾಮರ್ಶಿಸಿ ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ.

DIPR/CTA/KSMCA/506/2025-26
ಸಹಿ/- ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಚಿತ್ರದುರ್ಗ.

ಕರ್ನಾಟಕ ಸರ್ಕಾರ

ಕಾರಾಗೃಹ ಮತ್ತು ಸುಧಾರಣಾ ಸೇವೆ

ನಂ.4,ಶೇಷಾದ್ರಿ ರಸ್ತೆ, ಬೆಂಗಳೂರು-560009
ದೂ.ಸಂ.:080-22262263, ಇ-ಮೇಲ್: phq,prisons-kar@gov.in

DGPCSB/AD23/MODR/55/2025-ADMN(80165)
ಸಂಖ್ಯೆ: ADM1/MODM/CR-06/20022 ದಿನಾಂಕ: 03.12.2025

(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕಾರಾಗೃಹಮತ್ತು ಸುಧಾರಣಾ ಸೇವಾ ಇಲಾಖೆಯ ವಿವಿಧ ಕಾರಾಗೃಹಗಳಿಗೆ ಅಗತ್ಯವಿರುವ ಪ್ರಿಸನ್ ಕಾಲ್ ಸಿಸ್ಟಂ ಉಪಕರಣ (ಕರೆ-1) ಮತ್ತು ಬೆಂಗಳೂರು ಕೇಂದ್ರ ಕಾರಾಗೃಹಕ್ಕೆ ಅವಶ್ಯಕವಿರುವ ಸಿಸಿಟಿವಿ ಕ್ಯಾಮೆರಾಗಳ (ಕರೆ-4ರಲ್ಲಿ) ಸರಬರಾಜು, ಅಳವಡಿಕೆ ಮತ್ತು ನಿರ್ವಹಣೆಗಾಗಿ ಟೆಂಡರ್‌ಗಳನ್ನು ಈ ಕೆಳಕಂಡಂತೆ ಆಹ್ವಾನಿಸಲಾಗಿದೆ. .

ಕ್ರ.ಸಂ	ಟೆಂಡರ್‌ಸಂಖ್ಯೆ/ದಿನಾಂಕ	ಅಂದಾಜು ಮೌಲ್ಯ
01	PCSD/2025-26/IND0261,Dt.02.12.2025	Rs.225.00 Lakhs
02	PCSD/2025-26/IND0235/CALL-4, Dt.02.12.2025	Rs.12.40 Lakhs

ಟೆಂಡರ್ ಪೂರ್ವಭಾವಿ ಸಭೆಯ ದಿನಾಂಕ, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಇತರೆ ಮಾಹಿತಿಯನ್ನು https://kppp.karnataka.gov.in ರಲ್ಲಿ ಪಡೆಯಬಹುದು ಹಾಗೂ ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/- ಮಹಾ ನಿರ್ದೇಶಕರು
ಕಾರಾಗೃಹ ಮತ್ತು ಸುಧಾರಣಾ ಸೇವೆ
ಕರ್ನಾಟಕ ರಾಜ್ಯ

ವಾಸಾಸಂಇ/ವಾ.ಪ್ರ/ಶಿರಡಿ ಸಾಯಿ/4195/2025-26

ಕರ್ನಾಟಕ ಸರ್ಕಾರ

ಮೈಸೂರು ಅರಮನೆ ಮಂಡಳಿ

ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಮೈಸೂರು ಅರಮನೆ ಮಂಡಳಿ, ಮೈಸೂರು.
ದೂರವಾಣಿ: 0821-2421051, ಫ್ಯಾಕ್ಸ್: 2434425, ಇ-ಮೇಲ್: ddmysorepalace@gmail.com

ಟೆಂಡರ್ ಅಧಿಸೂಚನೆ ಸಂಖ್ಯೆ: EO/MPB/DD/HORTI/FS/T.NO.06/2025-26 ದಿನಾಂಕ: 25.11.2025

ಇ-ಟೆಂಡರ್ ಪ್ರಕಟಣೆ (ದ್ವಿಲಕೋಟೆ ಪದ್ಧತಿಯಲ್ಲಿ) ಕೆ.ಪಿ.ಪಿ.ಪಿ. ಪೋರ್ಟಲ್ ಮೂಲಕ ಮಾತ್ರ

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಉಪನಿರ್ದೇಶಕರು, ಮೈಸೂರು ಅರಮನೆ ಮಂಡಳಿ, ಮೈಸೂರು ರವರು, ಮೈಸೂರು ಅರಮನೆಯ ತೋಟಗಾರಿಕೆ ವಿಭಾಗಕ್ಕೆ ಸಂಬಂಧಿಸಿದಂತೆ ಒಟ್ಟು ಮೊತ್ತ ರೂ. 105.00 ಲಕ್ಷದ ಫಲಪುಷ್ಪ ಪ್ರದರ್ಶನದ ಕಾಮಗಾರಿಯನ್ನು ಕೈಗೊಳ್ಳುವ ಸಂಬಂಧ ನೋಂದಾಯಿತ ಅರ್ಹ ಗುತ್ತಿಗೆದಾರರು /ಏಜೆನ್ಸಿ / ತಯಾರಕರು / ಸಂಸ್ಥೆಯಿಂದ ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ ಟೆಂಡರ್ ಆಹ್ವಾನಿಸಲಾಗಿದೆ. (1) ವಿದ್ಯುನ್ಮಾನ (ಇ-ಟೆಂಡರ್) ವ್ಯವಸ್ಥೆ ಮುಖಾಂತರ ಮಾತ್ರ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **10.12.2025 ಸಂಜೆ 5.00 ಗಂಟೆಯವರೆಗೆ, (2)** ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **11.12.2025 ಬೆಳಿಗ್ಗೆ 11.00 ಗಂಟೆಯ ನಂತರ, (3)** ಟೆಂಡರ್‌ನ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **12.12.2025 ಬೆಳಿಗ್ಗೆ 11.00 ಗಂಟೆಯ ನಂತರ ಅಥವಾ ನಂತರ ದಿನಗಳಲ್ಲಿ ತೆರೆಯಲಾಗುವುದು,** ಟೆಂಡರ್‌ನ ನಿಬಂಧನೆಗಳು, ಷರತ್ತುಗಳು ಹಾಗೂ ಕಾಮಗಾರಿಯ ಹೆಚ್ಚಿನ ವಿವರಗಳಿಗೆ http://www.kppp.karnataka.gov.in. ಅಂತರ್ಜಾಲದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯ ಎಲ್ಲಾ ದಿನಗಳಂದು ಪಡೆಯಬಹುದು. ಒಂದು ವೇಳೆ ಮೇಲೆ ನೀಡಲಾಗಿರುವ ದಿನಗಳು ಸಾರ್ವಜನಿಕ ರಜಾ ದಿನಗಳಾಗಿದ್ದಲ್ಲಿ ಆ ನಂತರದ ದಿನಗಳನ್ನು ಪರಿಗಣಿಸಲಾಗುವುದು.

ಸಹಿ/-
ಉಪ ನಿರ್ದೇಶಕರು,
ಮೈಸೂರು ಅರಮನೆ ಮಂಡಳಿ, ಮೈಸೂರು

ವಾಸಾಸಂಇ/ಮೈಸೂರು/ಶಿರಡಿ ಸಾಯಿ/1328/2025-26

ಪೊಲೀಸ್ ಇಲಾಖೆ

ಪೊಲೀಸ್ ಅಧೀಕ್ಷಕರು, ವೈರ್‌ಲೆಸ್ ರವರ ಕಛೇರಿ
ನಂ.1, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು. 560001
ದೂರವಾಣಿ: 080-22942324, ಇ-ಮೇಲ್: spwireless@ksp.gov.in

ಸಂಖ್ಯೆ: KSP/2025-26/IND0443 ದಿನಾಂಕ: 03/12/2025

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ.ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್ ಮುಖಾಂತರ)

ಪೊಲೀಸ್ ಅಧೀಕ್ಷಕರು, ವೈರ್‌ಲೆಸ್, ಬೆಂಗಳೂರು ರವರಿಂದ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ವಿವಿಧ ಘಟಕಗಳಿಗೆ ಅವಶ್ಯವಿರುವ
1) ಡಿಜಿಟಲ್ ವಿ.ಎಚ್.ಎಫ್ ರಿಪೀಟರ್ ಹಾಗೂ ವಾಕಿ-ಟಾಕಿಗಳ ಸರಬರಾಜು, ಅಳವಡಿಕೆ ಮತ್ತು ನಿರ್ವಹಣೆಗಾಗಿ ಆನ್‌ಲೈನ್ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಅಂದಾಜು ಮೌಲ್ಯ ರೂ. 69.60 ಲಕ್ಷಗಳು. ಟೆಂಡರ್ ಪೂರ್ವಭಾವಿ ಸಭೆಯ ದಿನಾಂಕ: 10/12/2025 ಸಮಯ ಬೆಳಿಗ್ಗೆ 11.00 ಗಂಟೆ ಹಾಗೂ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 02/01/2026 ಸಮಯ ಸಂಜೆ 17.00 ಗಂಟೆಗಳು. ಇತರೆ ಮಾಹಿತಿಯನ್ನು https://kppp.karnataka.gov.in ರಲ್ಲಿ ಪಡೆಯಬಹುದು ಹಾಗು ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಂಖ್ಯೆ: KSP/2025-26/IND0444 ದಿನಾಂಕ: 03/12/2025

2) ಡಿಜಿಟಲ್ ವಿ.ಎಚ್.ಎಫ್/ ಯು.ಎಚ್.ಎಫ್ ರಿಪೀಟರ್‌ಗಳ ಸರಬರಾಜು, ಅಳವಡಿಕೆ ಮತ್ತು ನಿರ್ವಹಣೆಗಾಗಿ ಆನ್‌ಲೈನ್ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಅಂದಾಜು ಮೌಲ್ಯ ರೂ. 27.00 ಲಕ್ಷಗಳು. ಟೆಂಡರ್ ಪೂರ್ವಭಾವಿ ಸಭೆಯ ದಿನಾಂಕ: 10/12/2025 ಸಮಯ ಬೆಳಿಗ್ಗೆ 11.00 ಗಂಟೆ ಹಾಗೂ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 02/01/2026 ಸಮಯ ಸಂಜೆ 17.00 ಗಂಟೆಗಳು. ಇತರೆ ಮಾಹಿತಿಯನ್ನು https://kppp.karnataka.gov.in ರಲ್ಲಿ ಪಡೆಯಬಹುದು ಹಾಗು ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/-
ಪೊಲೀಸ್ ಅಧೀಕ್ಷಕರು, ವೈರ್‌ಲೆಸ್, ಬೆಂಗಳೂರು

DIPR/CP/4217/NR/2025-26

ಕರ್ನಾಟಕ ಗೃಹ ಮಂಡಳಿ

ಕರ್ನಾಟಕ ಗೃಹ ಮಂಡಳಿ – ಸಮುದಾಯ ನಿರ್ಮಾಣದತ್ತ
3ನೇ ಮಹಡಿ, ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು-560009

ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮುಖಾಂತರ)

ಕರ್ನಾಟಕ ಗೃಹ ಮಂಡಳಿಯಲ್ಲಿ ಪೂರ್ವಾರ್ಹತೆ ಪಡೆದಿರುವ ಗುತ್ತಿಗೆದಾರರು ಹಾಗೂ ಪಡೆಯಲು ಇಚ್ಛಿಸುವ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಕರೆಯಲಾಗಿದೆ ವಿವರಗಳು ಕೆಳಕಂಡಂತಿವೆ.

ಕ್ರ.ಸಂ.	ಕಾಮಗಾರಿಗಳ ಹೆಸರು
1	ಹಾವೇರಿ ಜಿಲ್ಲೆ ಹಿರೇಕೆರೂರು ತಾಲ್ಲೂಕು, ಕೂಡ ಗ್ರಾಮ, ರಟ್ಟಿಹಳ್ಳಿ ಗ್ರಾಮ, ಶಿಗ್ಗಾಂವಿ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ, ಬನವಾಸಿ ತಾಲ್ಲೂಕು, ಅಂದರಗಿ ಗ್ರಾಮ, ಕಲಬುರಗಿ ಜಿಲ್ಲೆ ಮತ್ತು ತಾಲ್ಲೂಕು, ಕೋಟನೂರು ಗ್ರಾಮ, ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕು, ವಡ್ಡರಹಟ್ಟಿ ಗ್ರಾಮ, ಧಾರವಾಡ ಜಿಲ್ಲೆ, ಧಾರವಾಡ ತಾಲೂಕು, ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕು ಮತ್ತು ಬಾಗಲಕೋಟೆ ಜಿಲ್ಲೆ, ಬಾಗಲಕೋಟೆ ತಾಲ್ಲೂಕಿನಲ್ಲಿ ಕೃಷಿ ಇಲಾಖೆಯ ಶೀತಲ ಘಟಕ ಕಟ್ಟಡಗಳಿಗೆ ಹೆಚ್ಚುವರಿ ನಿರ್ಮಾಣ ಕಾಮಗಾರಿ. (ಪ್ಯಾಕೇಜ್-I ರಡಿ) **Work Indent No:** KHB/2025-26/BD/work_Indent 661 & IFT No: 109/2025-26 Date: 01.12.2025. **ಟೆಂಡರಿಗಿಟ್ಟ ಮೊತ್ತ:** ರೂ.10,11,36,430/-
2	ಚಿಕ್ಕಬಳ್ಳಾಪುರ ಜಿಲ್ಲೆ ಮತ್ತು ತಾಲ್ಲೂಕು, ಚಲುವತಿಮ್ಮನಹಳ್ಳಿ ಗ್ರಾಮ, ಚಿಕ್ಕಮಗಳೂರು ಜಿಲ್ಲೆ, ತರೀಕೆರೆ ತಾಲ್ಲೂಕು ಲಿಂಗದಹಳ್ಳಿ ಗ್ರಾಮ, ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕು, ಅವರಗೇರೆ ಗ್ರಾಮ ಮತ್ತು ಚನ್ನಗಿರಿ ತಾಲ್ಲೂಕು, ದೇವರಹಳ್ಳಿ ಗ್ರಾಮದಲ್ಲಿ ಕೃಷಿ ಇಲಾಖೆಯ ಶಿತಲ ಘಟಕ ಕಟ್ಟಡಗಳಿಗೆ ಹೆಚ್ಚುವರಿ ನಿರ್ಮಾಣ ಕಾಮಗಾರಿ. (ಪ್ಯಾಕೇಜ್-II ರಡಿ) **Work Indent No:** KHB/2025-26/BD/work_Indent 662 & IFT No: 110/2025-26 Date: 01.12.2025. **ಟೆಂಡರಿಗಿಟ್ಟ ಮೊತ್ತ:** ರೂ.4,45,30,955/-

ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ: 01.01.2026 ಸಂಜೆ 4.00 ಗಂಟೆಯವರೆಗೆ.

ಕಾಮಗಾರಿಗಳ ಬಗ್ಗೆ ಹಾಗೂ ಇನ್ನಿತರ ವಿವರಗಳಿಗೆ ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ. ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು. ದೂರವಾಣಿ: 080-22273511 / 080-22100077 Website: https://kppp.karnataka.gov.in

ಸಹಿ/- ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

ಡಿಐಪಿಆರ್/ಸಿಪಿ/4198/ಸಿಸಿಎಲ್/2025-26

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರ ರವರ ಕಛೇರಿ

ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಮೈಸೂರು-570023

ಸಂ./ಕಾಅ/ಪಂ.ರಾ.ಇಂ.ವಿ/ಮೈ/ಇ-ಪ್ರಕ್ಯೂರ್‌ಮೆಂಟ್/ಸ.ಇಂ/ಕಿ.ಇಂ.

ಪ್ರಕಟಣೆ ಸಂಖ್ಯೆ.:15/2025-26 ದಿನಾಂಕ: 27.11.2025

ಅಲ್ಪಾವಧಿ ಇ-ಪ್ರಕ್ಯೂರ್‌ಮೆಂಟ್-ಟೆಂಡರ್‌ಪ್ರಕಟಣೆ

ಈ ಕಛೇರಿಯಿಂದ ಉಲ್ಲೇಖ ರೀತ್ಯಾ ಅಧಿಸೂಚನೆಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆಯಲ್ಲಿ ತಿ.ನರಸೀಪುರ ತಾಲ್ಲೂಕಿನ 2024-25ನೇ ಸಾಲಿನ ಮಳೆ ಪರಿಹಾರದ ಕಾರ್ಯಕ್ರಮದ ಲೆಕ್ಕಶೀರ್ಷಿಕೆ:- 5054 ಯೋಜನೆಯ ಲೆಕ್ಕಶೀರ್ಷಿಕೆಯಡಿ ಅನುಮೋದನೆಯಾದ ಕಾಮಗಾರಿಗಳಿಗೆ KW-4 ರೀತ್ಯಾ ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಟೆಂಡರ್ ಪ್ರಕಟಣೆಯಲ್ಲಿರುವ ಕಾಮಗಾರಿಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಮತ್ತು ಭರ್ತಿ ಮಾಡಿದ ಫಾರಂಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಲು ದಿ: 02.12.2025 ರಿಂದ ದಿ: 19.12.2025 ರವರೆಗೆ ಸಂಜೆ 16.30 ಘಂಟೆಯವರೆಗೆ ಹಾಗೂ ಟೆಂಡರ್ ಬಗ್ಗೆ ಸ್ಪಷ್ಟೀಕರಣ/ವಿಚಾರಿಸಿ ಮಾಹಿತಿ ಪಡೆಯಲು ಅಂತಿಮ ದಿ: 18.12.2025ರ ಸಂಜೆ 16.00 ಘಂಟೆಯಾಗಿದ್ದು, ಟೆಂಡರ್ ತೆರೆಯುವ ದಿ: 20.12.2025ರ ಸಂಜೆ 17.00 ಘಂಟೆಯ ನಂತರ ಟೆಂಡರ್ ಫಾರಂ ಬೆಲೆ ಇ-ಪ್ರಕ್ಯೂರ್‌ಮೆಂಟ್‌ನಂತೆ ಸಲ್ಲಿಸಬೇಕು. ಸದರಿ ಕಾಮಗಾರಿಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಕ್ರ.ಸಂ.01 ಕಾಮಗಾರಿ ಹೆಸರು/ಪ್ಯಾಕೇಜ್ ಸಂಖ್ಯೆ: ತಿ.ನರಸೀಪುರ ತಾಲ್ಲೂಕು ಸೋಸಲೆ ಗ್ರಾಮದಿಂದ ಚಿದರಹಳ್ಳಿವರೆಗೆ ಮಾರ್ಗ ಮಧ್ಯೆ ಬರುವ ಸೋಸಲೆ, ವ್ಯಾಸರಾಜಪುರ, ಉಕ್ಕಲಗೆರೆ, ಚಿದರಹಳ್ಳಿ ಗ್ರಾಮ ಪರಿಮಿತಿಯಲ್ಲಿ ಮತ್ತು ಕುಂತನಹಳ್ಳಿ ಗ್ರಾಮದಿಂದ ಅಂಕನಹಳ್ಳಿವರೆಗೆ ಮಾರ್ಗ ಮಧ್ಯೆ ಬರುವ ಕುಂತನಹಳ್ಳಿ, ಅತ್ತಹಳ್ಳಿ, ಬೀಡನಹಳ್ಳಿ, ಕೊಡಗಹಳ್ಳಿ, ಯಾಚೇನಹಳ್ಳಿ, ಕಾಡುಕೊತ್ತನಹಳ್ಳಿ, ಮೇಣಸಿಕ್ಯಾತನಹಳ್ಳಿ ಮತ್ತು ಅಂಕನಹಳ್ಳಿ ಗ್ರಾಮ ಪರಿಮಿತಿಯಲ್ಲಿ ಸಿ.ಸಿ ಚರಂಡಿ& ಸಿ.ಸಿ ರಸ್ತೆ ನಿರ್ಮಾಣಕಾಮಗಾರಿ. (Indent No.RDPR/2025-26/RD/WORK_INDENT20146). **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):** 270.00 **ಟೆಂಡರ್‌ಗಿಟ್ಟ ಇ-ಪ್ರೊಕ್ಯೂರ್‌ಮೆಂಟ್ ಮೊಬಲಗು (ರೂ.ಗಳಲ್ಲಿ):** 227.20 **ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ):** 3,41,000.00 **ಗುತ್ತಿಗೆದಾರರ ಅರ್ಹತೆ:** 2ನೇ ದರ್ಜೆ ಮತ್ತು ಮೇಲ್ಪಟ್ಟು

ಕ್ರ.ಸಂ.2. ಕಾಮಗಾರಿ ಹೆಸರು/ಪ್ಯಾಕೇಜ್ ಸಂಖ್ಯೆ: ತಿ.ನರಸೀಪುರ ತಾಲ್ಲೂಕು ಹಿರಿಯೂರು ಗ್ರಾಮದಿಂದ ಮಡವಾಡಿವರೆಗೆ ಮಾರ್ಗ ಮಧ್ಯೆ ಬರುವ ಹಿರಿಯೂರು, ಮಾದಾಪುರ, ಅಕ್ಕೂರು, ವಡೆಯಾಂಡಹಳ್ಳಿ, ಟಿ.ಬೆಟ್ಟಹಳ್ಳಿ, ಕುರುಬಾಳಹುಂಡಿ, ಬಿ.ಶೆಟ್ಟಿಹಳ್ಳಿ, ಕಾಳಬಸವನಹುಂಡಿ, ಕಾಳಿಹುಂಡಿ, ಕಾವೇರಿಪುರ ಮತ್ತು ಮಡವಾಡಿ ಗ್ರಾಮದ ಪರಿಮಿತಿಯಲ್ಲಿ ಸಿ.ಸಿ ಚರಂಡಿ & ಸಿ.ಸಿ ರಸ್ತೆ ನಿರ್ಮಾಣ ಕಾಮಗಾರಿ (Indent No.RDPR/2025-26/RD/WORK_INDENT20148) **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):** 210.00 **ಟೆಂಡರ್‌ಗಿಟ್ಟ ಇ-ಪ್ರೊಕ್ಯೂರ್‌ಮೆಂಟ್ ಮೊಬಲಗು (ರೂ.ಗಳಲ್ಲಿ):** 176.56 **ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ):** 2,65,000.00 **ಗುತ್ತಿಗೆದಾರರ ಅರ್ಹತೆ:** 2ನೇ ದರ್ಜೆ ಮತ್ತು ಮೇಲ್ಪಟ್ಟು

ಕ್ರ.ಸಂ.3. ಕಾಮಗಾರಿ ಹೆಸರು/ಪ್ಯಾಕೇಜ್ ಸಂಖ್ಯೆ: ತಿ.ನರಸೀಪುರ ತಾಲ್ಲೂಕು, ಕಲಿಯೂರು ಗ್ರಾಮದಿಂದ ಮಾವಿನಹಳ್ಳಿವರೆಗೆ ಮಾರ್ಗ ಮಧ್ಯೆ ಬರುವ ಕಲಿಯೂರು, ಬೆಟ್ಟದಹೊಸೂರು, ಮಂಗಿಪಚ್ಚನಹುಂಡಿ, ತಡಿಮಾಲಂಗಿ, ತೊಟ್ಟವಾಡಿ, ದೊಡ್ಡನಹುಂಡಿ, ಮಾವಿನಹಳ್ಳಿ ಮತ್ತು ಕುರುಬೂರು ಗ್ರಾಮದಿಂದ ವಾಟಾಳುವರೆಗೆ ಮಾರ್ಗ ಮಧ್ಯೆ ಬರುವ ಕುರುಬೂರು, ಮೂಗೂರು, ಹ್ಯಾಕನೂರು ಮತ್ತು ವಾಟಾಳು ಗ್ರಾಮ ಪರಿಮಿತಿಯಲ್ಲಿ ಸಿ.ಸಿ ಚರಂಡಿ & ಸಿ.ಸಿ ರಸ್ತೆ ನಿರ್ಮಾಣ ಕಾಮಗಾರಿ (Indent No.RDPR/2025-26/ RD/WORK_INDENT20147) **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):** 225.00 **ಟೆಂಡರ್‌ಗಿಟ್ಟ ಇ-ಪ್ರೊಕ್ಯೂರ್‌ಮೆಂಟ್ ಮೊಬಲಗು (ರೂ.ಗಳಲ್ಲಿ):** 189.30 **ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ):** 2,84,000.00 **ಗುತ್ತಿಗೆದಾರರ ಅರ್ಹತೆ:** 2ನೇ ದರ್ಜೆ ಮತ್ತು ಮೇಲ್ಪಟ್ಟು

ಕ್ರ.ಸಂ.4. ಕಾಮಗಾರಿ ಹೆಸರು/ಪ್ಯಾಕೇಜ್ ಸಂಖ್ಯೆ: ತಿ.ನರಸೀಪುರ ತಾಲ್ಲೂಕು, ಮುಸುವಿನಕೊಪ್ಪಲು ಗ್ರಾಮದಿಂದ ಬೋಳೇಗೌಡನ ಹುಂಡಿವರೆಗೆ ಮಾರ್ಗ ಮಧ್ಯೆ ಬರುವ ಮುಸುವಿನಕೊಪ್ಪಲು, ಎಂ.ಕೆಬ್ಬೆಹುಂಡಿ, ಕೈಯಂಬಳ್ಳಿ, ಕೃಷ್ಣಾಪುರ, ದೊಡ್ಡೇಬಾಗಿಲುಮೋಳೆ, ಆಚಾರಯ್ಯನಹುಂಡಿ, ನರೀಪುರ, ದೊಡ್ಡೇಬಾಗಿಲು, ನೆರಗ್ಯಾನಹಳ್ಳಿ, ಕೋಣಗಹಳ್ಳಿ, ಕೊಳತ್ತೂರು, ಸೀಗೋಡಿಪುರ, ಕೆಂಪನಪುರ & ಬೋಳೇಗೌಡನಹುಂಡಿ ಗ್ರಾಮ ಪರಿಮಿತಿಯಲ್ಲಿ ಸಿ.ಸಿ ಚರಂಡಿ & ಸಿ.ಸಿ ರಸ್ತೆ ನಿರ್ಮಾಣ ಕಾಮಗಾರಿ (Indent No.RDPR/2025-26/RD/WORK_INDENT20145) **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):** 295.00 **ಟೆಂಡರ್‌ಗಿಟ್ಟ ಇ-ಪ್ರೊಕ್ಯೂರ್ ಮೆಂಟ್ ಮೊಬಲಗು (ರೂ.ಗಳಲ್ಲಿ):** 248.35 **ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ):** 3,73,000.00 **ಗುತ್ತಿಗೆದಾರರ ಅರ್ಹತೆ:** 2ನೇ ದರ್ಜೆ ಮತ್ತು ಮೇಲ್ಪಟ್ಟು.

ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (e-procurement portal) ವೆಬ್ ಸೈಟ್‌ನಲ್ಲಿ ಪಡೆಯಬಹುದು https://kppp.karnataka.gov.in ಈ ಬಗ್ಗೆ ಇನ್ನೂ ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಕುವೆಂಪುನಗರ, ಮೈಸೂರು (ಫೋನ್ ನಂ.0821-2560853) ರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು. ಮೊಬೈಲ್ ಸಂಖ್ಯೆ: ಕಿ.ಇಂ. 8971599285

ಸಹಿ/- ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಮೈಸೂರು

DIPR/DDMYS/1314/KSMCA/738/2025-26

ಅಭಿಮತ ವಿಭಾಗ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಮೇಲಿನವರಿಗೆ ಸಕಲ ಸವಲತ್ತು ಭೋಗಗಳು, ಕೆಳಗಿನವರಿಗೆ ಸರ್ವದುಃಖ ದಾರಿದ್ರ್ಯಗಳು ಎನ್ನುವ ನೀತಿ ಕೊನೆಗಾಣಬೇಕು.

–ಮಹಾತ್ಮ ಗಾಂಧೀಜಿ

ಸಂಪಾದಕೀಯ

ಒತ್ತಡ–ಸಂಕಷ್ಟಗಳ 'ಎಸ್‌ಐಆರ್' ಆಯೋಗದ ವಿಶ್ವಾಸಾರ್ಹತೆಗೆ ಧಕ್ಕೆ

ಒಂಬತ್ತು ರಾಜ್ಯ ಮತ್ತು ಮೂರು ಕೇಂದ್ರಾಡಳಿತ ಪ್ರದೇಶಗಳಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ, ಬೂತ್ ಹಂತದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ (ಬಿಎಲ್‌ಒ) ಮೇಲೆ ತೀವ್ರ ಒತ್ತಡ ಹಾಗೂ ಆತಂಕ ಸೃಷ್ಟಿಸುತ್ತಿರುವ ಬಗ್ಗೆ ವರದಿಗಳು ಪ್ರಕಟವಾಗಿವೆ. ಕಡಿಮೆ ಗಡುವಿನಲ್ಲಿ ದೊಡ್ಡ ಗುರಿಯನ್ನು ಮುಟ್ಟಬೇಕಾದ ಒತ್ತಡ ಕೆಲವು ಬಿಎಲ್‌ಒಗಳ ಆತ್ಮಹತ್ಯೆಗೆ ಕಾರಣವಾಗಿದೆ ಹಾಗೂ ಹಲವರನ್ನು ದೈಹಿಕ ಮತ್ತು ಮಾನಸಿಕ ಒತ್ತಡಕ್ಕೆ ದೂಡಿದೆ ಎಂದು ಹೇಳಲಾಗುತ್ತಿದೆ. ಇಂಥ ದುರ್ಘಟನೆಗಳು ಎಸ್‌ಐಆರ್ ಪ್ರಕ್ರಿಯೆ ಜಾರಿಯಲ್ಲಿರುವ ಹಲವೆಡೆಗಳಲ್ಲಿ ವರದಿಯಾಗುತ್ತಿವೆ. ಬಿಎಲ್‌ಒಗಳ ಮೇಲೆ ಅವರ ಮೇಲಧಿಕಾರಿಗಳು ವಿಪರೀತ ಒತ್ತಡ ಹೇರುತ್ತಿದ್ದಾರೆ ಹಾಗೂ ಅವರ ಕೆಲಸವನ್ನು ರಾಜಕೀಯ ಪಕ್ಷಗಳು ಸೂಕ್ಷ್ಮವಾಗಿ ಪರಿಶೀಲಿಸುತ್ತಿವೆ. ಈ ಪ್ರಕರಣ ಸುಪ್ರೀಂ ಕೋರ್ಟ್ ಮುಂದೆ ಬಂದ ನಂತರ, ಭಾರತೀಯ ಚುನಾವಣಾ ಆಯೋಗ ಎಸ್‌ಐಆರ್ ಪ್ರಕ್ರಿಯೆ ಕೊನೆಗೊಳ್ಳಬೇಕಾದ ಗಡುವನ್ನು ಒಂದು ವಾರ ವಿಸ್ತರಿಸಿದೆ. ಆದರೆ, ಅಧಿಕಾರಿಗಳು ಶಿಸ್ತುಕ್ರಮದ ಆತಂಕದಲ್ಲಿದ್ದಾರೆ, ಇಡೀ ಪ್ರಕ್ರಿಯೆಯನ್ನು ಸಮರ್ಪಕವಾಗಿ ಮುಗಿಸಲು ಹಾಗೂ ಮತದಾರರಿಗೆ ಅನ್ಯಾಯವಾಗದಂತೆ ನೋಡಿಕೊಳ್ಳಲು ಇಷ್ಟು ಕಡಿಮೆ ಅವಧಿ ಸಾಲದು. ಸ್ಥಳೀಯ ಸಂಸ್ಥೆಗಳ ಚುನಾವಣಾ ಪ್ರಕ್ರಿಯೆ ಜಾರಿಯಲ್ಲಿರುವ ಕೇರಳದಲ್ಲಿ ಎಸ್‌ಐಆರ್ ಕೂಡ ಸೇರಿಕೊಂಡು ಅಧಿಕಾರಿಗಳು ದುಪ್ಪಟ್ಟು ಒತ್ತಡ ಎದುರಿಸುತ್ತಿದ್ದಾರೆ. ಹಾಗಾಗಿ, ಕೇರಳದಲ್ಲಿನ ಎಸ್‌ಐಆರ್ ಪ್ರಕ್ರಿಯೆಯ ಗಡುವನ್ನು ಮತ್ತಷ್ಟು ವಿಸ್ತರಿಸುವಂತೆ ಆಯೋಗಕ್ಕೆ ಸುಪ್ರೀಂ ಕೋರ್ಟ್ ಸಲಹೆ ನೀಡಿದೆ. ಗಡುವು ವಿಸ್ತರಿಸುವಂತೆ ಕೇರಳ ಸರ್ಕಾರವೂ ಕೋರಿಕೊಂಡಿದ್ದು, ಆ ಮನವಿ ನ್ಯಾಯಸಮ್ಮತವೂ ಆಗಿದೆ.

ದೇಶದ ವಿವಿಧ ಭಾಗಗಳಲ್ಲಿ ನಡೆಯುತ್ತಿರುವ 'ಎಸ್‌ಐಆರ್' ಬಗೆಗಿನ ದೂರುಗಳನ್ನು ಚುನಾವಣಾ ಆಯೋಗ ನಿರ್ಲಕ್ಷಿಸುತ್ತಿದೆ. ಈ ಧೋರಣೆ ಅದರ ವರ್ಚಸ್ಸಿಗೆ ಧಕ್ಕೆ ತರುವಂತಹದ್ದು.

ಎಸ್‌ಐಆರ್ ಪ್ರಕ್ರಿಯೆಯ ಮೊದಲ ಪ್ರಯೋಗಶಾಲೆ ಬಿಹಾರ. ವಿಧಾನಸಭಾ ಚುನಾವಣೆಗೂ ಮೊದಲು ನಡೆದ ಆ ಪ್ರಕ್ರಿಯೆ ಅತಿ ಅವಸರದಿಂದಲೂ, ಗೊಂದಲಗಳಿಂದಲೂ ಕೂಡಿತ್ತು. ಇದೀಗ, ಒಂದು ತಿಂಗಳ ಹಿಂದಷ್ಟೇ ದೇಶದ ವಿವಿಧ ಭಾಗಗಳಲ್ಲಿ ಎಸ್‌ಐಆರ್ ನಡೆಯುತ್ತಿದೆ. ಹಲವು ತಪ್ಪುಗಳು, ಹಳೆಯದರ ಜೊತೆಗೆ ಸೇರಿಕೊಂಡಿರುವ ಹೊಸ ಸಮಸ್ಯೆಗಳು ಹಾಗೂ ಬಿಎಲ್‌ಒಗಳನ್ನು ಹಣ್ಣುಗಾಯಿ ನೀರುಗಾಯಿ ಮಾಡುವ ಧೋರಣೆ ಮುಂದುವರಿದಿದೆ. ಐವತ್ತು ಕೋಟಿ ಜನಸಂಖ್ಯೆಯನ್ನು ಒಳಗೊಂಡಿರುವ ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಗೊತ್ತುಪಡಿಸಿರುವ ಮೂರು ತಿಂಗಳ ಅವಧಿ ತೀರಾ ಕಡಿಮೆ. ಅರ್ಜಿ ನಮೂನೆಗಳ ವಿತರಣೆ, ಸ್ವೀಕಾರ, ಪರಿಶೀಲನೆ, ಮತದಾರರ ಕರಡುಪಟ್ಟಿ ಪ್ರಕಟಣೆ ಹಾಗೂ ಅಂತಿಮಪಟ್ಟಿಯನ್ನು ಹೊರತರುವ ಚಟುವಟಿಕೆಗಳೆಲ್ಲ ಈ ಕಿರು ಅವಧಿಯಲ್ಲಿಯೇ ಮುಗಿಯಬೇಕಾಗಿದೆ. ಕೊನೆಯದಾಗಿ, 2003–2004ರಲ್ಲಿ ನಡೆದ ಇದೇ ರೀತಿಯ ಪರಿಷ್ಕರಣೆ ಪೂರ್ಣಗೊಳ್ಳಲು ಎರಡು ವರ್ಷಗಳ ಅವಧಿ ತೆಗೆದುಕೊಂಡಿತ್ತು. ಕಾಲಮಿತಿ, ಪರಿಷ್ಕರಣೆಯ ರೀತಿನೀತಿ ಹಾಗೂ ಆಯೋಗದ ಉದ್ದೇಶಗಳ ಬಗ್ಗೆ ಆಗ ಯಾವ ಗಂಭೀರ ದೂರುಗಳೂ ವ್ಯಕ್ತವಾಗಿರಲಿಲ್ಲ.

ಸಾವು–ನೋವಿನ ವರದಿಗಳ ನಡುವೆಯೂ ಎಸ್‌ಐಆರ್ ಪ್ರಕ್ರಿಯೆಯಲ್ಲಿ ಯಾವುದೇ ಸಮಸ್ಯೆಗಳಿಲ್ಲ ಹಾಗೂ ಯಾರಿಗೂ ತೊಂದರೆಯಾಗುತ್ತಿಲ್ಲ ಎಂದು ಆಯೋಗ ತನ್ನ ಬೆನ್ನನ್ನು ತಾನೇ ತಟ್ಟಿಕೊಂಡಿದೆ. ಪ್ರಕ್ರಿಯೆ ಬಗೆಗಿನ ದೂರುಗಳನ್ನು ರಾಜಕೀಯಪ್ರೇರಿತ ಎಂದು ತಳ್ಳಿಹಾಕಿದೆ. ಆದರೆ, ಎಸ್‌ಐಆರ್‌ನಲ್ಲಿನ ತೊಡಕುಗಳ ಬಗ್ಗೆ ದೂರುತ್ತಿರುವ ರಾಜಕೀಯ ಪಕ್ಷಗಳು, 'ಇಡೀ ಪ್ರಕ್ರಿಯೆಯೇ ರಾಜಕೀಯಪ್ರೇರಿತ' ಎಂದು ಹೇಳಿವೆ. ಎಲ್ಲವೂ ಸರಿಯಾಗಿದೆ ಎನ್ನುವ ತನ್ನ ವಾದಕ್ಕೆ ಬಿಹಾರದಲ್ಲಿ ನಡೆದ ಪ್ರಕ್ರಿಯೆಯನ್ನು ಆಯೋಗ ನಿದರ್ಶನವಾಗಿ ಮುಂದಿಡುತ್ತಿದೆ. ಆದರೆ, ಬಿಹಾರದಲ್ಲಿ ಎಲ್ಲವೂ ಸರಿಯಾಗಿರಲಿಲ್ಲ ಹಾಗೂ ಇಡೀ ಕಸರತ್ತಿನಲ್ಲಿ ಸುಪ್ರೀಂ ಕೋರ್ಟ್ ಮತ್ತೆ ಮತ್ತೆ ಮಧ್ಯಪ್ರವೇಶಿಸಿ ನಿರ್ದೇಶನಗಳನ್ನು ನೀಡಿದ್ದನ್ನು ನೆನಪಿಸಿಕೊಳ್ಳಬಹುದು. ಬಿಹಾರದಲ್ಲಿ ಅನೇಕ ನೈಜ ಮತದಾರರು ಮತದಾರರ ಪಟ್ಟಿಗಳಿಂದ ಹೊರಗುಳಿದಿರುವ ಬಗ್ಗೆ ದೂರುಗಳಿವೆ. ನ್ಯಾಯಸಮ್ಮತ ಮತ್ತು ಪಾರದರ್ಶಕ ಚುನಾವಣೆಗಳಿಗಾಗಿ ಮತದಾರರ ಪಟ್ಟಿಯನ್ನು ಪರಿಷ್ಕರಿಸುವುದು ಅಗತ್ಯವಿದೆ. ಆದರೆ, ಆ ಪ್ರಕ್ರಿಯೆ ಅನುಮಾನಕ್ಕೆ ಆಸ್ಪದವಾಗುವಂತೆ ನಡೆಯಬಾರದು. ಆಯೋಗ ಈಗಾಗಲೇ ತನ್ನ ವಿಶ್ವಾಸಾರ್ಹತೆಗೆ ಸಾಕಷ್ಟು ಧಕ್ಕೆ ತಂದುಕೊಂಡಿದೆ; ನಿರ್ಲಕ್ಷ್ಯ ಮತ್ತು ಸಂವೇದನಾರಾಹಿತ್ಯ ನಡವಳಿಕೆ ಮುಂದುವರಿದರೆ ಮತ್ತಷ್ಟು ಹಾನಿ ಮಾಡಿಕೊಳ್ಳಲಿದೆ.

ಶಾಲಾ ಶಿಕ್ಷಣ: ಇಕ್ಕಟ್ಟು–ಬಿಕ್ಕಟ್ಟು

ವಿಶ್ಲೇಷಣೆ

ಬರಗೂರು ರಾಮಚಂದ್ರಪ್ಪ

> ಎಸ್‌ಎಸ್‌ಎಲ್‌ಸಿ ತೇರ್ಗಡೆಯ ಅಂಕಗಳ ಇಳಿಕೆ ಸೇರಿದಂತೆ, ಶಿಕ್ಷಣ ಇಲಾಖೆ ಜಾರಿಗೊಳಿಸಿರುವ ಹೊಸ ಉಪಕ್ರಮಗಳಿಗೆ ತಾತ್ತ್ವಿಕ ಸ್ಪಷ್ಟತೆ ಇದ್ದಂತಿಲ್ಲ; ಅವು ಮಕ್ಕಳು, ಶಿಕ್ಷಕರನ್ನು ಸದಾ ಒತ್ತಡದಲ್ಲಿ ಇರಿಸುವಂತಿವೆ. ಕಲಿಕೆಯ ಜೊತೆಗೆ ಮನೋಲ್ಲಾಸ ಹಾಗೂ ಮನರಂಜನೆ ಪೂರಕವಾಗಿ ಶಿಕ್ಷಣಕ್ರಮ ಇರಬೇಕು.

ಶಾಲಾ ಶಿಕ್ಷಣ ಇಲಾಖೆಯು ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ತೇರ್ಗಡೆ ಅಂಕಗಳನ್ನು 35ರಿಂದ 33ಕ್ಕೆ ಇಳಿಸುವುದರ ಜೊತೆಗೆ ಕೆಲವು ಮುಖ್ಯ ಬದಲಾವಣೆಗಳನ್ನು ಮಾಡುತ್ತಿದೆ. ವೈಯಕ್ತಿಕವಾಗಿ ನನಗೆ ತೇರ್ಗಡೆಯ ಅಂಕಗಳನ್ನು ಇಳಿಸಿದ್ದು ಮಾತ್ರವೇ 'ಮುಖ್ಯ' ಪ್ರಶ್ನೆ ಅಲ್ಲ.

ಶಾಲಾ ಶಿಕ್ಷಣ ಇಲಾಖೆಯ ಇತ್ತೀಚಿನ ತೀರ್ಮಾನಗಳಲ್ಲಿರುವ ನೀತಿ ನಿರ್ಧಾರಗಳು ತಾತ್ತ್ವಿಕವಾಗಿ ಮತ್ತು ಪ್ರಾಯೋಗಿಕವಾಗಿ ಎಷ್ಟು ಸಮರ್ಥನೀಯ ಎನ್ನುವುದು ನನ್ನ ಪ್ರಶ್ನೆ. ಕರ್ನಾಟಕದ ಕಾಂಗ್ರೆಸ್ ಪಕ್ಷ ಮತ್ತು ಸರ್ಕಾರವು ರಾಷ್ಟ್ರೀಯ ಶಿಕ್ಷಣನೀತಿಯನ್ನು ನಿರಾಕರಿಸಿತು. ರಾಜ್ಯ ಶಿಕ್ಷಣನೀತಿ ರೂಪಿಸಲು ಸಮಿತಿಯನ್ನು ನೇಮಿಸಿತು. ಈ ಸಮಿತಿಯಿಂದ ವಿಸ್ತೃತ ವರದಿಯೂ ಸರ್ಕಾರಕ್ಕೆ ಸಲ್ಲಿಕೆಯಾಗಿದೆ. ಇಲ್ಲಿರುವ ತಾತ್ತ್ವಿಕ ಪ್ರಶ್ನೆಯೆಂದರೆ– ರಾಷ್ಟ್ರೀಯ ಶಿಕ್ಷಣನೀತಿಯನ್ನು ನಿರಾಕರಿಸಿ, ಅದರ ಅಡಿಯಲ್ಲಿರುವ ಪರೀಕ್ಷಾ ಮಾದರಿಯನ್ನು ಅನುಷ್ಠಾನಗೊಳಿಸುವುದು ತಾತ್ತ್ವಿಕವಾಗಿ ಎಷ್ಟು ಸರಿ? ಹಾಗಿದ್ದರೆ ರಾಷ್ಟ್ರೀಯ ಶಿಕ್ಷಣನೀತಿಯನ್ನು 'ಇಡಿಯಾಗಿ' ಯಾಕೆ ನಿರಾಕರಿಸಬೇಕಿತ್ತು? ಶಾಲಾ ಶಿಕ್ಷಣನೀತಿಗೆ ಸಂಬಂಧಿಸಿದ ವರದಿ ಸಲ್ಲಿಕೆಯಾಗಿರುವಾಗ ಮತ್ತು ಅದನ್ನು ಆಧರಿಸಿದ ಸರ್ಕಾರದ ನೀತಿ ರೂಪುಗೊಳ್ಳದೇ ಇರುವಾಗ, ಹೊಸ ಬದಲಾವಣೆಗಳಿಗೆ ಮುಂದಾಗುವುದು ಆಡಳಿತಾತ್ಮಕ ನೀತಿ ನಿಯಮದ ದೃಷ್ಟಿಯಿಂದ ಸೂಕ್ತವಲ್ಲ ಅಲ್ಲವೆ?

ಇಂತಹ ತಾತ್ತ್ವಿಕ ಪ್ರಶ್ನೆಗಳಿಗೆ ಹೊರತಾದ ಪ್ರಾಯೋಗಿಕ ಪ್ರಶ್ನೆಗಳು ಸಾಕಷ್ಟಿವೆ. ಎಸ್‌ಎಸ್‌ಎಲ್‌ಸಿ ತೇರ್ಗಡೆಯ ಅಂಕಗಳನ್ನು 35ರಿಂದ 33ಕ್ಕೆ ಇಳಿಸುವುದಷ್ಟೇ ಅಲ್ಲ, 20 ಅಂಕಗಳನ್ನು ಆಂತರಿಕ ಮೌಲ್ಯಮಾಪನಕ್ಕೆ ನಿಗದಿ ಮಾಡಲಾಗಿದೆ. ಹೀಗೆ ಮಾಡುವಾಗ ತೇರ್ಗಡೆಯ ಶೇಕಡಾವಾರು ಸಂಖ್ಯೆಯನ್ನು ಹೆಚ್ಚಿಸಿ 'ಹೆಮ್ಮೆ'ಪಡುವ ಉಮೇದು ಮಾತ್ರವಿದೆಯೇ ಹೊರತು ಬೇರೇನೂ ಇಲ್ಲ. 35 ಮತ್ತು 33 ನಡುವಿನ ಎರಡು ಅಂಕಗಳು ವಾಸ್ತವದಲ್ಲಿ ಅಗಾಧ ಪರಿಣಾಮಕ್ಕೆ ಕಾರಣವಾಗುವುದಿಲ್ಲ. ನಾನು ಪ್ರೌಢಶಾಲೆಯ ಅಧ್ಯಾಪಕನಾಗಿಯೂ ಕೆಲಸ ಮಾಡಿದ್ದು, ತೇರ್ಗಡೆಯ ಅಂಕಕ್ಕೆ ತೀರಾ ಹತ್ತಿರ ಬಂದ ವಿದ್ಯಾರ್ಥಿಗಳಿಗೆ ಒಂದೆರಡು ಅಂಕ ಹಾಕುವ 'ಔದಾರ್ಯ'ವನ್ನು ಬಹುಪಾಲು ಮೌಲ್ಯಮಾಪಕರು ಅನುಸರಿಸುತ್ತ ಬಂದಿದ್ದನ್ನು ಕಂಡಿದ್ದೇನೆ. ಒಂದೆರಡು ಅಂಕಗಳ ಅಂತರವು ವಿದ್ಯಾರ್ಥಿಗಳ ಜ್ಞಾನ ಅಥವಾ ಅಜ್ಞಾನದ ಮಾನದಂಡ ಅಲ್ಲವೇ ಅಲ್ಲ. ಇಲ್ಲಿರುವ ಮುಖ್ಯ ಪ್ರಶ್ನೆಯೆಂದರೆ, ಆಂತರಿಕ ಮೌಲ್ಯಮಾಪನಕ್ಕೆ 20 ಅಂಕಗಳನ್ನು ನಿಗದಿ ಮಾಡಿ, ತೇರ್ಗಡೆಯಾಗಲು ಲಿಖಿತ ಪರೀಕ್ಷೆಯಲ್ಲಿ 13 ಅಂಕಗಳು ಬಂದರೆ ಸಾಕು ಎಂಬುದು ಎಷ್ಟು ಸರಿ? ವಾಸ್ತವವಾಗಿ ತೇರ್ಗಡೆಗಾಗಿ ಲಿಖಿತ ಪರೀಕ್ಷೆಗೆ ನಿಗದಿಪಡಿಸುವ ಕನಿಷ್ಠ ಅಂಕಗಳು ಗರಿಷ್ಠವಾಗಿರಬೇಕು. ಆಂತರಿಕ ಮೌಲ್ಯಮಾಪನಕ್ಕೆ ಕಡಿಮೆ ಇರಬೇಕು. ಇಲ್ಲಿ ಉಲ್ಟಾ ಆಗಿದೆ. ಇಷ್ಟಕ್ಕೂ ಯಾವ ಅಧ್ಯಾಪಕರೂ ಆಂತರಿಕ ಮೌಲ್ಯಮಾಪನದಲ್ಲಿ 18ಕ್ಕಿಂತ ಕಡಿಮೆ ಅಂಕಗಳನ್ನು ಕೊಟ್ಟ ನಿದರ್ಶನಗಳು ಇಲ್ಲ ಎಂದೇ ಹೇಳಲಾಗುತ್ತಿದೆ. ಕೆಲವೊಮ್ಮೆ 20ಕ್ಕೆ 20 ಅಂಕಗಳನ್ನು ಕೊಡುತ್ತಾರೆ.

ಲಿಖಿತ ಪರೀಕ್ಷೆಗೆ ಕಡಿಮೆ ಅಂಕಗಳನ್ನು ನಿಗದಿ ಮಾಡುವ ಮೂಲಕ ಪಠ್ಯಗಳ ಅಭ್ಯಾಸವನ್ನು ಸಾಕಷ್ಟು ಕುಂಠಿತಗೊಳಿಸಲಾಗುತ್ತದೆ. ಇದಕ್ಕೆ ಪೂರಕವಾಗಿ ಪ್ರಶ್ನೆಪತ್ರಿಕೆಗಳ ಸ್ವರೂಪವನ್ನು ಹೊಸದಾಗಿ ರೂಪಿಸಿ, ಯಾವ ಯಾವ ಅಧ್ಯಾಯಕ್ಕೆ ಎಷ್ಟು ಅಂಕಗಳಲ್ಲಿ ಪ್ರಶ್ನೆಗಳನ್ನು ಕೇಳಲಾಗುತ್ತದೆಯೆಂಬುದನ್ನು 'ನೀಲನಕ್ಷೆ'ಯ ಮೂಲಕ ಸೂಚಿಸಲಾಗುತ್ತದೆ. ಕನ್ನಡ ಪಠ್ಯದ ಉದಾಹರಣೆ ಕೊಡುವುದಾದರೆ 'ನಮ್ಮ ಭಾಷೆ' ಎಂಬ ಪಾಠದಲ್ಲಿ 1 ಅಂಕದ ಒಂದು ಪ್ರಶ್ನೆ, 2 ಅಂಕದ ಒಂದು ಪ್ರಶ್ನೆ ಕೇಳಲಾಗುತ್ತದೆ. ಈ ಅಧ್ಯಾಯಕ್ಕೆ ಒಟ್ಟು 3 ಅಂಕ ನಿಗದಿಯಾಗಿದೆ. ಹೀಗೆ ವಿವಿಧ ಪಠ್ಯವಿಷಯಗಳ ಪ್ರತಿ ಅಧ್ಯಾಯಕ್ಕೆ ಇಂತಿಷ್ಟು ಅಂಕಗಳ ಪ್ರಶ್ನೆ ಕೇಳಲಾಗುತ್ತದೆಯೆಂದು ಮೊದಲೇ ಪ್ರಕಟಿಸುವುದರಿಂದ ತೇರ್ಗಡೆ ಹೊಂದಲು ಅಗತ್ಯವಾದ ಕೆಲವು ಅಧ್ಯಾಯಗಳನ್ನು ಮಾತ್ರ ಅಭ್ಯಾಸ ಮಾಡಿಕೊಂಡರೂ ಸಾಕೆಂಬ ನಿರ್ಧಾರಕ್ಕೆ ಅನೇಕ ವಿದ್ಯಾರ್ಥಿಗಳು ಬರುವಂತಾಗಿದೆ. ಉದಾಹರಣೆಗೆ, ಐದು ಅಧ್ಯಾಯಗಳಿಗೆ ಕ್ರಮವಾಗಿ 5, 6, 4, 3, 5 ಹೀಗೆ ನಿಗದಿಯಾಗಿದ್ದರೆ, ತೇರ್ಗಡೆಯಾಗಲು ಐದು ಅಧ್ಯಾಯಗಳ ಓದು ಸಾಕೆಂದು ತೀರ್ಮಾನಿಸಬಹುದು. ಉಳಿದ ಅಧ್ಯಾಯ ಅಥವಾ ಪಾಠಗಳನ್ನು ಸಂಪೂರ್ಣ ಕೈಬಿಡಬಹುದು.

ಮೊದಲು ಹೀಗಿರಲಿಲ್ಲ. ಉದಾಹರಣೆಗೆ 'ಸಮಾಜ ವಿಜ್ಞಾನ' ಪತ್ರದಲ್ಲಿ ಚರಿತ್ರೆ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ ಎಂಬ ವಿಭಾಗಗಳಿದ್ದು, ಪ್ರತಿ ಅಧ್ಯಾಯಕ್ಕೆ ಇಂತಿಷ್ಟು ಅಂಕದ ಪ್ರಶ್ನೆ ಕೇಳಲಾಗುತ್ತದೆಯೆಂದು ಮಾಹಿತಿ ಕೊಡುತ್ತಿರಲಿಲ್ಲ. ಎಲ್ಲಾ ಅಧ್ಯಾಯಗಳೂ ಸೇರಿದಂತೆ ಚರಿತ್ರೆಗೆ ಒಟ್ಟಾರೆ ಇಂತಿಷ್ಟು, ರಾಜ್ಯಶಾಸ್ತ್ರಕ್ಕೆ ಇಂತಿಷ್ಟು ಎಂದು ಒಟ್ಟು ಅಂಕಗಳನ್ನು ನಿಗದಿ ಮಾಡುವ ಪದ್ಧತಿಯಿತ್ತು. ಉದಾಹರಣೆಗೆ, ಚರಿತ್ರೆಗೆ 30, ರಾಜ್ಯಶಾಸ್ತ್ರಕ್ಕೆ 30, ಅರ್ಥಶಾಸ್ತ್ರಕ್ಕೆ 20, ಹೀಗೆ ಒಟ್ಟಾರೆಯಾಗಿ ಅಂಕಗಳನ್ನು ನಿಗದಿ ಮಾಡಲಾಗುತ್ತಿತ್ತು. ಆಗ ವಿದ್ಯಾರ್ಥಿಗಳು ಎಲ್ಲಾ ಅಧ್ಯಾಯಗಳನ್ನೂ ಓದಬೇಕಿತ್ತು. ಅಧ್ಯಾಪಕರು ಎಲ್ಲಾ ಅಧ್ಯಾಯಗಳನ್ನೂ ಬೋಧಿಸಬೇಕಿತ್ತು. ಈಗ ಹಾಗಿಲ್ಲ. ತೇರ್ಗಡೆ ಹೊಂದಲು ಎಷ್ಟು ಬೇಕೋ ಅಷ್ಟು ಅಧ್ಯಾಯ ಆಯ್ಕೆ ಮಾಡಿಕೊಳ್ಳಬಹುದು. ಇದು ಜ್ಞಾನ ವಿಸ್ತರಣೆಯ ವಿಧಾನವಲ್ಲ. ಗುಣಮಟ್ಟದ ಕ್ರಮವೂ ಅಲ್ಲ.

ಇನ್ನು 'ಎಲ್‌ಬಿಎ' ಎಂಬ ಕಿರುಪರೀಕ್ಷೆಯ ಪದ್ಧತಿ ಜಾರಿಯಲ್ಲಿದೆ. ಎಲ್‌ಬಿಎ ಎಂದರೆ ಲೆಸನ್ ಬೇಸ್ಡ್ ಅಸೆಸ್‌ಮೆಂಟ್, ಅಂದರೆ ಪಾಠಾಧಾರಿತ ಮೌಲ್ಯಾಂಕನ. ಈ ಪದ್ಧತಿಯ ಪ್ರಕಾರ, ಪ್ರತಿ ಪಠ್ಯ ವಿಷಯದಲ್ಲೂ ಪ್ರತಿ ಪಾಠ ಅಥವಾ ಅಧ್ಯಾಯದ ಬೋಧನೆ ಮುಗಿದ ಕೂಡಲೇ ಪ್ರತ್ಯೇಕ ಕಿರುಪರೀಕ್ಷೆಗಳನ್ನು ನಿಯಮಿತವಾಗಿ ಮಾಡಬೇಕು. ವಿದ್ಯಾರ್ಥಿಗಳು ಪ್ರತಿವಾರವೂ ಕಿರು ಪರೀಕ್ಷೆಗಳಿಗೆ ಸಿದ್ಧವಾಗಬೇಕು. ಅಧ್ಯಾಪಕರು ಕಿರು ಪರೀಕ್ಷೆ ಮಾಡಿ ವಿದ್ಯಾರ್ಥಿವಾರು ಅಂಕಗಳನ್ನು ಅಪ್‌ಲೋಡ್ ಮಾಡಬೇಕು. ಇದಕ್ಕೆ ಆಕ್ಷೇಪಣೆ ಬಂದ ಮೇಲೆ ಕೆಲವು ಪಠ್ಯ ವಿಷಯಗಳಲ್ಲಿ ಮಾತ್ರ ಎರಡೆರಡು ಅಧ್ಯಾಯಗಳನ್ನು ಸೇರಿಸಿ ಕಿರುಪರೀಕ್ಷೆ ಮಾಡಲಾಗುತ್ತಿದೆಯಂತೆ. ಇಷ್ಟಾದರೂ ತಿಂಗಳಿಗೆ ಕಡೇ ಪಕ್ಷ 15 ಕಿರುಪರೀಕ್ಷೆಗಳನ್ನು ವಿದ್ಯಾರ್ಥಿಗಳು 'ಎದುರಿಸಬೇಕು'. ಇದರ ಜೊತೆಗೆ ಒಂದು ಶೈಕ್ಷಣಿಕ ವರ್ಷದಲ್ಲಿ ನಾಲ್ಕು ಫಾರ್ಮ್ಯಾಟಿವ್ ಅಸೆಸ್‌ಮೆಂಟ್ (ರೂಪಣಾತ್ಮಕ ಮೌಲ್ಯಾಂಕನ) ಕಿರು ಪರೀಕ್ಷೆಗಳನ್ನು ಮಾಡಲಾಗುತ್ತದೆ. ಈ ಕಿಕ್ಕಿರಿದ ಕಿರುಪರೀಕ್ಷೆಗಳಿಂದ ವಿದ್ಯಾರ್ಥಿಗಳ ಮೇಲೆ ಅಪಾರ ಒತ್ತಡ ಉಂಟಾಗುತ್ತದೆ. ಅಧ್ಯಾಪಕರಿಗೂ ತರಾತುರಿಯಾಗುತ್ತದೆ. ಇದರಿಂದ ಗುಣಮಟ್ಟ ಹೆಚ್ಚುವ ಬದಲು ವಿದ್ಯಾರ್ಥಿಗಳಿಗೆ ಮಾನಸಿಕ ಒತ್ತಡ ಹೆಚ್ಚಾಗುತ್ತದೆ. ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಸಮಯ ಸಿಗುವುದಿಲ್ಲ. ವಿದ್ಯಾರ್ಜನೆಯು ಉಲ್ಲಾಸದಾಯಕವಾಗಿರಬೇಕೇ ಹೊರತು ಪ್ರಯಾಸದಾಯಕವಾಗಬಾರದು.

ಇನ್ನು ಕರ್ನಾಟಕ ಪಬ್ಲಿಕ್ ಸ್ಕೂಲ್‌ಗಳ ವಿಷಯ. ಮೇಲ್ನೋಟಕ್ಕೆ ಇದೊಂದು ಆಕರ್ಷಕ ಪದ್ಧತಿ. ಆದರೆ, ಸುತ್ತಮುತ್ತಲ ಸರ್ಕಾರಿ ಶಾಲೆಗಳು ಮುಚ್ಚುತ್ತವೆಯೆಂಬ ಆತಂಕವಿದೆ. ಇದಕ್ಕೆ ನಿದರ್ಶನಗಳೂ ಇವೆ. ಸಚಿವರು 'ಒಂದು ಶಾಲೆಯನ್ನೂ ಮುಚ್ಚುವುದಿಲ್ಲ' ಎಂದು ಹೇಳಿದ್ದರೂ 'ವಿಲೀನ'ದ ಹೆಸರಲ್ಲಿ ಸ್ಥಗಿತಗೊಳ್ಳುತ್ತಿವೆ. ಇದು 'ಅಳಿಯ ಅಲ್ಲ; ಮಗಳ ಗಂಡ' ಎಂಬ ಗಾದೆ ಮಾತಿನಂತಾಗಿದೆ. ಕಡ್ಡಾಯ ಶಿಕ್ಷಣ ಕಾಯ್ದೆ ಪ್ರಕಾರ ಒಂದು ಕಿಲೋಮೀಟರ್‌ಗೆ ಒಂದು ಕಿರಿಯ ಪ್ರಾಥಮಿಕ ಶಾಲೆ, ಮೂರು ಕಿ.ಮೀ.ಗೆ ಒಂದು ಹಿರಿಯ ಪ್ರಾಥಮಿಕ ಶಾಲೆ, ಐದು ಕಿ.ಮೀ.ಗೆ ಒಂದು ಪ್ರೌಢಶಾಲೆ ಇರಬೇಕು. ಪಬ್ಲಿಕ್ ಶಾಲೆಗಳಿಂದ ಈ ಪದ್ಧತಿ ಹಾಗೇ ಉಳಿಯುವುದು ಅನುಮಾನ. ಇದಿಷ್ಟೇ ಅಲ್ಲ; ಒಂದೇ ಸೂರಿನಡಿ ಎಲ್‌ಕೆಜಿಯಿಂದ ಪಿಯುಸಿವರೆಗೆ ಶಿಕ್ಷಣ ಕೊಡುವ ಪದ್ಧತಿಯನ್ನು ಮನೋವೈಜ್ಞಾನಿಕ ದೃಷ್ಟಿಯಿಂದಲೂ ನೋಡಬೇಕು. ಎಲ್‌ಕೆಜಿ ಮತ್ತು ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳು ಪಿಯುಸಿ ವಿದ್ಯಾರ್ಥಿಗಳ ಜೊತೆಗೆ ಇರುವಾಗ ಕಿರಿಯ ವಯಸ್ಸಿನ ಮಕ್ಕಳ ಮನಸ್ಸಿನ ಮೇಲೆ ಆಗುವ ಪರಿಣಾಮ ಏನು ಎಂಬುದನ್ನೂ ವಿಶ್ಲೇಷಣೆಗೊಡ್ಡಬೇಕು. ವಿವಿಧ ವಯೋಮಾನದವರು ಪ್ರತ್ಯೇಕವಾಗಿ ವಿದ್ಯಾಭ್ಯಾಸ ಮಾಡುವಾಗ ಇರುವ ಮನೋಲ್ಲಾಸ ಹಾಗೂ ಸ್ವಾತಂತ್ರ್ಯ ಒಂದೇ ಸೂರಿನಡಿ ಸಿಗುತ್ತದೆಯೆ ಎಂಬ ಪ್ರಶ್ನೆಯೂ ಮುಖ್ಯ.

ಒಟ್ಟಾರೆ ಹೇಳುವುದಾದರೆ, ಶಿಕ್ಷಣ ಇಲಾಖೆಯು ತನ್ನ ಹೊಸ ಉಪಕ್ರಮಗಳನ್ನು ಮರು ಪರಿಶೀಲಿಸಬೇಕು:

1. ತೇರ್ಗಡೆಯ ಕನಿಷ್ಠ ಅಂಕಗಳು ಎಷ್ಟೇ ಇರಲಿ, ಆಂತರಿಕ ಮೌಲ್ಯಮಾಪನಕ್ಕೆ ನಿಗದಿ ಮಾಡಿದ ಇಪ್ಪತ್ತು ಅಂಕಗಳನ್ನು ಹತ್ತಕ್ಕೆ ಇಳಿಸಿ ಅಂಕ ನೀಡಿಕೆಗೆ ನಿರ್ದಿಷ್ಟ ಮಾನದಂಡಗಳನ್ನು ನಿಗದಿ ಮಾಡಬೇಕು. ತೇರ್ಗಡೆಗೆ ಬೇಕಾದ ಲಿಖಿತ ಪರೀಕ್ಷೆಯ ಕನಿಷ್ಠ ಮಿತಿಯ ಅಂಕಗಳು ಹೆಚ್ಚಾಗಿರಬೇಕು.
2. ಪ್ರಶ್ನೆಪತ್ರಿಕೆ ಕುರಿತಂತೆ ಪ್ರತಿ ಅಧ್ಯಾಯಕ್ಕೆ 'ಇಂತಹ ಪ್ರಶ್ನೆಗಳು ಮತ್ತು ಇಂತಿಷ್ಟೇ ಅಂಕಗಳು' ಎನ್ನುವುದನ್ನು ಬಿಡಬೇಕು. ಮೊದಲಿನ ಪದ್ಧತಿ ತರಬೇಕು.
3. ಮುಖ್ಯವಾಗಿ 'ಎಲ್‌ಬಿಎ' ಪದ್ಧತಿಯ ಒತ್ತಡವನ್ನು ಕಡಿಮೆ ಮಾಡಿ, ಪ್ರತಿ ಪಠ್ಯ ವಿಷಯಕ್ಕೆ ತಿಂಗಳಿಗೊಂದು ಕಿರುಪರೀಕ್ಷೆ ಮಾತ್ರ ಮಾಡಬೇಕು.

ಸನ್ಮಾನ್ಯ ಶಿಕ್ಷಣ ಸಚಿವರಲ್ಲಿ ವಿನಂತಿ: ಆಕ್ಷೇಪ ಎತ್ತಿದವರ ಬಗ್ಗೆ ಲಘುವಾಗಿ ಮಾತನಾಡುವ ಬದಲು, ಮೇಲ್ಕಂಡ ಬದಲಾವಣೆಗಳನ್ನು ಮಾಡಿಕೊಳ್ಳುವ ಮೂಲಕ, ಹೆಚ್ಚು ಫಲಿತಾಂಶ ಬರಬೇಕೆಂಬ ಉಮೇದಿನ ಜೊತೆಗೆ ಜ್ಞಾನಾರ್ಜನೆ ಮತ್ತು ಗುಣಮಟ್ಟಕ್ಕೂ ದಯವಿಟ್ಟು ಒತ್ತಾಸೆಯಾಗಿ.

ವಾಚಕರ ವಾಣಿ

ನಾಗರಿಕರ ಖಾಸಗಿ ಹಕ್ಕಿಗೆ ಸಂದ ಗೆಲುವು

ವಿರೋಧಪಕ್ಷಗಳ ಹೋರಾಟಕ್ಕೆ ಮಣಿದಿರುವ ಕೇಂದ್ರ ಸರ್ಕಾರ, 'ಸಂಚಾರ ಸಾಥಿ' ಆ್ಯಪ್ ಅಳವಡಿಕೆ ಕಡ್ಡಾಯಗೊಳಿಸುವ ನಿರ್ಧಾರದಿಂದ ಹಿಂದಡಿ ಇಟ್ಟಿದೆ. ಇದು ಭಾರತದ ನಾಗರಿಕರ ಖಾಸಗಿತನದ ಮೂಲಭೂತ ಹಕ್ಕಿಗೆ ದಕ್ಕಿದ ಗೆಲುವು. ಸರ್ಕಾರವು ತಂತ್ರಜ್ಞಾನ ಬಳಸಿದರೂ, ಅದು ಜನರ ಹಕ್ಕುಗಳನ್ನು ಗೌರವಿಸಬೇಕು. ಮೊಬೈಲ್‌ಗಳಲ್ಲಿ ಕಣ್ಗಾವಲು ಸಾಧನ ಕಡ್ಡಾಯಗೊಳಿಸುವ ಪ್ರಯತ್ನದ ವಿರುದ್ಧ ಜನರು ಮತ್ತು ತಂತ್ರಜ್ಞಾನ ಕಂಪನಿಗಳು ಧ್ವನಿ ಎತ್ತಿದ್ದು, ಪ್ರಜಾಪ್ರಭುತ್ವದ ಆರೋಗ್ಯಕರ ಲಕ್ಷಣ. ಈ ಆ್ಯಪ್ ಕಳವಾದ ಅಥವಾ ಕಳೆದುಹೋದ ಮೊಬೈಲ್ ಟ್ರ್ಯಾಕ್ ಮಾಡಲು ಉಪಯುಕ್ತವಾಗಿದ್ದರೂ, 'ಕಡ್ಡಾಯ ಅಳವಡಿಕೆ' ಅನಗತ್ಯ ಕಣ್ಗಾವಲಿಗೆ ಅನುವು ಮಾಡಿಕೊಡುತ್ತದೆ ಎನ್ನುವುದರಲ್ಲಿ ಅನುಮಾನವಿಲ್ಲ.

ಲಾರೆನ್ಸ್ ಡಿಸೋಜಾ, ರಾಯಚೂರು

ಅಡಿಕೆ ಬೆಳೆಗಾರರಿಗೆ ಬೇಕಿದೆ ಸಹಾಯಹಸ್ತ

ಮಲೆನಾಡಿನಾದ್ಯಂತ ಎಲೆಚುಕ್ಕಿ ಮತ್ತು ಕೊಳೆರೋಗದಿಂದ ಅಡಿಕೆ ಮರಗಳು ನಾಶವಾಗುತ್ತಿವೆ. ರಾಜ್ಯ ಸರ್ಕಾರ ಕೂಡಲೇ ಎಚ್ಚೆತ್ತುಕೊಳ್ಳಬೇಕು. ಬಜೆಟ್‌ನಲ್ಲಿ ಘೋಷಿಸಿದ ₹62 ಕೋಟಿ ಪರಿಹಾರವನ್ನು ತಕ್ಷಣವೇ ಬಿಡುಗಡೆ ಮಾಡಬೇಕು. ಅನುದಾನವಿಲ್ಲದೆ ಸ್ಥಗಿತಗೊಂಡಿರುವ ಅಡಿಕೆ ಸಂಶೋಧನಾ ಕೇಂದ್ರಗಳನ್ನು ತಕ್ಷಣ ಪುನರಾರಂಭಿಸಿ, ರೋಗ ನಿಯಂತ್ರಣಕ್ಕೆ ಪರಿಣಾಮಕಾರಿ ಮಾರ್ಗೋಪಾಯ ಕಂಡುಕೊಳ್ಳಬೇಕು. ಸಾಲದ ಮೇಲಿನ ಬಡ್ಡಿ ಮನ್ನಾ ಮತ್ತು ಮರುಪಾವತಿ ಅವಧಿ ವಿಸ್ತರಣೆ ಮಾಡಿ, ಕಂಗಾಲಾಗಿರುವ ರೈತರ ಬದುಕಿಗೆ ಆರ್ಥಿಕ ಶಕ್ತಿ ತುಂಬಬೇಕು. ಬೆಳೆಗಾರರನ್ನು ಮತ್ತಷ್ಟು ಸಂಕಷ್ಟಕ್ಕೆ ದೂಡಬಾರದು.

ನಿರಂಜನ್, ಶಿವಮೊಗ್ಗ

ಅಂಗನವಾಡಿ ನೌಕರರ ಬಗ್ಗೆ ಅನಾದರ

ಗ್ರಾಮೀಣ ಮತ್ತು ಬಡವರ್ಗದ ಮಕ್ಕಳ ಆರೋಗ್ಯ ರಕ್ಷಣೆ ಮತ್ತು ಅಪೌಷ್ಟಿಕತೆ ನಿಯಂತ್ರಣದಲ್ಲಿ ಅಂಗನವಾಡಿ ಕಾರ್ಯಕರ್ತೆಯರ ಸೇವೆ ಹಿರಿದು. ಮಹಿಳೆಯರ ತಾಯ್ತನದ ಆರೈಕೆ ಪ್ರಕ್ರಿಯೆಯಲ್ಲೂ ಅವರ ಸೇವೆಯನ್ನು ಅಲ್ಲಗಳೆಯುವಂತಿಲ್ಲ. ಮಕ್ಕಳ ಆರೈಕೆಯಲ್ಲೂ ಕಾಳಜಿ ವಹಿಸುತ್ತಾರೆ. ಸರ್ಕಾರ ನಡೆಸುವ ಹಲವು ಸಮೀಕ್ಷೆಗಳು, ಮತದಾರರ ಪಟ್ಟಿಯ ನೋಂದಣಿಗೂ ಶ್ರಮಿಸುತ್ತಾರೆ. ಆದರೆ, ಅವರ ಸೇವೆಗೆ ನೀಡುತ್ತಿರುವ ಗೌರವಧನ ಅತ್ಯಲ್ಪ. ವಿಧಾನಮಂಡಲದ ಅಧಿವೇಶನದ ವೇಳೆ ಅವರ ಹೋರಾಟ ನಡೆಯುತ್ತಲೇ ಇರುತ್ತದೆ. ಆದರೆ, ಆಳುವ ವರ್ಗವು ಅವರ ಧ್ವನಿ ಕೇಳಿಸಿಕೊಳ್ಳದೆ ಕಿವುಡಾಗಿದೆ. ಸದ್ಯ ನೀಡುತ್ತಿರುವ ಗೌರವಧನದಿಂದ ಅವರು ಐಷಾರಾಮಿ ಜೀವನ ನಡೆಸಲು ಆಗುವುದಿಲ್ಲ. ಕನಿಷ್ಠ ಕುಟುಂಬದ ನಿರ್ವಹಣೆಗೆ ಅಗತ್ಯ ಇರುವಷ್ಟು ಸಂಬಳ ಕೇಳುವುದು ಅವರ ಹಕ್ಕಲ್ಲವೆ?

ಭಾಸ್ಕರ ಸುಧೀಂದ್ರ ತಳಕೇರಿ, ಬಾಗಲಕೋಟೆ

ನಿವೃತ್ತರಿಗೆ ಸೌಲಭ್ಯ: ಕೆಎಂಎಫ್ ಮಾದರಿ

ಮಹಾಲೇಖಪಾಲರ (ಎಜಿ) ಕಚೇರಿಯಲ್ಲಿನ ಅವ್ಯವಸ್ಥೆಯಿಂದ ಸರ್ಕಾರಿ ನಿವೃತ್ತ ನೌಕರರು ಸಕಾಲದಲ್ಲಿ ಪಿಂಚಣಿ ಸೌಲಭ್ಯ ದೊರೆಯದೆ ನೋವು ಅನುಭವಿಸುತ್ತಿದ್ದಾರೆ. ಇಂತಹದ್ದೇ ಸ್ಥಿತಿಯನ್ನು ಹಿಂದೆ ಕೆಎಂಎಫ್‌ನ ನಿವೃತ್ತ ಸಿಬ್ಬಂದಿಯೂ ಅನುಭವಿಸುತ್ತಿದ್ದುದು ಉಂಟು. 1996–97ರಿಂದ ಹೊಸ ವ್ಯವಸ್ಥೆ ಜಾರಿಗೊಂಡಿದ್ದು, ನೌಕರರು ಮತ್ತು ಸಿಬ್ಬಂದಿ ನಿವೃತ್ತಿ ಹೊಂದಿದ ದಿನವೇ ಅವರಿಗೆ ಸಲ್ಲಬೇಕಾದ ಎಲ್ಲಾ ಆರ್ಥಿಕ ಸೌಲಭ್ಯವನ್ನು ಚೆಕ್ ಮೂಲಕ ನೀಡಲಾಗುತ್ತಿದೆ. ಈಗಲೂ ಅದೇ ವ್ಯವಸ್ಥೆಯಿದೆ. ಸಿಬ್ಬಂದಿ ನಿವೃತ್ತರಾಗುವ ಮೂರು ತಿಂಗಳ ಮುಂಚಿತವಾಗಿಯೇ ಅವರ ಸೇವಾವಧಿಯ ಎಲ್ಲಾ ಪೂರ್ವಾಪರ ಮಾಹಿತಿಯನ್ನು ಅವರು ಸೇವೆ ಸಲ್ಲಿಸಿದ ಘಟಕ, ವಿಭಾಗದಿಂದ ಪಡೆದುಕೊಂಡು, ಅವರಿಂದ ಸಂಸ್ಥೆಗೆ ಯಾವುದೇ ಬೇಬಾಕಿ ಇಲ್ಲವೆಂದು ಖಚಿತಪಡಿಸಿಕೊಂಡು ಪೂರ್ಣ ಮೊತ್ತ ನೀಡಲಾಗುತ್ತಿದೆ. ಎಲ್ಲಾ ಇಲಾಖೆ ಮತ್ತು ಸಂಸ್ಥೆಗಳು ಈ ಮಾದರಿ ಅಳವಡಿಸಿಕೊಳ್ಳುವುದು ಉತ್ತಮ.

ಡಿ. ಪ್ರಸನ್ನಕುಮಾರ್, ಬೆಂಗಳೂರು

ಸರ್ಕಾರ 'ಭ್ರಷ್ಟಾಚಾರ ಇಲಾಖೆ' ರಚಿಸಲಿ

ಕರ್ನಾಟಕದಲ್ಲಿ ಶೇ 63ರಷ್ಟು ಭ್ರಷ್ಟಾಚಾರ ಇದೆ ಎಂದು ಉಪ ಲೋಕಾಯುಕ್ತ ನ್ಯಾಯಮೂರ್ತಿ ವೀರಪ್ಪ ಅವರ ಹೇಳಿಕೆ ಆತಂಕ ಹುಟ್ಟಿಸುವಂತಿದೆ. ಅಧಿಕಾರದ ಚುಕ್ಕಾಣಿ ಹಿಡಿದಿರುವ ಕಾಂಗ್ರೆಸ್, ಹಿಂದಿನ ಬಿಜೆಪಿ ಆಡಳಿತವು ಕಾಮಗಾರಿಗಳಿಗೆ ಶೇ 40ರಷ್ಟು ಕಮಿಷನ್ ಪಡೆಯುತ್ತಿದೆ ಎಂದು ತುತ್ತೂರಿ ಊದಿತ್ತು. ಭ್ರಷ್ಟಾಚಾರ ಮುಕ್ತ ಸರ್ಕಾರ ನಡೆಸುತ್ತೇವೆ ಎಂದು ಹೇಳಿ ಚುನಾವಣೆಯಲ್ಲಿ ಗೆದ್ದು ಅಧಿಕಾರ ಹಿಡಿಯಿತು. ಈಗ ಉಪ ಲೋಕಾಯುಕ್ತರ ಹೇಳಿಕೆಯು ಕಾಂಗ್ರೆಸ್ ನೀಡಿದ್ದ ಭ್ರಷ್ಟಾಚಾರ ಮುಕ್ತ ಆಡಳಿತದ ಭರವಸೆ ಸುಳ್ಳು ಎಂಬುದನ್ನು ಸಾಕ್ಷೀಕರಿಸಿದೆ. ಸರ್ಕಾರವು ಹೊಸದಾಗಿ 'ಭ್ರಷ್ಟಾಚಾರ ಇಲಾಖೆ'ಯನ್ನು ಸೃಷ್ಟಿಸಿದರೆ ಹಲವು ಅತೃಪ್ತ ಶಾಸಕರಿಗೆ ಮಂತ್ರಿಗಿರಿ ಭಾಗ್ಯವಾದರೂ ಸಿಗುತ್ತದೆ. ಈ ಇಲಾಖೆಯ ನಿರ್ವಹಣೆಗೆ ನೂಕುನುಗ್ಗಲು ಶುರುವಾದರೂ ಅಚ್ಚರಿಪಡಬೇಕಿಲ್ಲ.

ರಮೇಶ್, ಬೆಂಗಳೂರು

ಡಿಜಿಟಲ್ ಇ–ಸ್ಟ್ಯಾಂಪ್: ದಿಟ್ಟ ನಿರ್ಧಾರ

ಕಂದಾಯ ಇಲಾಖೆಯು ಡಿಜಿಟಲ್ ಇ–ಸ್ಟ್ಯಾಂಪ್ ವ್ಯವಸ್ಥೆ ಜಾರಿಗೆ ದಿಟ್ಟಹೆಜ್ಜೆ ಇಟ್ಟಿದೆ. ಇದು ನಾಗರಿಕ ಸ್ನೇಹಿಯೂ ಆಗಿದೆ. ಇಂದಿಗೂ ತಾಲ್ಲೂಕು ಕೇಂದ್ರಗಳಲ್ಲಿ ನಾಗರಿಕರು ಸ್ಟ್ಯಾಂಪ್ ಪಡೆಯಲು ಸರದಿಯಲ್ಲಿ ನಿಂತು ಪರದಾಡುತ್ತಿದ್ದಾರೆ. ಹೊಸ ವ್ಯವಸ್ಥೆಯಿಂದ ಮನೆಯಲ್ಲಿಯೇ ಕುಳಿತು ತಮ್ಮ ದಾಖಲೆಗಳನ್ನು ಪಡೆದುಕೊಳ್ಳಲಿದ್ದಾರೆ. ಮತ್ತೊಂದೆಡೆ ಸ್ಟ್ಯಾಂಪ್ ಪಡೆಯುವಾಗ ಅವ್ಯವಹಾರ ಸಾಮಾನ್ಯವಾಗಿತ್ತು. ಇಲಾಖೆಗೆ ಇದು ತಲೆನೋವಾಗಿತ್ತು. ಹೊಸ ವ್ಯವಸ್ಥೆಯಿಂದ ಈ ಅಕ್ರಮಕ್ಕೆ ಕಡಿವಾಣ ಬೀಳಲಿದೆ.

ಬೀರಪ್ಪ ಡಿ. ಡಂಬಳಿ, ಅಥಣಿ

ಚಾಟಿ

ನಮ್ಮ ಗಾಂಧಿ, ನೆಹರೂ...

ಪುಟಿನ್ ಭಾರತ ಭೇಟಿ ಕಾರ್ಯಕ್ರಮಗಳಲ್ಲಿ ಮಹಾತ್ಮನ 'ರಾಜ್‌ಘಾಟ್'ಗೆ ಭೇಟಿ ನೀಡಿ ಗೌರವ ಸೂಚಿಸುವ ಕಾರ್ಯಕ್ರಮವೂ ಇದೆ! ಅದು ಸಾವಿಲ್ಲದ ಮಹಾತ್ಮನ ತಾಕತ್ತು. ಈ ಭೇಟಿಯಲ್ಲಿ ರಕ್ಷಣಾ ಒಪ್ಪಂದಗಳಿಗೆ ಸಹಿ ಆಗಲಿದೆಯಂತೆ! ಇದು ನಮ್ಮ ಚಾಚಾ ನೆಹರೂ ಆಡಳಿತ ಕಾಲ ಮರುಕಳಿಸಿದಂತೆ!

ರೇಣುಕಾ ಮಂಜುನಾಥ್, ಲೇಖಕಿ, 'ಫೇಸ್‌ಬುಕ್'ನಿಂದ

ಕಿಡಿನುಡಿ

ಭ್ರಷ್ಟ ಕಾಂಗ್ರೆಸ್ ಸರ್ಕಾರದ ವಾಸ್ತವ ಸಾಧನೆಗಳಿಗೆ ಈಗ ಘನತೆವೆತ್ತ ಉಪ ಲೋಕಾಯುಕ್ತ ನ್ಯಾಯಮೂರ್ತಿಯವರೂ ಷರಾ ಬರೆಯುವಂತಾಗಿದೆ. ಕಾಂಗ್ರೆಸ್ ಸರ್ಕಾರದ ಎರಡೂವರೆ ವರ್ಷಗಳ ಭ್ರಷ್ಟಾಚಾರ, ದುರಾಡಳಿತಕ್ಕೆ ಇದಕ್ಕಿಂತ ದೊಡ್ಡ ಸಾಕ್ಷ್ಯ ಬೇಕೆ?

ಬಿ.ವೈ. ವಿಜಯೇಂದ್ರ, ಅಧ್ಯಕ್ಷ, ಬಿಜೆಪಿ ರಾಜ್ಯ ಘಟಕ

ಚುರುಮುರಿ

ಕೋಳಿ ರಾಜಕೀಯ!

• ಬಿ.ಎನ್. ಮಲ್ಲೇಶ್

'ಸಿಎಂ ಕುರ್ಚಿ ಮ್ಯಾಲೆ ನಾಟಿ ಕೋಳಿ ಕುಂತೇತಲೇ ಪರಾಕ್!' ಎಂದ ಗುಡ್ಡೆ.

'ಯಾವುದಲೆ ಇದು ಹೊಸ ಕಾರಣಿಕ?' ದುಬ್ಬೀರ ನಕ್ಕ.

'ಈ ಕಾರಣಿಕದ ಪ್ರಕಾರ ಕೋಳಿ ಬಲಿಯಿಂದಾಗಿ ಬಂಡೆ ಸಿಎಂ ಆಗೋ ಎಲ್ಲ ಲಕ್ಷಣಗಳೂ ಕಾಣ್ತದಾವೆ. ದೇವಾನುದೇವತೆಗಳೆಲ್ಲ ಸಂತೃಪ್ತರಾಗಿ ಸಿಎಂ ಕುರ್ಚಿ ಮೇಲೆ ಪುಷ್ಪವೃಷ್ಟಿ ಮಾಡಾಕೆ ಕಾಯ್ತದಾವಂತೆ...'

'ಏನೋಪ್ಪ, ಈ ತೆಪರನ ಟೀವೀಲಿ ನವೆಂಬರ್ ಕ್ರಾಂತಿ ಅಂತಿದ್ರು, ನವೆಂಬರ್ ಮುಗಿದೇ ಹೋತು...'

'ನವೆಂಬರ್ ಮುಗಿದ್ರೆ ಏನಾತು, ಡಿಸೆಂಬರ್ ಕ್ರಾಂತಿ ಇಲ್ವಾ?' ತೆಪರೇಸಿ ನಕ್ಕ.

'ಅದೂ ಆಗದಿದ್ರೆ?' ಕೊಟ್ರೇಶಿ ಕೊಕ್ಕೆ.

'ಜನವರಿನಲ್ಲಿ 'ಸಂ'ಕ್ರಾಂತಿ!'

'ಆದ್ರೂ ನೀವು ಟೀವಿಯೋರು ಅದೀರಲ್ಲ, ಮಹಾ ಸುಳ್ಳು ಕಣಲೆ ತೆಪರ, ಕೋಳಿ ಸಾರು ತಿಂದು ಡಿಕೆಶಿ ಕಿವಿಯಲ್ಲಿ ಸಿಎಂ ಏನು ಹೇಳಿದ್ರು ಗೊತ್ತಾ ಅಂತ ನಿಮ್ ಟೀವೀಲಿ ತೋರಿಸ್ತಿದ್ರಿ. ಏನು ಕುರ್ಚಿ ಬಿಡ್ತೀನಿ ಅಂತ ಹೇಳಿದ್ರಾ?' ಮಂಜಮ್ಮ ಕೇಳಿದಳು.

'ಇಲ್ಲ, ಕೋಳಿ ಸಾರು ಬೊಂಬಾಟಾಗಿದೆ ಅಂದ್ರಂತೆ... ನೀವು ಏನೇನೋ ಕಲ್ಪನೆ ಮಾಡ್ಕಂಡ್ರೆ ನಾವೇನ್ ಮಾಡಾಕಾಗುತ್ತೆ?' ತೆಪರೇಸಿ ವಾದಿಸಿದ.

'ಆದ್ರೂ ಒಂದು ಕೋಳಿ ಏನೆಲ್ಲ ಮಾತಾಡಿಸಿಬಿಡ್ತು... ನಾವು ಪುರಾತನ ಕಾಲದಿಂದ್ಲೂ ಬ್ರದರ್ಸ್, ನಮ್ಮದು ಒಂದೇ ಪಕ್ಷ, ಒಂದೇ ಸಿದ್ಧಾಂತ ಅಂದ್ರಂತೆ ಸಿಎಂ...' ದುಬ್ಬೀರಂಗೆ ಆಶ್ಚರ್ಯ.

'ಒಂದೇ ಪಕ್ಷ, ಒಂದೇ ಸಿದ್ಧಾಂತ ಸರಿ, ಒಂದೇ ಕುರ್ಚಿ, ಬಿಡಕಾಗಲ್ಲ ಅನ್ನಿಲ್ವಾ?' ಕೊಟ್ರ ಕಿಸಕ್ಕೆಂದ.

'ಲೇಯ್, ಹೆಂಗೋ ಇಬ್ರೂ ಖುಷ್ ಖುಷಿಯಾಗಿ ಒಂದಾಗಿದಾರೆ, ನಿನ್ನಂಥೋರು ಕಡ್ಡಿ ಆಡಿಸಿ ಎಲ್ಲ ಕೆಡಿಸ್ತೀರ...' ದುಬ್ಬೀರಂಗೆ ಸಿಟ್ಟು ಬಂತು.

'ಅದೆಲ್ಲ ಇರ್ಲಿ, ಸಿಎಂ– ಡಿಸಿಎಂ ಕದನ ವಿರಾಮದ ವಿಷ್ಯ ಟ್ರಂಪ್‌ಗೆ ಗೊತ್ತಾಗಿಲ್ವಾ?'

'ಇಲ್ಲ, ಯಾಕೆ?'

'ಗೊತ್ತಾಗಿದ್ರೆ ಅವರ ಕುರ್ಚಿ ಕದನ ನಿಲ್ಸಿದ್ದು ನಾನೇ ಅಂತಿದ್ರು!' ಗುಡ್ಡೆ ಕೀಟಲೆಗೆ ಎಲ್ಲರೂ ಗೊಳ್ಳಂತ ನಕ್ಕರು.

25 ವರ್ಷಗಳ ಹಿಂದೆ

ಮಂಗಳವಾರ, 5-12-2000

• **ಮಮತಾ ರಾಜೀನಾಮೆ ಒಪ್ಪಲು ಪ್ರಧಾನಿ ನಕಾರ**

ನವದೆಹಲಿ, ಡಿ. 4 (ಪಿಟಿಐ, ಯುಎನ್‌ಐ)– ಪಂಜಾಬ್ ರೈಲು ದುರಂತದ ನೈತಿಕ ಹೊಣೆ ಹೊತ್ತು ಕೇಂದ್ರ ರೈಲ್ವೆ ಸಚಿವೆ ಮಮತಾ ಬ್ಯಾನರ್ಜಿ ಅವರು, ಇಂದು ಬೆಳಿಗ್ಗೆ ಕೇಂದ್ರ ಸಚಿವ ಸಂಪುಟಕ್ಕೆ ತಮ್ಮ ರಾಜೀನಾಮೆ ಸಲ್ಲಿಸಿದರು. ಆದರೆ, ರಾಜೀನಾಮೆ ಸ್ವೀಕರಿಸಲು ಪ್ರಧಾನಿ ನಿರಾಕರಿಸಿದ್ದು, ಹುದ್ದೆಯಲ್ಲಿ ಮುಂದುವರಿಯಲು ಮಮತಾಗೆ ಸೂಚಿಸಿದ್ದಾರೆ.

ಮಮತಾ ತಮ್ಮ ರಾಜೀನಾಮೆ ಪತ್ರವನ್ನು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರಿಗೆ ಇಂದು ಬೆಳಿಗ್ಗೆ 7.30ಕ್ಕೆ ರವಾನಿಸಿದರು. ಅದನ್ನು ಅಂಗೀಕರಿಸಲು ನಿರಾಕರಿಸಿದ್ದಾರೆ.

• **'ಆಡಳಿತದಲ್ಲಿ ಪಕ್ಷದ ವರಿಷ್ಠರ ಹಸ್ತಕ್ಷೇಪ ಇಲ್ಲ'**

ಬೆಂಗಳೂರು, ಡಿ. 4– 'ಗುಲಾಂ ನಬಿ ಅಜಾದ್ ಸೇರಿದಂತೆ ಕಾಂಗ್ರೆಸ್‌ನ ರಾಷ್ಟ್ರೀಯ ಘಟಕದ ಪದಾಧಿಕಾರಿಗಳು ಚುನಾವಣಾ ಪ್ರಣಾಳಿಕೆ ಪರಿಶೀಲನೆ ನೆಪದಲ್ಲಿ ರಾಜ್ಯ ಸರ್ಕಾರದ ಆಡಳಿತದಲ್ಲಿ ಯಾವುದೇ ಹಸ್ತಕ್ಷೇಪ ಮಾಡಿಲ್ಲ' ಎಂದು ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಇಂದು ಹೇಳಿದರು.

ವಿದ್ಯಾರ್ಥಿ ಕಾಂಗ್ರೆಸ್ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, 'ಚುನಾವಣೆಗೆ ಮುನ್ನ ಪ್ರಕಟಿಸಿದ್ದ ಪ್ರಣಾಳಿಕೆಯ ಎಷ್ಟು ಭಾಗವನ್ನು ಅನುಷ್ಠಾನಕ್ಕೆ ತಂದಿದ್ದೇವೆ ಎಂಬುದನ್ನು ಕಂಡುಕೊಳ್ಳಲು ಪರಿಶೀಲನಾ ಕಾರ್ಯ ನಡೆಸಲಾಗಿದೆ. ಇದೊಂದು ಅತ್ಯಂತ ಆರೋಗ್ಯಕರ ಬೆಳವಣಿಗೆ' ಎಂದರು.

75 ವರ್ಷಗಳ ಹಿಂದೆ

ಮಂಗಳವಾರ, 5-12-1950

• **ಗ್ರಾಮಾಂತರ ಪ್ರದೇಶಗಳ ಪಡಿತರದ ರದ್ದಿನ ಪ್ರಶ್ನೆ**

ನವದೆಹಲಿ, ಡಿ. 4– ಗ್ರಾಮಾಂತರ ಪ್ರದೇಶಗಳಲ್ಲಿ ಪಡಿತರ (ರೇಷನ್) ರದ್ದು ಮಾಡುವ ಪ್ರಶ್ನೆಯನ್ನು ಭಾರತ ಸರ್ಕಾರ ಪುನರ್ ಪರಿಶೀಲಿಸುತ್ತಿದೆ ಎಂಬ ಅಂಶವನ್ನು ಇಂದು ಪಾರ್ಲಿಮೆಂಟಿನಲ್ಲಿ ಆಹಾರ ಸಚಿವರಾದ ಕೆ.ಎಂ. ಮುನ್ಷಿ ಅವರು ಹೊರಗೆಡಹಿದರು.

ಆಹಾರ ಪರಿಸ್ಥಿತಿ ಕುರಿತು ಅನೇಕ ಪ್ರಶ್ನೆಗಳಿಗೆ ಉತ್ತರ ಕೊಡುತ್ತಿದ್ದಾಗ, ಮುಂಬೈನ ಆಹಾರ ಪರಿಸ್ಥಿತಿ ಬಗ್ಗೆ ಜೋಕಿಂ ಆಳ್ವಾರವರು ಹಾಕಿದ ಅಲ್ಪಾವಧಿ ಪ್ರಶ್ನೆಗೆ, ಮುನ್ಷಿ ಅವರು ಈ ಅಂಶವನ್ನು ಹೊರಗೆಡಹಿದರು.

ಗ್ರಾಮಾಂತರ ಪಡಿತರ ಪ್ರಶ್ನೆ ಪೂರಾ ಪರಿಶೀಲನೆಯಲ್ಲಿದೆ. ಪ್ರಸ್ತುತ ಭಾರತದ ಕೆಲವು ಭಾಗಗಳಲ್ಲಿ ಗ್ರಾಮಾಂತರ ಪಡಿತರ ಪದ್ಧತಿ ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ. ಇದಕ್ಕಾಗಿ ಹೊಸ ಮೂಲ ಯೋಜನೆಯನ್ನು ತಯಾರಿಸಲಾಗುತ್ತಿದೆ ಎಂದು ತಿಳಿಸಿದರು.

ಸಂಗತ

ಮಣ್ಣಿನ ಮ್ಯೂಸಿಯಂ: ಈ ಕಾಲದ ಅಗತ್ಯ

ಮಣ್ಣಿನ ಬಗ್ಗೆ ಅರಿವಿನ ಕೊರತೆ ತೀವ್ರವಾಗುತ್ತಿರುವ ಸಂದರ್ಭದಲ್ಲಿ, ಗ್ರಾಮ ಪಂಚಾಯಿತಿ ಮಟ್ಟದಲ್ಲಿ 'ಮಣ್ಣಿನ ಪ್ರದರ್ಶನಾಲಯ'ಗಳು ಆರಂಭಗೊಳ್ಳಬೇಕಿದೆ.

• ಗಾಣಧಾಳು ಶ್ರೀಕಂಠ

'ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಒಂದು ಮಣ್ಣಿನ ಮ್ಯೂಸಿಯಂ ಇರಬೇಕು. ಅದು ರೈತರಿಗೆ, ಯುವಜನರಿಗೆ, ವಿದ್ಯಾರ್ಥಿಗಳಿಗೆ ಗ್ರಾಮದ ಸುತ್ತಲಿನ ಮಣ್ಣಿನ ಬಗ್ಗೆ ಅರಿವು ಮೂಡಿಸುವ ತಾಣವಾಗಬೇಕು...'

ಸದಾ ಮಣ್ಣನ್ನೇ ಧ್ಯಾನಿಸುತ್ತ ದೇಶದ ಉದ್ದಗಲಕ್ಕೂ ಓಡಾಡುತ್ತಿದ್ದ, ಮಣ್ಣಿನ ಫಲವತ್ತತೆ, ಸಂರಕ್ಷಣೆಯ ಸರಳ ಸೂತ್ರಗಳನ್ನು ಹೇಳುತ್ತಾ ಸುತ್ತಮುತ್ತಲಿನವರಲ್ಲಿ ಅರಿವು ಮೂಡಿಸುವ ಮಣ್ಣಿನ ರಾಯಭಾರಿಯಂತಿದ್ದ, ಗೆಳೆಯರ ನಡುವೆ 'ಸಾಯಿಲ್ ವಾಸು' ಎಂದು ಹೆಸರಾಗಿದ್ದ ಪಿ. ಶ್ರೀನಿವಾಸ ಅವರು, ಮಣ್ಣಿಗೆ ಹೊರಡುವ ಕೊನೆ ಗಳಿಗೆಯವರೆಗೂ (ಸೆ. 13) ಕಂಡಿದ್ದ ಕನಸಿದು.

ವಾಸು ಅವರಿಗೆ ಪ್ರತಿ ಗ್ರಾಮ ಪಂಚಾಯಿತಿಯಲ್ಲಿ 'ಮಣ್ಣಿನ ಮ್ಯೂಸಿಯಂ' ತೆರೆಯಬೇಕೆಂಬ ಕನಸಿತ್ತು. ಅದನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನ ನಡೆಸಿದ್ದರು. ಅನುಭವಿ ರೈತರು, ಮಣ್ಣು ವಿಜ್ಞಾನಿಗಳು, ತಜ್ಞರು, ಮಣ್ಣಿನ ಬಗ್ಗೆ ಕೆಲಸ ಮಾಡುವ ಸಂಸ್ಥೆಗಳು ಹಾಗೂ ಇಲಾಖೆಗಳನ್ನು ಸಂಪರ್ಕಿಸಿ, ಸಂದರ್ಶಿಸಿ ಮಾಹಿತಿ ಸಂಗ್ರಹಿಸಿದ್ದರು. ದೇಶ ವಿದೇಶಗಳಲ್ಲಿರುವ ಮಣ್ಣಿನ ಪ್ರದರ್ಶನಾಲಯಗಳ ಅಧ್ಯಯನ ಮಾಡಿದ್ದರು.

'ನೆದರ್ಲೆಂಡ್‌ನಲ್ಲಿ ಇರುವಂತಹದ್ದೇ ಮಣ್ಣು ಮ್ಯೂಸಿಯಂ ಕೇರಳದ ತಿರುವನಂತಪುರದಲ್ಲಿದೆ. ನಾವೆಲ್ಲ ಅಲ್ಲಿಗೆ ಹೋಗಿ ನೋಡಿ ಬರೋಣ' ಎಂದು ಹೇಳುತ್ತಿದ್ದರು. ಮಣ್ಣಿನ ಮ್ಯೂಸಿಯಂ ಹೇಗಿರಬೇಕೆಂದು ನೀಲನಕ್ಷೆ ಮಾಡಿಕೊಂಡಿದ್ದರು.

ಮಣ್ಣು ಹೇಗೆ ಸೃಷ್ಟಿಯಾಗುತ್ತದೆ ಎನ್ನುವುದನ್ನು ತಿಳಿಸುವ, ಮಣ್ಣಿನ ಪದರಗಳ ವಿವರಗಳನ್ನು ನೀಡುವ, ಪ್ರತಿಯೊಂದು ಬಗೆಯ ಮಣ್ಣಿನ ಮಹತ್ವ–ಪ್ರಯೋಜನಗಳ ಕುರಿತು ಮಾಹಿತಿ ನೀಡುವ ಭಿತ್ತಿಪತ್ರಗಳು ಮ್ಯೂಸಿಯಂನಲ್ಲಿರಬೇಕು. ಮಣ್ಣನ್ನು ಆಶ್ರಯಿಸಿ ಸಮುದಾಯಕ್ಕೆ ತಮ್ಮದೇ ಆದ ರೀತಿಯಲ್ಲಿ ಸೇವೆ ಸಲ್ಲಿಸುವ, ಬರಿಗಣ್ಣಿಗೆ ಕಾಣುವ ಹಾಗೂ ಕಾಣದ ಸೂಕ್ಷ್ಮಾತಿಸೂಕ್ಷ್ಮ ಮಣ್ಣುಜೀವಿಗಳ ಪ್ರತಿಕೃತಿಗಳು ಅಲ್ಲಿರಬೇಕು. ಆಯಾ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಮಣ್ಣಿನ ಮಾದರಿಗಳನ್ನು ಪ್ರದರ್ಶಿಸಬೇಕು. ಯಾವ ಮಣ್ಣಿನಲ್ಲಿ ಯಾವ ಬೆಳೆ ಬೆಳೆಯುತ್ತಿದ್ದಾರೆ, ಯಾವ ಬೆಳೆ ಬೆಳೆಯಬಹುದು ಎನ್ನುವ ಮಾಹಿತಿ ಇರಬೇಕು. ರೈತರೇ ಮಣ್ಣಿನ ಪರೀಕ್ಷೆ ಮಾಡಿಕೊಳ್ಳಬಹುದಾದ ವಿಧಾನಗಳ ವಿವರಗಳು, ಪೂರ್ವಿಕರು ಮಣ್ಣಿನ ಗುಣಲಕ್ಷಣಗಳನ್ನು ಗುರುತಿಸುತ್ತಿದ್ದ ನೆಲ–ಮೂಲ ಜ್ಞಾನದ ದಾಖಲಾತಿಯ ಮಾಹಿತಿ, ಮಣ್ಣಿನ ಸಂರಕ್ಷಣೆಗಾಗಿ ಹಿಂದಿನವರು ಅನುಸರಿಸುತ್ತಿದ್ದ ತಂತ್ರಜ್ಞಾನಗಳ ಬಗ್ಗೆ ವಿವರಿಸುವ ಮಾದರಿಗಳು ಪ್ರದರ್ಶನಾಲಯದಲ್ಲಿ ಇರಬೇಕು ಎಂದು ಬಯಸಿದ್ದರು.

ಮ್ಯೂಸಿಯಂ ಬರೀ ಪ್ರದರ್ಶನದ ಕೇಂದ್ರವಾಗದೇ ಮಕ್ಕಳಿಗೆ ಅಥವಾ ಹೊಸ ತಲೆಮಾರಿಗೆ ಕೃಷಿ ಜ್ಞಾನ ಪಸರಿಸುವ ಜ್ಞಾನ ಮಂದಿರವಾಗಬೇಕು. ಮಕ್ಕಳಿಗಾಗಿ ಮಣ್ಣಿನ ಕುರಿತ ಕಾರ್ಯಕ್ರಮಗಳನ್ನು ಅಲ್ಲಿ ಏರ್ಪಡಿಸಬೇಕು ಎಂಬುದು ವಾಸು ಅವರ ಆಶಯವಾಗಿತ್ತು. ಈ ಆಶಯಗಳನ್ನು ಕೆಲ ಪಂಚಾಯಿತಿಗಳಿಗೆ, ಸರ್ಕಾರಕ್ಕೆ ತಲುಪಿಸುವ ಪ್ರಯತ್ನ ಮಾಡಿದ್ದರು.

ಐದಾರು ವರ್ಷಗಳ ಹಿಂದೆ ಸರ್ಕಾರ, ವಿಶ್ವಬ್ಯಾಂಕ್ ನೆರವಿನ 'ರಿವಾರ್ಡ್' ಎಂಬ ಜಲಾನಯನ ಅಭಿವೃದ್ಧಿ ಯೋಜನೆಯಡಿ ರಾಜ್ಯದ ಆಯ್ದ ರೈತ ಸಂಪರ್ಕ ಕೇಂದ್ರಗಳಲ್ಲಿ ವಾಸು ಅವರ ಪರಿಕಲ್ಪನೆಯನ್ನೇ ಹೋಲುವಂತಹ ಮಣ್ಣಿನ ಕೇಂದ್ರಗಳನ್ನು ತೆರೆಯುವ ಪ್ರಯತ್ನ ಮಾಡಿದ್ದುದನ್ನು ಮಣ್ಣು ವಿಜ್ಞಾನಿ ರಾಜೇಂದ್ರ ಹೆಗಡೆ ನೆನಪಿಸಿಕೊಳ್ಳುತ್ತಾರೆ. ರಾಜ್ಯದ ಕೆಲವು ಕೃಷಿ ವಿಶ್ವವಿದ್ಯಾಲಯಗಳಲ್ಲಿ ಮಣ್ಣಿನ ಮಾದರಿಯ ಪ್ರದರ್ಶನಾಲಯಗಳಿವೆ ಎಂದು ಗೆಳೆಯರು ಹೇಳುತ್ತಾರೆ. ಕಳೆದ ವರ್ಷ ಬೆಂಗಳೂರಿನಲ್ಲಿ ನಡೆದ ಸಾವಯವ– ಸಿರಿಧಾನ್ಯ ಅಂತರರಾಷ್ಟ್ರೀಯ ಮೇಳದಲ್ಲಿ ಕೃಷಿ ಇಲಾಖೆ 'ಮಣ್ಣಿನ ಪ್ರದರ್ಶನಾಲಯ'ವನ್ನು ಪ್ರದರ್ಶಿಸಿತ್ತು. ಇಂಥ ಪ್ರಯತ್ನಗಳು ಗ್ರಾಮಮಟ್ಟಕ್ಕೂ ತಲಪಬೇಕೆಂಬುದು ವಾಸು ಅವರ ಅಭಿಲಾಷೆಯಾಗಿತ್ತು.

ಅತಿಯಾದ ರಾಸಾಯನಿಕ ಗೊಬ್ಬರ, ಕೀಟನಾಶಕಗಳ ಬಳಕೆ, ಸಕಾಲದಲ್ಲಿ ಸಾವಯವ ಗೊಬ್ಬರ ನೀಡದೆ ಇರುವುದರಿಂದ ಮಣ್ಣಿನ ಫಲವತ್ತತೆ ಕಡಿಮೆಯಾಗುತ್ತಿದೆ. ಹವಾಮಾನ ಬದಲಾವಣೆಯಿಂದ ಉಂಟಾಗುತ್ತಿರುವ ಭಾರೀ ಮಳೆ ಮತ್ತು ಪ್ರವಾಹವೂ ಫಲವತ್ತಾದ ಮಣ್ಣು ಕೊಚ್ಚಿ ಹೋಗಿ ಸವಕಳಿ ಆಗುತ್ತಿರುವ ಕುರಿತು ಹಿಂದೊಮ್ಮೆ ಇಸ್ರೊದ ಸ್ಪೇಸ್ ಅಪ್ಲಿಕೇಷನ್ ಸೆಂಟರ್ ನಡೆಸಿದ ಅಧ್ಯಯನ ತಿಳಿಸಿತ್ತು. ಪ್ರಸ್ತುತ ರಾಜ್ಯದಲ್ಲಿರುವ ಕೆಲವು ಜಲಾಶಯಗಳ ಅಚ್ಚುಕಟ್ಟು ಪ್ರದೇಶದಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಎಕರೆಯಷ್ಟು ಭತ್ತದ ಗದ್ದೆಗಳಲ್ಲಿನ ಮಣ್ಣು ಸವಳು–ಜವಳಾಗಿದೆ ಎಂದು ವಿಜ್ಞಾನಿಗಳು ಹೇಳುತ್ತಾರೆ.

ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ವಿಭಾಗ ನಡೆಸಿದ ಮಣ್ಣಿನ ಫಲವತ್ತತೆ ಕುರಿತ ಜಾಗತಿಕ ಸಮೀಕ್ಷಾ ವರದಿ ಪ್ರಕಾರ, ಜಗತ್ತಿನ ಶೇ 33ರಷ್ಟು ಭೂಮಿ ಫಲವತ್ತತೆ ಕಳೆದುಕೊಂಡಿದೆ. 2050ರ ವೇಳೆಗೆ ಶೇ 50ರಷ್ಟು ಫಲವತ್ತತೆ ಕುಸಿಯುವ ಆತಂಕವಿದೆ. ಇಂಥ ಪರಿಸ್ಥಿತಿಯಲ್ಲಿ, ಹವಾಮಾನ ವೈಪರೀತ್ಯದಿಂದ ಮಣ್ಣಿನ ಮೇಲಾಗುತ್ತಿರುವ ಪರಿಣಾಮಗಳನ್ನು ನಿರ್ವಹಿಸಲು ಗ್ರಾಮಮಟ್ಟದಲ್ಲಿ ಮಣ್ಣಿನ ಅರಿವು ಮೂಡಿಸುವ ಕಾರ್ಯವನ್ನು ಪರಿಣಾಮಕಾರಿಯಾಗಿ ಮಾಡಬೇಕಾದ ಅಗತ್ಯವಿದೆ.

'ವಿಶ್ವ ಮಣ್ಣಿನ ದಿನ' (ಡಿ. 5) ಆಚರಣೆ ಸಂದರ್ಭದಲ್ಲಾದರೂ, ವಾಸು ಅವರ 'ಮಣ್ಣಿನ ಮ್ಯೂಸಿಯಂ' ಕನಸು ಮೂರ್ತರೂಪು ತಳೆಯುವ ಸಾಧ್ಯತೆಗಳ ಬಗ್ಗೆ ಚರ್ಚೆ, ಪ್ರಯತ್ನಗಳು ನಡೆಯಲಿ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರಷ್ಯಾ–ಭಾರತ ಸಂಬಂಧ

ಬಿಕ್ಕಟ್ಟಿನ ಕಾಲದ ಸ್ನೇಹಬಂಧ

ಭಾರತ ಮತ್ತು ರಷ್ಯಾವು ಹಲವು ಬಿಕ್ಕಟ್ಟುಗಳನ್ನು ಎದುರಿಸುತ್ತಿರುವ ಸಂದರ್ಭದಲ್ಲಿ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಭಾರತಕ್ಕೆ ಭೇಟಿ ನೀಡಿದ್ದಾರೆ. ಎರಡೂ ದೇಶಗಳಿಗೆ ಈ ಭೇಟಿ ಮಹತ್ವದ್ದು. ಉಕ್ರೇನ್ ಯುದ್ಧದಿಂದ ಜಾಗತಿಕವಾಗಿ ರಷ್ಯಾ ಒಬ್ಬಂಟಿಯಾಗಿದ್ದರೆ, ರಷ್ಯಾದಿಂದ ತೈಲ ಖರೀದಿಸುತ್ತಿರುವುದು ಮತ್ತು ಅಮೆರಿಕದ ಸುಂಕ ಹೇರಿಕೆಯಿಂದ ಭಾರತವೂ ಹಲವು ಸಮಸ್ಯೆಗಳನ್ನು ಎದುರಿಸುತ್ತಿದೆ. ಇನ್ನೊಂದೆಡೆ, ಚೀನಾ ಪೈಪೋಟಿ ಮತ್ತು ಬೆದರಿಕೆ. ಇಂಥ ಸ್ಥಿತಿಯಲ್ಲಿ ಪುಟಿನ್–ಮೋದಿ ಮಾತುಕತೆಯು ಹಲವು ನಿರೀಕ್ಷೆಗಳನ್ನು ಹುಟ್ಟು ಹಾಕಿದೆ

ಪ್ರಜಾವಾಣಿ ವಾರ್ತೆ

ಭಾರತ–ರಷ್ಯಾ ಸಂಬಂಧಕ್ಕೆ 78 ವರ್ಷಗಳ ಇತಿಹಾಸವಿದೆ. ಸುಮಾರು ಎಂಟು ದಶಕಗಳಿಂದಲೂ ಎರಡೂ ದೇಶಗಳ ನಡುವೆ ಹಲವು ಬಗೆಯ ಒಪ್ಪಂದಗಳು ಜಾರಿಯಲ್ಲಿವೆ. ಸೇನೆ, ಅಣ್ವಸ್ತ್ರ ಮತ್ತು ಖಗೋಳ ಕ್ಷೇತ್ರದಲ್ಲಿ ಎರಡೂ ದೇಶಗಳ ನಡುವೆ ಬಹಳ ಹಿಂದಿನಿಂದಲೂ ಕೊಡು–ಕೊಳ್ಳುವಿಕೆ ನಡೆಯುತ್ತಿದೆ. ಇವುಗಳ ಜತೆಗೆ ಮೂರು ವರ್ಷಗಳಿಂದ ವ್ಯಾಪಾರ ಸಂಬಂಧವು ಮತ್ತಷ್ಟು ವೃದ್ಧಿಯಾಗಿದೆ. ಈ ವೇಳೆ, ರಷ್ಯಾ–ಭಾರತದ ನಡುವಿನ 22ನೇ ವಾರ್ಷಿಕ ಶೃಂಗಸಭೆಯಲ್ಲಿ ಭಾಗವಹಿಸಲು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಭಾರತಕ್ಕೆ ಬಂದಿದ್ದಾರೆ. ಉಕ್ರೇನ್ ಯುದ್ಧ ಆರಂಭವಾದ ನಂತರ ಪುಟಿನ್ ಅವರು ಭಾರತಕ್ಕೆ ಭೇಟಿ ನೀಡಿರುವುದು ಇದೇ ಮೊದಲು. ದ್ವಿಪಕ್ಷೀಯ ವ್ಯಾಪಾರವನ್ನು ಇನ್ನಷ್ಟು ವಿಸ್ತರಿಸುವುದು ಮತ್ತು ಜಾಗತಿಕ ರಾಜಕೀಯ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಎರಡೂ ದೇಶಗಳ ಸಂಬಂಧವನ್ನು ಗಟ್ಟಿಗೊಳಿಸುವುದು ಭೇಟಿಯ ಪ್ರಮುಖ ಉದ್ದೇಶವಾಗಿದೆ.

ಜಾಗತಿಕ ರಾಜಕಾರಣದಲ್ಲಿ ಏನೇ ಬದಲಾವಣೆಗಳು ಘಟಿಸಿದರೂ, ಭಾರತ–ರಷ್ಯಾ ಸ್ನೇಹಕ್ಕೆ ಚ್ಯುತಿ ಬಂದಿಲ್ಲ. ಪರಸ್ಪರ ವ್ಯಾಪಾರವೂ ಹೆಚ್ಚಾಗುತ್ತಿದೆ. ಭಾರತದ ಕಂಪನಿಗಳು ರಷ್ಯಾದ ತೈಲ, ಅನಿಲ, ಔಷಧ ಮತ್ತು ಐಟಿ ಕ್ಷೇತ್ರಗಳಲ್ಲಿ ಹೂಡಿಕೆ ಮಾಡಿದರೆ, ಅಲ್ಲಿನ ಕಂಪನಿಗಳು ಭಾರತದ ಇಂಧನ, ಮೂಲ ಸೌಕರ್ಯ, ಉತ್ಪಾದನಾ ವಲಯಗಳಲ್ಲಿ ಹೂಡಿಕೆ ಮಾಡಿವೆ.

ಅಮೆರಿಕದ ಅಧ್ಯಕ್ಷರಾಗಿ ಎರಡನೇ ಅವಧಿಗೆ ಆಯ್ಕೆಯಾದ ಡೊನಾಲ್ಡ್ ಟ್ರಂಪ್ ಅವರು ಶ್ವೇತಭವನಕ್ಕೆ ಅಡಿಯಿಡುವವರೆಗೆ ಭಾರತ–ರಷ್ಯಾದ ವ್ಯಾಪಾರಕ್ಕೆ ಯಾವ ತೊಡಕೂ ಇರಲಿಲ್ಲ. ಆದರೆ, ಟ್ರಂಪ್ ಅವರಿಗೆ ಭಾರತವು ರಿಯಾಯಿತಿ ದರದಲ್ಲಿ ರಷ್ಯಾದಿಂದ ತೈಲ ಆಮದು ಮಾಡಿಕೊಳ್ಳುವುದು ಇಷ್ಟವಾಗಲಿಲ್ಲ. ಉಕ್ರೇನ್ ಯುದ್ಧವನ್ನು ಮುಂದಿಟ್ಟುಕೊಂಡು ತೈಲ ಖರೀದಿಸಬಾರದು ಎಂದು ಭಾರತದ ಮೇಲೆ ಒತ್ತಡ ಹಾಕಿದರು. ಅದು ಫಲಿಸದೇ ಇದ್ದಾಗ, ಸುಂಕ ಹೆಚ್ಚಳ, ನಿರ್ಬಂಧಗಳ ಮೊರೆ ಹೋದರು. ಈಗ ಭಾರತ ಖಾಸಗಿ ಕಂಪನಿಗಳು ರಷ್ಯಾದಿಂದ ಖರೀದಿಸುತ್ತಿದ್ದ ತೈಲದ ಪ್ರಮಾಣವನ್ನು ಕಡಿಮೆ ಮಾಡಿವೆ. ಇತರೆ ಕ್ಷೇತ್ರಗಳಲ್ಲಿ ವ್ಯಾಪಾರಕ್ಕೆ ಇರುವ ಅವಕಾಶಗಳ ಬಗ್ಗೆ ಮೋದಿ ಮತ್ತು ಪುಟಿನ್ ಮಾತುಕತೆ ನಡೆಸಲಿದ್ದಾರೆ ಎನ್ನಲಾಗುತ್ತಿದೆ.

ಬದಲಾದ ಜಾಗತಿಕ ಸ್ಥಿತಿ: ನಾಲ್ಕು ವರ್ಷಗಳ ಹಿಂದೆ ಪುಟಿನ್ ಭಾರತಕ್ಕೆ ಭೇಟಿ ನೀಡಿದ್ದರು. ಕೋವಿಡ್ ಕಾರಣದಿಂದ ಅಲ್ಪಾವಧಿಯಲ್ಲಿಯೇ ಹಿಂದಿರುಗಿದ್ದರು. ಅದಾದ ಮೂರು ತಿಂಗಳಲ್ಲೇ ಉಕ್ರೇನ್ ವಿರುದ್ಧ ರಷ್ಯಾ ಯುದ್ಧ ಆರಂಭಿಸಿತ್ತು. ಯುದ್ಧ ನಿಲ್ಲಿಸುವಂತೆ ಅಮೆರಿಕವು ರಷ್ಯಾ ಮೇಲೆ ಒತ್ತಡ ಹೇರುತ್ತಲೇ ಇದೆ. ಇದೇ ಕಾರಣಕ್ಕೆ ಅಮೆರಿಕವೂ ಸೇರಿ ಪಶ್ಚಿಮದ ಅನೇಕ ದೇಶಗಳು ರಷ್ಯಾ ಮೇಲೆ ನಿರ್ಬಂಧ ವಿಧಿಸಿವೆ. ಯುರೋಪ್‌ನಲ್ಲಿ ರಷ್ಯಾ ಒಬ್ಬಂಟಿಯಾಗಿದೆ.

ಯುದ್ಧ ನಿಲ್ಲಿಸುವಂತೆ ಪುಟಿನ್ ಅವರ ಮನವೊಲಿಸಲು ಭಾರತದ ಮೇಲೂ ಒತ್ತಡ ಹೇರಲಾಗುತ್ತಿದೆ. ಆದರೆ, ಭಾರತವು ಈ ವಿಚಾರದಲ್ಲಿ ಎಚ್ಚರಿಕೆಯಿಂದ ವರ್ತಿಸುತ್ತಿದೆ; ಅಮೆರಿಕ ಮತ್ತು ರಷ್ಯಾ ಎರಡೂ 'ಸೂಪರ್ ಪವರ್'ಗಳ ಜತೆಗಿನ ಸಂಬಂಧವನ್ನು ಜಾಗರೂಕತೆಯಿಂದ ನಿರ್ವಹಿಸುತ್ತಿದೆ. ಆದರೆ, ಟ್ರಂಪ್ ಎರಡನೇ ಬಾರಿಗೆ ಅಮೆರಿಕದ ಅಧ್ಯಕ್ಷರಾದ ನಂತರ ಭಾರತದ ಮೇಲೆ ಒತ್ತಡ ಹೆಚ್ಚಾಗಿದ್ದು, ಸಂದಿಗ್ಧ ಉಂಟಾಗಿದೆ. ಈ ದಿಸೆಯಲ್ಲಿ, ದ್ವಿಪಕ್ಷೀಯ ವ್ಯಾಪಾರವನ್ನು ಮುಂದಿನ ದಿನಗಳಲ್ಲಿ ಹೇಗೆ ಮುಂದುವರಿಸಬೇಕು ಎನ್ನುವುದರ ಬಗ್ಗೆ ಮೋದಿ–ಪುಟಿನ್ ಮಾತುಕತೆ ನಡೆಸಲಿದ್ದಾರೆ.

ಭಾರತಕ್ಕೆ ಏಕೆ ಮುಖ್ಯ?: ರಷ್ಯಾಕ್ಕೆ ಅಷ್ಟೇ ಅಲ್ಲ, ಈ ಭೇಟಿಯು ಭಾರತದ ದೃಷ್ಟಿಯಿಂದಲೂ ಮಹತ್ವ ಪಡೆದಿದೆ. ಅಮೆರಿಕದ ಒತ್ತಡಕ್ಕೆ ಮಣಿದು ಭಾರತ ತೈಲ ಆಮದು ಕಡಿಮೆ ಮಾಡಿರುವುದರಿಂದ ಮೋದಿ ಅವರಿಗೆ ಕೊಂಚ ಹಿನ್ನಡೆ ಆದಂತಾಗಿದೆ. ಕೆಲವು ಉದ್ಯಮಗಳಿಗೂ ಹೊಡೆತ ಬಿದ್ದಿದೆ. ಮುಖ್ಯವಾಗಿ, ಚೀನಾದ ಪೈಪೋಟಿ ಮತ್ತು ಬೆದರಿಕೆ ಇದ್ದೇ ಇದೆ. ಇಂಥ ಸಂದರ್ಭದಲ್ಲಿ ರಷ್ಯಾ ಜತೆ ಮಾತುಕತೆ ನಡೆಸುವ ಮೂಲಕ ಅಮೆರಿಕಕ್ಕೆ ದಿಟ್ಟ ಸಂದೇಶ ನೀಡಬಹುದು, ಜಾಗತಿಕ ಮಟ್ಟದಲ್ಲಿ ಸಂದೇಶ ರವಾನಿಸಬಹುದು ಎನ್ನುವ ಲೆಕ್ಕಾಚಾರವೂ ಮೋದಿ ಅವರಿಗಿದೆ ಎಂದು ವಿಶ್ಲೇಷಿಸಲಾಗುತ್ತಿದೆ. ಇದೇ ವೇಳೆ, ಭಾರತವು ಅಮೆರಿಕ ಮತ್ತು ಯುರೋಪ್ ಜತೆಗೂ ಉತ್ತಮ ಸಂಬಂಧ ಕಾಪಾಡಿಕೊಳ್ಳುವ ಎಚ್ಚರಿಕೆಯಿಂದಲೇ ಹೆಜ್ಜೆ ಹಾಕುವ ಅನಿವಾರ್ಯವೂ ಇದೆ.

ಆಧಾರ: ಪಿಟಿಐ, ದಿ ಗಾರ್ಡಿಯನ್, ಬಿಬಿಸಿ, ಮಾಸ್ಕೊದಲ್ಲಿನ ಭಾರತದ ರಾಯಭಾರ ಕಚೇರಿಯ ವೆಬ್‌ಸೈಟ್, ಹಣಕಾಸು ಸಚಿವಾಲಯ



ವ್ಲಾದಿಮಿರ್ ಪುಟಿನ್ | ನರೇಂದ್ರ ಮೋದಿ

ದ್ವಿಪಕ್ಷೀಯ ವ್ಯಾಪಾರ: ₹9 ಲಕ್ಷ ಕೋಟಿ ಗುರಿ

ಎರಡೂ ರಾಷ್ಟ್ರಗಳ ನಡುವಿನ ದ್ವಿಪಕ್ಷೀಯ ವ್ಯಾಪಾರವು ವರ್ಷದಿಂದ ವರ್ಷಕ್ಕೆ ಏರಿಕೆ ಕಾಣುತ್ತಿದೆ. ಮೂರು ವರ್ಷಗಳಿಂದೀಚೆಗೆ ಭಾರತವು ರಷ್ಯಾದಿಂದ ಕಡಿಮೆ ಬೆಲೆಗೆ ಕಚ್ಚಾ ತೈಲ ಖರೀದಿಸಲು ಆರಂಭಿಸಿದ ಬಳಿಕ ದ್ವಿಪಕ್ಷೀಯ ವ್ಯಾಪಾರ ಗಣನೀಯವಾಗಿ ಹೆಚ್ಚಳವಾಗಿದೆ. 2021–22ರಲ್ಲಿ ದ್ವಿಪಕ್ಷೀಯ ವ್ಯಾಪಾರ ಮೌಲ್ಯ ₹98 ಸಾವಿರ ಕೋಟಿ ಇದ್ದುದು, 2022–23ರಲ್ಲಿ ಏಕಾಏಕಿ ₹3.99 ಲಕ್ಷ ಕೋಟಿಗೆ ತಲುಪಿತ್ತು. ಕಳೆದ ವರ್ಷ ಇದು ₹5.80 ಲಕ್ಷ ಕೋಟಿಗೆ ಏರಿಕೆ ಕಂಡಿದೆ. 2030ರ ವೇಳೆಗೆ ಇದನ್ನು ₹9 ಲಕ್ಷ ಕೋಟಿಗೆ (10,000 ಕೋಟಿ ಡಾಲರ್) ಹೆಚ್ಚಿಸಲು ಎರಡೂ ರಾಷ್ಟ್ರಗಳು ಗುರಿ ಹಾಕಿಕೊಂಡಿವೆ.

ವ್ಯಾಪಾರ ಕೊರತೆ: ಭಾರತವು ರಷ್ಯಾದೊಂದಿಗೆ ಭಾರಿ ಪ್ರಮಾಣದ ವ್ಯಾಪಾರ ಕೊರತೆ ಹೊಂದಿದೆ. ಭಾರತವು ರಷ್ಯಾಕ್ಕೆ ಕಡಿಮೆ ಪ್ರಮಾಣದಲ್ಲಿ ರಫ್ತು ಮಾಡಿದರೆ, ಅಲ್ಲಿಂದ ಹೆಚ್ಚಿನ ಆಮದು ಮಾಡಿಕೊಳ್ಳುತ್ತದೆ. ಅದರಲ್ಲಿ ಕಚ್ಚಾ ತೈಲದ್ದೇ ಸಿಂಹಪಾಲು. 2024–25ರಲ್ಲಿ ಭಾರತವು ₹41,243 ಕೋಟಿ ಮೌಲ್ಯದ ಸರಕುಗಳನ್ನು ರಫ್ತು ಮಾಡಿದ್ದರೆ, ₹5.39 ಲಕ್ಷ ಕೋಟಿ ಮೌಲ್ಯದ ಸರಕುಗಳನ್ನು ಆಮದು ಮಾಡಿಕೊಂಡಿದೆ. ಕಳೆದ ವರ್ಷದ ವ್ಯಾಪಾರ ಕೊರತೆ ಮೌಲ್ಯ ₹4.98 ಲಕ್ಷ ಕೋಟಿ.



ರಕ್ಷಣೆ: ದೊಡ್ಡ ಪಾಲುದಾರ

ಭಾರತ ಮತ್ತು ರಷ್ಯಾ ನಡುವಿನ ದ್ವಿಪಕ್ಷೀಯ ಸಂಬಂಧ ಹೆಚ್ಚು ಸದೃಢವಾಗಿರುವುದು ರಕ್ಷಣಾ ಪಾಲುದಾರಿಕೆಯಿಂದ. ಸೋವಿಯತ್ ಒಕ್ಕೂಟದ ಕಾಲದಿಂದಲೂ ಈ ಕ್ಷೇತ್ರದಲ್ಲಿ ಉಭಯ ರಾಷ್ಟ್ರಗಳು ಪಾಲುದಾರಿಕೆ ಹೊಂದಿವೆ. ಈಗ ಭಾರತ ಅಮೆರಿಕ, ಫ್ರಾನ್ಸ್ ಸೇರಿದಂತೆ ಬೇರೆ ಬೇರೆ ರಾಷ್ಟ್ರಗಳೊಂದಿಗೆ ರಕ್ಷಣಾ ಒಪ್ಪಂದಗಳನ್ನು ಮಾಡಿಕೊಂಡಿದ್ದರೂ ರಕ್ಷಣೆ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ರಷ್ಯಾವು ಈಗಲೂ ಬಹುದೊಡ್ಡ ಪಾಲುದಾರ ರಾಷ್ಟ್ರವಾಗಿದೆ.

'ಆಪರೇಷನ್ ಸಿಂಧೂರ'ದ ನಂತರ ನಡೆದ ಸಂಘರ್ಷದಲ್ಲಿ ಪಾಕಿಸ್ತಾನವು ಭಾರತದ ಮುಂದೆ ಮಂಡಿಯೂರುವಂತೆ ಮಾಡಿದ್ದು, ಬ್ರಹ್ಮೋಸ್ ಕ್ಷಿಪಣಿ ಮತ್ತು ಎಸ್–400 ವಾಯು ರಕ್ಷಣಾ ವ್ಯವಸ್ಥೆ ಎಂದು ಹೇಳಲಾಗಿದೆ. ಇವೆರಡಲ್ಲೂ ರಷ್ಯಾದ ಕೊಡುಗೆ ಇದೆ. ನಿಖರ ದಾಳಿಯ ಮೂಲಕ ಜಗತ್ತಿಗೆ ತನ್ನ ಸಾಮರ್ಥ್ಯವನ್ನು ಸಾಬೀತುಪಡಿಸಿದ ಬ್ರಹ್ಮೋಸ್ ಕ್ಷಿಪಣಿ ವ್ಯವಸ್ಥೆಯನ್ನು ಭಾರತ ಮತ್ತು ರಷ್ಯಾವು ಜಂಟಿಯಾಗಿ ಅಭಿವೃದ್ಧಿಪಡಿಸಿವೆ. ಅದೇ ರೀತಿ, ಪಾಕಿಸ್ತಾನದ ಕ್ಷಿಪಣಿ, ಡ್ರೋನ್ ದಾಳಿಗಳನ್ನು ತಡೆಯುವಲ್ಲಿ ಪ್ರಮುಖ ಪಾತ್ರ ವಹಿಸಿದ ಎಸ್–400 ವ್ಯವಸ್ಥೆ ರಷ್ಯಾ ಸೃಷ್ಟಿ. ಸುಖೋಯ್ ಯುದ್ಧವಿಮಾನಗಳು (ಎಸ್‌ಯು–30, ಎಸ್‌ಯು–30ಎಂಕೆಐ) ಸೇರಿದಂತೆ ರಷ್ಯಾ ನಿರ್ಮಿತ ಹಲವು ಯುದ್ಧ ಸಲಕರಣೆಗಳು ಭಾರತದ ಸೇನಾ ಬತ್ತಳಿಕೆಯಲ್ಲಿವೆ.

ಅಮೆರಿಕ, ಫ್ರಾನ್ಸ್ ಹಾಗೂ ಇತರ ದೇಶಗಳು ರಕ್ಷಣಾ ಸಾಮಗ್ರಿಗಳನ್ನು ಮಾತ್ರ ನೀಡುತ್ತವೆಯೇ ವಿನಾ, ಅವುಗಳ ತಂತ್ರಜ್ಞಾನವನ್ನು ವರ್ಗಾವಣೆ ಮಾಡುವುದಿಲ್ಲ. ಆದರೆ, ರಷ್ಯಾ ಉಪಕರಣಗಳ ಜೊತೆಗೆ, ಅವುಗಳ ತಂತ್ರಜ್ಞಾನಗಳನ್ನೂ ಭಾರತಕ್ಕೆ ನೀಡುತ್ತಾ ಬಂದಿದೆ. ಟಿ–90 ಟ್ಯಾಂಕ್‌ಗಳು, ಎಸ್–30ಎಂಕೆಐ ಯುದ್ಧವಿಮಾನಗಳು ಸೇರಿದಂತೆ ಹಲವು ಸೇನಾ ಸಲಕರಣೆಗಳನ್ನು ಭಾರತದಲ್ಲೇ ಜೋಡಿಸಲಾಗುತ್ತಿದೆ ಇಲ್ಲವೇ ತಯಾರಿಸಲಾಗುತ್ತಿದೆ. ರಷ್ಯಾದ ಅತ್ಯಾಧುನಿಕ ಯುದ್ಧವಿಮಾನವಾದ ಎಸ್‌ಯು–57 ತಂತ್ರಜ್ಞಾನವನ್ನು ಭಾರತಕ್ಕೆ ವರ್ಗಾಯಿಸಿ, ಇಲ್ಲೇ ಅದನ್ನು ತಯಾರಿಸುವ ಮಾತುಗಳು ಈಗ ಕೇಳಿಬರುತ್ತಿವೆ. ಶಸ್ತ್ರಾಸ್ತ್ರ ಮತ್ತು ಸೇನಾ ಸಲಕರಣೆಗಳಿಗೆ ಸಂಬಂಧಿಸಿದಂತೆ ಜಂಟಿ ಸಂಶೋಧನೆ, ಅಭಿವೃದ್ಧಿ, ತಯಾರಿಕೆ ಮತ್ತು ಮಾರಾಟದ ನಂತರದ ಸೇವಾ ನೆರವಿಗೆ ಸಂಬಂಧಿಸಿದಂತೆ ಎರಡೂ ರಾಷ್ಟ್ರಗಳು 2021–2031ರ ಅವಧಿಗೆ ಸೇನಾ–ತಂತ್ರಜ್ಞಾನ ಸಹಕಾರ ಒಪ್ಪಂದಕ್ಕೆ 2021ರ ಡಿ.6ರಂದು ಸಹಿ ಹಾಕಿವೆ.

ರಾಷ್ಟ್ರೀಯ

ಆ್ಯಸಿಡ್ ದಾಳಿ: ಹೈಕೋರ್ಟ್‌ಗಳಿಗೆ ಸೂಚನೆ

ಬಾಕಿ ಪ್ರಕರಣ: 3ಂಗಳೊಳಗೆ ವಿವರ ಸಲ್ಲಿಸಿ–'ಸುಪ್ರೀಂ'

ನವದೆಹಲಿ(ಪಿಟಿಐ): ಆ್ಯಸಿಡ್ ದಾಳಿ ಪ್ರಕರಣಗಳ ವಿಚಾರಣೆಯಲ್ಲಿ ಆಗುತ್ತಿರುವ ವಿಳಂಬಕ್ಕೆ ಅಸಮಾಧಾನ ವ್ಯಕ್ತಪಡಿಸಿರುವ ಸುಪ್ರೀಂ ಕೋರ್ಟ್, ದೇಶದಾದ್ಯಂತ ಬಾಕಿ ಇರುವ ಇಂತಹ ಪ್ರಕರಣಗಳ ಕುರಿತ ವಿವರಗಳನ್ನು 4 ವಾರಗಳೊಳಗೆ ಸಲ್ಲಿಸುವಂತೆ ಎಲ್ಲ ಹೈಕೋರ್ಟ್‌ಗಳಿಗೆ ಗುರುವಾರ ಸೂಚಿಸಿದೆ.

'ಆ್ಯಸಿಡ್ ದಾಳಿ ಪ್ರಕರಣಗಳ ವಿಚಾರಣೆಯಲ್ಲಿ ತೋರುವ ವಿಳಂಬವು ನ್ಯಾಯಾಂಗ ವ್ಯವಸ್ಥೆಯ ಅಪಹಾಸ್ಯವೇ ಸರಿ' ಎಂದು ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ಪೀಠ ಹೇಳಿದೆ.

'ಆ್ಯಸಿಡ್ ದಾಳಿ ಪ್ರಕರಣಗಳ ವಿಲೇವಾರಿಗೆ ವೇಗ ನೀಡುವುದಕ್ಕಾಗಿ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಬೇಕು' ಎಂಬ ಸಲಹೆ ನೀಡಿರುವ ಪೀಠವು, ಈ ಸಂಬಂಧ ಕೇಂದ್ರ ಸರ್ಕಾರ ಹಾಗೂ ಅಂಗವಿಕಲರ ಸಬಲೀಕರಣ ಇಲಾಖೆಗೆ ನೋಟಿಸ್ ಜಾರಿ ಮಾಡಿದೆ.

ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಕೂಡ ಈ ಪೀಠದಲ್ಲಿದ್ದಾರೆ.

'ಆ್ಯಸಿಡ್ ದಾಳಿ ಸಂತ್ರಸ್ತರನ್ನು ಅಂಗವಿಕಲರು ಎಂಬುದಾಗಿ ಪರಿಗಣಿಸಬೇಕು. ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಕಾಯ್ದೆಯಡಿ ಲಭ್ಯವಿರುವ ಎಲ್ಲ ಸವಲತ್ತುಗಳು ಇವರಿಗೂ ಸಿಗುವಂತಾಗಬೇಕು. ಇದಕ್ಕಾಗಿ ಕಾಯ್ದೆಗೆ ತಿದ್ದುಪಡಿ ತರಬೇಕು ಇಲ್ಲವೇ ಸುಗ್ರೀವಾಜ್ಞೆ ಹೊರಡಿಸಲು ಪರಿಗಣಿಸಿ' ಎಂದು ಕೇಂದ್ರ ಸರ್ಕಾರಕ್ಕೆ ಪೀಠವು ಸೂಚಿಸಿದೆ.

ಆ್ಯಸಿಡ್ ದಾಳಿಗೆ ಒಳಗಾಗಿರುವ ಶಾಹೀನ್ ಮಲಿಕ್ ಅವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ವಿಚಾರಣೆ ವೇಳೆ ಪೀಠ ಈ ಸೂಚನೆಗಳನ್ನು ನೀಡಿದೆ.

ವಿಚಾರಣೆ ವೇಳೆ, 'ಈ ವಿಚಾರವನ್ನು ಸರ್ಕಾರವು ಅತ್ಯಂತ ಗಂಭೀರವಾಗಿ ಪರಿಗಣಿಸಿ, ಕ್ರಮ ಕೈಗೊಳ್ಳುವುದು' ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಪೀಠಕ್ಕೆ ತಿಳಿಸಿದರು.

> **ಬಲವಂತದಿಂದಾಗಿ ಆ್ಯಸಿಡ್ ಸೇವಿಸುವವರು ಹಲವು ಕಷ್ಟಗಳನ್ನು ಎದುರಿಸಬೇಕಾಗುತ್ತದೆ. ಆಹಾರ ಸೇವನೆಗೆ ಕೃತಕ ನಾಳಗಳನ್ನು ಅಳವಡಿಸಲಾಗುತ್ತದೆ. ತೀವ್ರವಾದ ಅಂಗವೈಕಲ್ಯದಿಂದ ನರಳಬೇಕಾಗುತ್ತದೆ**
> **ಶಾಹೀನ್ ಮಲಿಕ್,** ಆ್ಯಸಿಡ್ ದಾಳಿ ಸಂತ್ರಸ್ತೆ

> **ದೇಹದ ಮೇಲೆ ಆ್ಯಸಿಡ್ ಎರಚಿದ ಘಟನೆಗಳ ಬಗ್ಗೆ ಕೇಳಿರುವೆ. ಸಂತ್ರಸ್ತರಿಗೆ ಬಲವಂತದಿಂದ ಆ್ಯಸಿಡ್ ಕುಡಿಸಿರುವ ಪ್ರಕರಣದ ಬಗ್ಗೆ ಕೇಳಿರಲಿಲ್ಲ. ಇದು ಆಘಾತಕಾರಿ**
> **ಸೂರ್ಯ ಕಾಂತ್,** ಸಿಜೆಐ

ಇದೇ ವೇಳೆ ಸ್ವತಃ ಶಾಹೀನ್ ಮಲಿಕ್ ವಾದ ಮಂಡಿಸಿ, 'ನನ್ನ ಮೇಲೆ 2009ರಲ್ಲಿ ಆ್ಯಸಿಡ್ ದಾಳಿ ನಡೆಯಿತು. 2013ರ ವರೆಗೆ ಪ್ರಕರಣದ ವಿಚಾರಣೆಯಲ್ಲಿ ಯಾವುದೇ ಪ್ರಗತಿ ಇರಲಿಲ್ಲ. ಈಗ ರೋಹಿಣಿ ಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿದೆ' ಎಂದು ಪೀಠಕ್ಕೆ ಅರುಹಿದರು.

ಇದನ್ನು ಕೇಳಿ ಅಚ್ಚರಿ ವ್ಯಕ್ತಪಡಿಸಿದ ಪೀಠ, 'ಮಲಿಕ್ ಪ್ರಕರಣದ ವಿಚಾರಣೆ 2009ರಿಂದ ವಿಚಾರಣೆಗೆ ಬಾಕಿ ಉಳಿದಿದೆ. ಇದು ನಾಚಿಕೆಗೇಡಿನದು. ರಾಷ್ಟ್ರವೇ ತಲೆತಗ್ಗಿಸುವ ವಿಚಾರ' ಎಂದು ಅಸಮಾಧಾನ ವ್ಯಕ್ತಪಡಿಸಿತು.

ಪ್ರಕರಣವನ್ನು ಯಾಕೆ ಇನ್ನೂ ಇತ್ಯರ್ಥಪಡಿಸಲಾಗಿಲ್ಲ ಎಂಬ ಬಗ್ಗೆ ವಿವರಣೆಯೊಂದಿಗೆ ಅರ್ಜಿ ಸಲ್ಲಿಸುವಂತೆ ಮಲಿಕ್ ಅವರಿಗೆ ಸೂಚಿಸಿದ ಸಿಜೆಐ, ಮುಂದಿನ ವಾರದಿಂದ ಪ್ರತಿನಿತ್ಯ ಅರ್ಜಿಯ ವಿಚಾರಣೆ ನಡೆಸಲಾಗುವುದು ಎಂದು ಹೇಳಿದರು.

'ರೂಪಾಯಿ ಮೌಲ್ಯ ಕುಸಿತ ಹೋಗಿ ಅವರನ್ನೇ ಕೇಳಿ'

ಪ್ರಜಾವಾಣಿ ವಾರ್ತೆ

ನವದೆಹಲಿ: ಅಮೆರಿಕದ ಡಾಲರ್ ಎದುರು ಭಾರತ ರೂಪಾಯಿ ಮೌಲ್ಯ ಕುಸಿತವಾಗಿರುವ ಬಗ್ಗೆ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ, ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಗುರುವಾರ ಕೇಂದ್ರ ಸರ್ಕಾರದ ವಿರುದ್ಧ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದರು.

'ಕೆಲವು ವರ್ಷಗಳ ಹಿಂದೆ, ಮನಮೋಹನ್ ಸಿಂಗ್ ಅವರು ಪ್ರಧಾನಿ ಆಗಿದ್ದಾಗ ರೂಪಾಯಿ ಮೌಲ್ಯಕ್ಕಿಂತ ಅಮೆರಿಕದ ಡಾಲರ್ ಮೌಲ್ಯವು ಅಧಿಕವಾಗಿತ್ತು. ಆಗ ಇವರೆಲ್ಲರೂ (ಬಿಜೆಪಿಯವರು) ಏನು ಹೇಳಿದ್ದರು? ಈಗ ಅವರು ಏನು ಉತ್ತರ ನೀಡುತ್ತಾರೆ? ಹೋಗಿ ಅವರನ್ನೇ ಕೇಳಿ. ನನ್ನನ್ನು ಯಾಕೆ ಪ್ರಶ್ನಿಸುತ್ತಿದ್ದೀರಿ?' ಎಂದು ಪ್ರಿಯಾಂಕಾ ಅವರು ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದರು.

ಇದೇ ವಿಚಾರವಾಗಿ ಕಾಂಗ್ರೆಸ್ ಸಂಸದ ವಿವೇಕ್ ಕೆ.ತಂಖಾ ಅವರು ರಾಜ್ಯಸಭೆಯ ಶೂನ್ಯ ವೇಳೆ ಮಾತನಾಡಿ, 'ಭಾರತದ ರೂಪಾಯಿ ಮೌಲ್ಯವು ಕುಸಿಯುತ್ತಿದೆ. ಜನರ ಆರ್ಥಿಕ ಸಂಕಷ್ಟವು ಅಧಿಕಗೊಳ್ಳುತ್ತಿದೆ. ಭಾರತದ ಇತಿಹಾಸದಲ್ಲಿಯೇ ರೂಪಾಯಿ ಮೌಲ್ಯವು ಇಷ್ಟೊಂದು ಕುಸಿತ ಕಂಡಿದೆ. ಕಳೆದ ಐದು ವರ್ಷಗಳಲ್ಲಿಯೇ ರೂಪಾಯಿಯು ತನ್ನ ಶೇ20ರಿಂದ 27ರಷ್ಟು ಮೌಲ್ಯವನ್ನು ಕಳೆದುಕೊಂಡಿದೆ' ಎಂದರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಭಾರತ ಸರ್ಕಾರದ ಅಧಿಕೃತ ದಾಖಲೆ ಎಂಬಂತೆ ಕಾಣುವ ಪತ್ರವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಅದರ ಮೇಲೆ 'ಟಾಪ್ ಸೀಕ್ರೆಟ್' ಎನ್ನುವ ಮುದ್ರೆ ಇದೆ. ಪಾಕಿಸ್ತಾನದ ಜೈಲಿನಲ್ಲಿರುವ ಇಮ್ರಾನ್ ಖಾನ್ ಅವರನ್ನು ರಾಜಕೀಯ ಕೈದಿ ಎಂದು ಪರಿಗಣಿಸಿ ಭಾರತಕ್ಕೆ ಹಸ್ತಾಂತರಿಸುವಂತೆ ಕೇಂದ್ರ ಸರ್ಕಾರವು ಪಾಕಿಸ್ತಾನ ಸರ್ಕಾರವನ್ನು ವಿನಂತಿಸಿರುವ ದಾಖಲೆ ಇದು ಎಂದು ಪೋಸ್ಟ್ ಹಂಚಿಕೊಂಡವರು ಪ್ರತಿಪಾದಿಸಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

ದಾಖಲೆ ಪತ್ರವನ್ನು ಮರದ ಮೇಲಿಟ್ಟು ಫೋಟೊ ತೆಗೆಯಲಾಗಿದೆ. ಚಿತ್ರದ ಮೇಲಿನ ಬೆಳಕು ವಿಶಿಷ್ಟವಾಗಿದ್ದು, ಅಸಹಜ ಎನ್ನುವಂತಿದೆ. ದಾಖಲೆ ಪತ್ರದಲ್ಲಿ 'ರಾಜಕೀಯ ಕೈದಿ', 'ಸುರಕ್ಷಿತ ತಾಣ' ಇತ್ಯಾದಿ ಪದಗಳನ್ನು ಬಳಸಲಾಗಿದೆ. ಎಷ್ಟೇ ರಹಸ್ಯ ಪತ್ರಗಳಾದರೂ, ವಿದೇಶಾಂಗ ವ್ಯವಹಾರಗಳಲ್ಲಿ ಇಂಥ ಪದಗಳನ್ನು ಬಳಸುವುದಿಲ್ಲ. ಜತೆಗೆ ಇಮ್ರಾನ್ ಅಹಮದ್ ಖಾನ್ ನಿಯಾಜಿ ಎಂದು ಬರೆಯಲಾಗಿದೆ. ಆದರೆ, ಈ ಹಿಂದೆ ತನ್ನ ಅಧಿಕೃತ ಸಂವಹನದಲ್ಲಿ ಭಾರತವು ಇಮ್ರಾನ್ ಖಾನ್ ಎಂದೇ ಬಳಸಿತ್ತು. ಕೇಂದ್ರ ಸರ್ಕಾರದ ಯಾವುದೇ ವೆಬ್‌ಸೈಟ್‌ನಲ್ಲಿಯೂ ಈ ಬಗ್ಗೆ ಪ್ರಸ್ತಾಪ ಇಲ್ಲ. ಪ್ರೆಸ್ ಇನ್‌ಫರ್ಮೇಷನ್ ಬ್ಯೂರೊ ಈ ಸುದ್ದಿಯನ್ನು ನಿರಾಕರಿಸಿದೆ. ಪಾಕಿಸ್ತಾನದ ಸುಳ್ಳು ಸುದ್ದಿ ಜಾಲದ ಭಾಗವಾದ ಈ ನಕಲಿ ದಾಖಲೆಯನ್ನು ಹಂಚಿಕೊಳ್ಳುವ ಮೂಲಕ ಕೆಲವರು ಸುಳ್ಳು ಪ್ರತಿಪಾದನೆ ಮಾಡುತ್ತಿದ್ದಾರೆ ಎಂದು ಬೂಮ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ನುಡಿ ಬೆಳಗು

ರೇಣುಕಾ ನಿಡಗುಂದಿ

ಆರಡಿ ಭೂಮಿಯಷ್ಟೇ ನಿನ್ನದು

ಒಂದೂರಲ್ಲಿ ಪಹೋಮ್ ಎಂಬ ಬಡ ರೈತನಿದ್ದ. ಅವನಿಗೆ ಒಂದು ಸಣ್ಣ ಮನೆ, ಒಂದಿಷ್ಟು ಎಕರೆ ಹೊಲ ಹೀಗೆ ಬದುಕಲು ಬೇಕಾದ ಎಲ್ಲವೂ ಇತ್ತು. ಇಷ್ಟಿದ್ದರೂ ಅವನಿಗೆ ಮನಸ್ಸಿನಲ್ಲಿ ಒಂದೇ ಚಿಂತೆ— 'ಇನ್ನೂ ಸ್ವಲ್ಪ ಭೂಮಿಯಿದ್ದರೆ ಎಷ್ಟು ಚೆನ್ನಾಗಿರುತ್ತದೆ' ಎನ್ನುವುದು.

ಒಂದು ದಿನ ಅವನ ಪರಿಚಯದ ಜಮೀನುದಾರ ಹೊಲ ಮಾರಾಟಕ್ಕೆ ಇಟ್ಟನು. ಪಹೋಮ್ ಕೂಡಿಟ್ಟ ಎಲ್ಲಾ ಹಣವನ್ನು ಕೊಟ್ಟು ಸ್ವಲ್ಪ ಭೂಮಿ ಕೊಂಡುಕೊಂಡನು. ಮೊದಲು ಸಂತೋಷಗೊಂಡ, ಆದರೆ ಕೆಲವೇ ದಿನಗಳಲ್ಲಿ 'ಇನ್ನೂ ಸ್ವಲ್ಪ ದೊಡ್ಡ ಹೊಲ ಇದ್ದಿದ್ದರೆ' ಎಂಬ ಚಿಂತೆ ಹತ್ತಿತು.

ಸಂತೋಷವಾಗಿರುವುದನ್ನು ಬಿಟ್ಟು ಮನಸ್ಸಿನಲ್ಲಿ ದುರಾಸೆಯ ಬೆಂಕಿ ಹೊತ್ತಿ ಉರಿಯತೊಡಗಿತು. ಅದೇ ಸಮಯಕ್ಕೆ ಅವನು ಒಂದು ಅಚ್ಚರಿಯ ಕಥೆ ಕೇಳಿದನು. 'ದೂರದೂರಿನಲ್ಲಿ ಬಾಷ್ಕಿರ್ ಜನರು ಇದ್ದಾರೆ, ಅವರು ಒಂದು ದಿನದಲ್ಲಿ ನೀನು ಎಷ್ಟು ನಡೆಯುತ್ತೀಯೋ ಅಷ್ಟು ಭೂಮಿ ಕೊಡುತ್ತಾರೆ' ಎಂಬ ಸುದ್ದಿ ಅವನ ದುರಾಸೆಯನ್ನು ಹೆಚ್ಚಿಸಿತು.

ಪಹೋಮ್ ಖುಷಿಯಿಂದ ಅಲ್ಲಿಗೆ ಹೋದನು. ಆ ಜನರು ಹೇಳಿದರು: 'ಅಯ್ಯಾ, ಬೆಳಗಿನ ಸೂರ್ಯೋದಯದ ಸಮಯದಲ್ಲಿ ನಡೆಯಲು ಆರಂಭಿಸಿ, ಸಂಜೆ ಸೂರ್ಯಾಸ್ತಕ್ಕೆ ಮುಂಚೆ ನೀನು ಹಿಂತಿರುಗುವಷ್ಟು ಭೂಮಿ ನಿನ್ನದು. ಆದರೆ ಸೂರ್ಯಾಸ್ತದ ವೇಳೆಗೆ ಹಿಂದಿರುಗದಿದ್ದರೆ, ನಿನ್ನ ಜೀವವೇ ಹೋಗುತ್ತದೆ.'

ಪಹೋಮ್ ಬೆಳಿಗ್ಗೆ ಓಡಲು ಶುರುಮಾಡಿದ. ಹೊಲಗಳು, ನದಿಗಳು, ಮಣ್ಣು ಎಲ್ಲವೂ ಸುಂದರವಾಗಿ ಕಾಣುತ್ತಿದ್ದವು. 'ಇನ್ನೂ ಸ್ವಲ್ಪ ದೂರ ಓಡಿ ಈ ಬೆಟ್ಟವನ್ನೂ ಸೇರಿಸಿಕೊಳ್ಳೋಣ' ಎಂದುಕೊಂಡ. ಆದರೆ ಸಮಯ ಕಳೆಯುತ್ತಿತ್ತು. ಮಧ್ಯಾಹ್ನದ ನೆತ್ತಿಮೇಲಿನ ಸೂರ್ಯ ಪಶ್ಚಿಮದತ್ತ ವಾಲಿದ. ಇದೀಗ ಪಹೋಮ್ ಬೆವರುತ್ತಾ, ಏದುಸಿರು ಬಿಡುತ್ತಾ ಹಿಂದಿರುಗಲು ಆರಂಭಿಸಿದ. ಸೂರ್ಯ ನಿಧಾನವಾಗಿ ಅಸ್ತಂಗತವಾಗುತ್ತಿದ್ದ. ಪಹೋಮನ ಕಾಲುಗಳು ನಡುಗುತ್ತಿದ್ದವು. ಆದರೂ ಅವನು ತನ್ನ ಶಕ್ತಿಯನ್ನೆಲ್ಲ ಕಟ್ಟಿ ಓಡಿದ. ಕೊನೆಗೆ ಸೂರ್ಯ ಮುಳುಗುವ ಕ್ಷಣದಲ್ಲಿ ಆತ ಗುರಿ ತಲುಪುವುದರಲ್ಲಿದ್ದ. ಬಾಷ್ಕಿರ್ ಮುಖ್ಯಸ್ಥನ ಬಳಿ ತಲುಪಿದ.

ಜನರು ಚೀರಿದರು— 'ಅವನು ಗೆದ್ದ!' ಆದರೆ ಪಹೋಮ್ ನೆಲಕ್ಕೆ ಬಿದ್ದುಬಿಟ್ಟ. ಅವನ ಉಸಿರು ನಿಂತಿತ್ತು. ಆತ ಸತ್ತುಹೋಗಿದ್ದ. ಮುಖ್ಯಸ್ಥರು ನಿಶ್ಚಲವಾಗಿ ಹೇಳಿದರು: 'ಈಗ ಅವನಿಗೆ ಎಷ್ಟು ಭೂಮಿ ಬೇಕು ಗೊತ್ತಾಯ್ತೇ? ಮನುಷ್ಯನಿಗೆ ಬೇಕಾದ್ದು ಆರಡಿ ಭೂಮಿ.'

ಹಣ, ಜಮೀನು, ಒಡವೆ ವಸ್ತ್ರಗಳು ಯಾವುದೇ ವಸ್ತುವಿರಲಿ ಅತಿಯಾದ ಆಸೆ ಒಳ್ಳೆಯದಲ್ಲ. ಹಣ, ಸಂಪತ್ತಿನ ಲೋಭದಲ್ಲಿ ಜನರು ಎಷ್ಟೆಲ್ಲ ಅಪರಾಧಗಳನ್ನು ಮಾಡುತ್ತಾರೆ. ಮದುವೆಯಲ್ಲಿ, ಮದುವೆಯಾದ ಬಳಿಕವೂ ದುಬಾರಿ ಕಾರು ಬೇಕು, ಹಣಬೇಕು ಎಂದು ಪೀಡಿಸಿ ತರಲಿಲ್ಲವಾದಲ್ಲಿ ಅಥವಾ ಪ್ರತಿಭಟಿಸಿದ ಮಹಿಳೆಯನ್ನು ಬೆಂಕಿಯಿಟ್ಟು ಕೊಂದ ಘಟನೆಗಳು ಇವತ್ತಿಗೂ ನಡೆಯುತ್ತಿಲ್ಲವೇ?

ಬುದ್ಧ ಆಸೆಯೇ ದುಃಖಕ್ಕೆ ಮೂಲವೆಂದು ಸಾರಿ ಎಲ್ಲವನ್ನೂ ತೊರೆದು ಹೋದ. ಭಗವದ್ಗೀತೆ, ಕುರ್‌ಅನ್, ಬೈಬಲ್ ಎಲ್ಲಾ ಧರ್ಮಗ್ರಂಥಗಳೂ ಇದನ್ನೇ ಬೋಧಿಸುತ್ತವೆ. ಅತಿಯಾಸೆ ಗತಿಗೆಡಿಸಿತು ಎಂಬ ಗಾದೆಯಂತೆ ಮನುಷ್ಯನ ಆಸೆಗಳಿಗೆ ಕೊನೆಮೊದಲಿಲ್ಲ. ಕೊಳೆತು ಹೋಗುವಷ್ಟು ಮನೆಯಲ್ಲಿ ತುಂಬಿದ್ದರೂ ಮನಸ್ಸಿನಲ್ಲಿ ಮತ್ತೂ ಬೇಕೆನ್ನುವ ದುರಾಸೆ. ಪಹೋಮನಂತೆ ಲೋಕವನ್ನೇ ಗೆದ್ದು ಸತ್ತುಹೋಗುವುದಾದರೆ ಅಂತಹ ಲೋಕ, ಐಶ್ವರ್ಯ ಯಾರಿಗೆ ಬೇಕು?

ಗುಂಡಣ್ಣ

ಪದಬಂಧ 6244

ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1.ನೆರೆಮನೆಯಲ್ಲ! ಇದು ಕಾರಾಗೃಹ! (4)
3.ತೊಡಲು ಖರೀದಿಸಿರುವ ಲುಂಗಿ (3)
5.ಮಲಗುವಾಗ ಸೇವಕ ಕಾಣಿಸಿದನಲ್ಲಾ (3)
7.ಒಮ್ಮೊಂದೊಮ್ಮೆ ನರ ಮಿಡಿದು ಉಂಟಾಗುವ ನೋವು (3)
8.ನಂಬಿಕೆ ದ್ರೋಹವಿದು (5)
11.ತಲೆಗೆ ಸುತ್ತಿಕೊಳ್ಳುವ ಬಟ್ಟೆ (3)
12.ಮಗನಿಗೆ ತಿಳಿದಿರುವ ವೇದ (3)
15.ವಸ್ತುಗಳನ್ನು ಸಂಗ್ರಹಿಸುವ ಸ್ಥಳ (3)
16.ಈತ ಪರೀಕ್ಷೆ ಮಾಡುವವನು (4)

ಮೇಲಿಂದ ಕೆಳಕ್ಕೆ

1.ಸೀರೆಯ ಹೊದಿಯುವ ಭಾಗ (3)
2.ನೆನಪಲ್ಲೇ ಇರುವ ಕಾರಣ (2)
3.ಸಿಕ್ಕು ಇಲ್ಲಿ ಕಾಣುತ್ತಿದೆ (3)
4.ಮುಂದಾಳು ಇಲ್ಲಿದ್ದಾನೆ (4)
6.ಲಿಖಿತ ಮೂಲಕ ಮಾಡಿಕೊಳ್ಳುವ ಅರಿಕೆ (3)
7.ಹರಾಜಿನಲ್ಲಿ ಹೆಚ್ಚಿನ ಬೆಲೆಗೆ ಸವಾಲು ಹಾಕುವುದು (5)
9.ತೋರು ಬೆರಳಿದು (3)
10.ಕೃತಿಮವಾದ ಮಂದಹಾಸ (4)
11.ಕೊಡತಕ್ಕ ಹಣ (3)
13.ಕಡಸು ಅಥವಾ ಮರಿ ಎಂದರೂ ಸರಿಯೇ (3)
14.ಬೇಕೂಫ ಇಣುಕಿದ ಬಾವಿ! (2)

6243ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ತವಕ 5.ನವದಂಪತಿ 7.ಅಂತರಿಕ್ಷ 9.ಯವನಿಕೆ 12.ಮರಕತ 15.ಪರಿಮಿತಿ 17.ಕಾರಣಾಂತರ 18.ರಗಡು

ಮೇಲಿಂದ ಕೆಳಕ್ಕೆ:
1.ವನಸುಮ 2.ತತಿ 3.ಕಡತ 4.ಪರೋಕ್ಷ 6.ಪಲ್ಲವ 7.ಅಂಕೆ 8.ರಿವಾಜು 10.ನಿಖರ 11.ನಗಾರಿ 12.ಮತಿ 13.ಕಪ್ಪರ 14.ಮನೋರಥ 15.ಪಲ್ಲಟ 16.ಮಿಹಿರ 17.ಕಾಡು

ಸುಡೊಕು 6628

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	4				7		8	3
8			1					7
		3		8	4		5	
3		6						
	8			1				5
1		4	3		8		6	
	7			6				
2		8	4		3			1
				2		8	9	

6627 ಸುಡೊಕು

3	6	7	8	2	9	5	4	1
5	9	4	1	6	7	8	2	3
1	2	8	5	4	3	6	9	7
8	4	1	6	3	2	7	5	9
6	3	5	9	7	8	2	1	4
9	7	2	4	5	1	3	8	6
7	5	3	2	9	4	1	6	8
4	8	6	7	1	5	9	3	2
2	1	9	3	8	6	4	7	5

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

05 ಡಿಸೆಂಬರ್ 2025 ಶುಕ್ರವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಕೃಷ್ಣ ಪ್ರತಿಪದ್ ಗಂ. 24-56 ನಕ್ಷತ್ರ: ರೋಹಿಣಿ ಗಂ. 11-46 ಯೋಗ: ಸಿದ್ಧ ಗಂ. 08-08 ನಂತರ ಸಾಧ್ಯ ಗಂ 27-49 ಕರಣ: ಬಾಲವ ಗಂ. 14-49 ವೃಶ್ಚಿಕ ಮಾಸದ 19 ನೇ ದಿನ. ಮಳೆ ನಕ್ಷತ್ರ : ಜ್ಯೇಷ್ಠ 1 ನೇ ಪಾದ. **ರಾಹುಕಾಲ :** ಬೆಳಿಗ್ಗೆ 10-30 - 12-00, **ಸೂರ್ಯೋದಯ :** 06-44 ಸೂರ್ಯಾಸ್ತ : 05-59, ಮುಸ್ಲಿಂ ದಿನಾಂಕ : 13 ಜುಮಾದುಸ್ಸಾನಿ **ಅದೃಷ್ಟ ಸಂಖ್ಯೆ :** 8, 10

ಮೇಷ: ಸ್ನೇಹಿತನಿಂದಾಗಿ ನಡೆದ ಘಟನೆಯು ಮನಸ್ಸಿನಲ್ಲಿ ಮಹತ್ತರ ಬದಲಾವಣೆ ಉಂಟುಮಾಡುತ್ತದೆ. ಸಾಮಾಜಿಕ ಕ್ಷೇತ್ರಕ್ಕೆ ನೀಡಿರುವ ಕೊಡುಗೆಯು ಎಲ್ಲರ ಪ್ರಶಂಸೆಗೆ ಪಾತ್ರವಾಗುತ್ತದೆ.

ವೃಷಭ: ಹೊಸ ಯೋಜನೆಗಳನ್ನು ಆರಂಭಿಸುವ ಮುನ್ನ ದೀರ್ಘಾಲೋಚನೆ ಮಾಡುವುದು ಉತ್ತಮ. ಉದ್ಯೋಗದಲ್ಲಿ ಬದಲಾವಣೆ ಬಯಸಿದರೆ ಸ್ವಲ್ಪ ದಿನಗಳ ಕಾಲ ಕಾಯುವುದು ಅವಶ್ಯ.

ಮಿಥುನ: ದೊಡ್ಡ ಧಾರ್ಮಿಕ ಕಾರ್ಯಕ್ರಮದಲ್ಲಿ ನಿಭಾಯಿಸಿದ ಪಾತ್ರ ಸಂತೃಪ್ತರನ್ನಾಗಿಸುತ್ತದೆ. ಮಗಳ ಮದುವೆಯ ಮಾತುಕತೆಯಲ್ಲಿ ಮಾತನಾಡುವಾಗ ಬುದ್ಧಿವಂತಿಕೆಯಿಂದ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವಿರಿ.

ಕರ್ಕಾಟಕ: ಸಹೋದರನ ವ್ಯಾಪಾರ ವಹಿವಾಟುಗಳ ವಿಚಾರಗಳಿಗೆ ಸಹಕಾರವಾಗುವ ಸಲಹೆಗಳನ್ನು ತಿಳಿಹೇಳಬಹುದು. ತೊಂದರೆಗಳೇ ಬರುವ ಕಾರಣ ಕಚೇರಿಯಲ್ಲಿ ಆಯಾಸಗೊಳ್ಳುವಿರಿ.

ಸಿಂಹ: ತಾರುಣ್ಯದಲ್ಲಿದ್ದಾಗ ಮಾಡಿದ ಬುದ್ಧಿವಂತಿಕೆ ಕೆಲಸವು ವೃದ್ಧಾಪ್ಯದಲ್ಲಿ ಅನುಕೂಲವಾಗಲಿದೆ. ಬಟ್ಟೆಯ ವ್ಯಾಪಾರ ನಡೆಸುವವರು ಉದ್ಯೋಗದಲ್ಲಿ ಬಂಡವಾಳ ಹೂಡುವಂತಹ ಕೆಲಸವನ್ನು ಮಾಡುವುದು ಸಮಂಜಸವಲ್ಲ.

ಕನ್ಯಾ: ಅಧಿಕ ತಿರುಗಾಟಗಳಿಂದ ದೇಹಾಯಾಸ ಇದ್ದರೂ ಆದಾಯಕ್ಕೆ ಕೊರತೆ ಇರುವುದಿಲ್ಲ. ವ್ಯವಹಾರಿಕವಾಗಿ ಇರುವ ಹಳೆಯ ಬಾಕಿ ಮೊತ್ತ ಕೈ ಸೇರಲಿದೆ. ಮನೆಯಲ್ಲಿ ಮಂಗಳ ಕಾರ್ಯಗಳು ನಡೆಯುವ ಸೂಚನೆಗಳು ಕಾಣಿಸಲಿವೆ.

ತುಲಾ: ವ್ಯವಹಾರದಲ್ಲಿ ಹೊರರಾಜ್ಯದ ಮುಖ್ಯ ವ್ಯಕ್ತಿಯೊಬ್ಬರ ಪರಿಚಯ ವ್ಯಾಪಾರ ಅಭಿವೃದ್ಧಿಯ ದಾರಿ ಹಿಡಿಯಲು ಕಾರಣವಾಗುವುದು. ರಾಜಕೀಯ ರಂಗದವರಿಗೆ ವರಿಷ್ಠರೊಂದಿಗಿನ ಮಾತುಕತೆ ಅನುಕೂಲ ಉಂಟುಮಾಡಲಿದೆ.

ವೃಶ್ಚಿಕ: ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ಉದಾಸೀನತೆ ತೋರಿಬಂದರೂ ಬುದ್ಧಿಬಲದಿಂದ ಮತ್ತು ಶ್ರದ್ಧೆಯಿಂದ ಆಲಿಸುವುದರಿಂದ ಫಲಿತಾಂಶಕ್ಕೆ ಚ್ಯುತಿ ಬರುವುದಿಲ್ಲ. ಕೌಟುಂಬಿಕ ವೈಮನಸ್ಸನ್ನು ಜಾಣ್ಮೆಯಿಂದ ಬಗೆಹರಿಸಿಕೊಳ್ಳಿ.

ಧನು: ಮೇಲಿರುವ ಜವಾಬ್ದಾರಿಗಳನ್ನು ಇತರರ ಮೇಲೆ ದಾಟಿಸುವಂಥ ಪ್ರಯತ್ನಗಳನ್ನು ಮಾಡಲು ಹೋಗದಿರಿ. ಸಿಹಿ ಖಾದ್ಯಗಳನ್ನು ಸೇವಿಸುವ ಯೋಗ ಇದೆ. ದಾಂಪತ್ಯ ಜೀವನ ಸುಖಮಯವಾಗಿರುವುದು.

ಮಕರ: ಎಲೆಕ್ಟ್ರಾನಿಕ್ ಉಪಕರಣಗಳ ಮೇಲೆ ಬಂಡವಾಳ ತೊಡಗಿಸುವುದು ಸರಿಯಲ್ಲ. ಅನವಶ್ಯಕ ಖರ್ಚುಗಳಿಗೆ ಕಡಿವಾಣ ಹಾಕುವುದನ್ನು ಅಭ್ಯಾಸ ಮಾಡಿಕೊಳ್ಳಿರಿ. ಪದವೀಧರರಿಗೆ ಸನ್ಮಾನದಂತಹ ಗೌರವ ದೊರಕಲಿದೆ.

ಕುಂಭ: ಹಿಂದೊಂದು ದಿನ ಬದುಕಿನಲ್ಲಿ ನಡೆದ ಅತ್ಯಂತ ಮುಖ್ಯಘಟ್ಟವನ್ನು ಕಾರಣಾಂತರದಿಂದ ಸ್ಮರಣೆ ಮಾಡುವಿರಿ. ಮಾನಸಿಕ ನೋವನ್ನು ಮರೆಯಲು ಪ್ರೀತಿಪಾತ್ರರೊಂದಿಗೆ ಮಾತನಾಡಿ. ವ್ಯವಹಾರವು ಲಾಭದ ಪಥದಲ್ಲಿರುವುದು.

ಮೀನ: ಆರೋಪದ ಮಾತುಗಳು ಒಬ್ಬರ ಮೇಲೆ ಯಾವ ರೀತಿಯ ಪರಿಣಾಮಗಳನ್ನು ಬೀರಬಹುದು ಎಂಬುದಕ್ಕೆ ಸಂಬಂಧಿಗಳ ಜೀವನ ಸಾಕ್ಷಿಯಾಗಲಿದೆ. ಕಷ್ಟವಾದ ಕೆಲಸಗಳನ್ನು ಸರಳೀಕರಿಸಿಕೊಳ್ಳುವ ಸರ್ವಪ್ರಯತ್ನ ನಡೆಸುವಿರಿ.

ಷೇರುಪೇಟೆ ವಹಿವಾಟು



ಎನ್ಎಸ್ಇ ನಿಫ್ಟಿ
ಹಿಂದಿನ ಅಂತ್ಯ: 25,986
ಇಂದಿನ ಅಂತ್ಯ: 26,033
ದಿನದ ಕನಿಷ್ಠ: 25,938
47

ಮೊಟ್ಟೆ ಧಾರಣೆ (ಎನ್ಇಸಿಸಿ)
ಬೆಂಗಳೂರು
100 ಕ್ಕೆ ₹675
12 ಕ್ಕೆ ₹96
ಮೈಸೂರು: 100 ಕ್ಕೆ ₹675

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹485-745
ದ್ವಿತಳಿ (ಬಿ.ವಿ) ₹561-912

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್ಎಸ್ಎಸ್-4 ₹180.50
ಆರ್ಎಸ್ಎಸ್-5 ₹175.50
ಗುಡ್ ಲಾಟ್ ₹163

ಮುದ್ರೆ-ಮನೆ ಕಾಫಿ (50 ಕೆಜಿಗೆ)
ಎಪಿ ₹28,600
ಎಸಿ ₹15,540
ಆರ್‌ಪಿ ₹18,900
ಆರ್‌ಸಿ ₹10,475

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)
ಶೇಂಗಾ (ರಿಫೈನ್ಡ್) ₹1490 (1530)
ಸೋಯಾ (ರಿಫೈನ್ಡ್) ₹1280 (1290)
ಸೂರ್ಯಕಾಂತಿ (ರಿಫೈನ್ಡ್) ₹1480 (1490)
ಪಾಮೋಲಿನ್ ₹1245 (1260)

ಮುಂಬೈ ಧಾರಣೆ (ಶೇಂಗಾ)	04-12-2025
ಜಾವಾ 70/80(ಹೊಸ)	10500-10600
ಜಾವಾ 80/90(ಹೊಸ)	9800-9900
ದಪ್ಪ ಮಧ್ಯಪ್ರದೇಶ (ಹೊಸ)	7500-7600
ದಪ್ಪ ಗುಜರಾತ್ (ಹೊಸ)	8800-8900
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1500 (1540)
ಒಂದು ವಾರದ ಡೆಲಿವರಿ	1495 (1535)
ಪಾಮ್ ವಾರದ ಡೆಲಿವರಿ	1243 (1258)
ಸೂರ್ಯಕಾಂತಿ ಎಣ್ಣೆ ಕಚ್ಚಾ	1425 (1430)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,27,300 (1,28,200)
ಬೆಳ್ಳಿ ಕೆ.ಜಿಗೆ	1,76,600 (1,80,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)
ತಿಪಟೂರು ₹27200-28600
ತುರುವೇಕೆರೆ ₹26600-28400

ಚಿನ್ನ: ಇನ್ನೂ ಶೇ 30ರಷ್ಟು ಏರಿಕೆ ಸಾಧ್ಯತೆ

ಆರ್ಥಿಕ ಬೆಳವಣಿಗೆ ಆಧರಿಸಿ ಚಿನ್ನದ ಬೆಲೆ ಬಗ್ಗೆ ಅಂದಾಜು ನೀಡಿದ ಡಬ್ಲ್ಯುಜಿಸಿ

● ವಿಜಯ್ ಜೋಷಿ

ಬೆಂಗಳೂರು: 2026ರ ಕ್ಯಾಲೆಂಡರ್ ವರ್ಷದಲ್ಲಿ ಚಿನ್ನದ ಬೆಲೆಯು ಈಗಿನ ಮಟ್ಟದಿಂದ ಶೇಕಡ 30ರವರೆಗೆ ಹೆಚ್ಚಳ ಕಾಣುವ ಸಾಧ್ಯತೆ ಇದೆ ಎಂದು ವಿಶ್ವ ಚಿನ್ನ ಸಮಿತಿಯು (ಡಬ್ಲ್ಯುಜಿಸಿ) ಅಂದಾಜು ಮಾಡಿದೆ.

ಜಾಗತಿಕ ಅರ್ಥ ವ್ಯವಸ್ಥೆಯಲ್ಲಿ 2026ರಲ್ಲಿ ಏನಾಗಬಹುದು, ಅದರ ಪರಿಣಾಮವಾಗಿ ಚಿನ್ನ ಬೆಲೆಯು ಯಾವ ಮಟ್ಟವನ್ನು ತಲುಪಬಹುದು ಎಂಬುದನ್ನು ಡಬ್ಲ್ಯುಜಿಸಿ ತನ್ನ 2026ನೇ ಸಾಲಿನ 'ಚಿನ್ನದ ಮುನ್ನೋಟ' ವರದಿಯಲ್ಲಿ ಅಂದಾಜಿಸಿದೆ.

ಜಾಗತಿಕ ಅರ್ಥ ವ್ಯವಸ್ಥೆಯ ಬೆಳವಣಿಗೆಯು ಮಂದಗತಿಗೆ ತಿರುಗುವ ಸಾಧ್ಯತೆ ಇದ್ದೇ ಇದೆ. ಜಾಗತಿಕ ಮಟ್ಟದ ರಾಜಕೀಯ ಹಾಗೂ ಆರ್ಥಿಕ ಅಪಾಯಗಳು ಇದಕ್ಕೆ ಕಾರಣವಾಗಬಹುದು. ವ್ಯಾಪಾರಕ್ಕೆ ಸಂಬಂಧಿಸಿದ ಬಿಕ್ಕಟ್ಟು, ಇತ್ಯರ್ಥ ಕಾಣದ ಪ್ರಾದೇಶಿಕ ಬಿಕ್ಕಟ್ಟುಗಳು ಅಥವಾ ಹೊಸ ಸಮಸ್ಯೆಯು ವಿಶ್ವಾಸವನ್ನು ಕುಗ್ಗಿಸಬಹುದು. ಹೀಗೆ ಆದಾಗ ಉದ್ದಿಮೆಗಳು ಹೂಡಿಕೆಯನ್ನು ಕಡಿಮೆ ಮಾಡುತ್ತವೆ, ಕುಟುಂಬಗಳ ಮಟ್ಟದಲ್ಲಿ ಖರ್ಚನ್ನು ಕಡಿಮೆ ಮಾಡಲಾಗುತ್ತದೆ ಎಂದು ಡಬ್ಲ್ಯುಜಿಸಿ ತನ್ನ ವರದಿಯಲ್ಲಿ ವಿವರಣೆ ನೀಡಿದೆ.

> ಚಿನ್ನವು ದೀರ್ಘಾವಧಿಯಲ್ಲಿ ಬಹಳ ಸ್ಥಿರವಾದ, ಅರ್ಥಪೂರ್ಣವಾದ ಆಸ್ತಿಯಾಗಿ ಇರುತ್ತದೆ. ಅಲ್ಪಾವಧಿಯ ಬೆಲೆ ಏರಿಳಿತದ ಆಚೆಗೆ ಗಮನ ನೀಡಿ ಜನರು ಚಿನ್ನದ ಮೌಲ್ಯವನ್ನು ಅರ್ಥ ಮಾಡಿಕೊಳ್ಳಬೇಕು
> **ರಮೇಶ್ ಕಲ್ಯಾಣರಾಮನ್**
> ಕಲ್ಯಾಣ್ ಜುವೆಲರ್ಸ್‌ನ ನಿರ್ದೇಶಕ

ಈ ಬಗೆಯ ಸಂದರ್ಭ ಸೃಷ್ಟಿಯಾದಾಗ, ಅಮೆರಿಕದಲ್ಲಿ ಹಣದುಬ್ಬರವು ಗುರಿಗಿಂತ ಕಡಿಮೆ ಮಟ್ಟಕ್ಕೆ ಬಂದು ಅಲ್ಲಿನ ಫೆಡರಲ್ ರಿಸರ್ವ್ ಬಡ್ಡಿ ದರವನ್ನು ತೀವ್ರವಾಗಿ ಇಳಿಕೆ ಮಾಡಬಹುದು. ಇವೆಲ್ಲ ಸಂಗತಿಗಳ ಒಟ್ಟು ಫಲಿತಾಂಶವಾಗಿ, ಚಿನ್ನದ ಬೆಲೆ ತೀವ್ರವಾಗಿ ಹೆಚ್ಚಲು ಪೂರಕ ವಾತಾವರಣ ನಿರ್ಮಾಣವಾಗುತ್ತದೆ. ಆಗ ಚಿನ್ನದ ಬೆಲೆಯು ಈಗಿನ ಮಟ್ಟದಿಂದ ಶೇ 15ರಿಂದ ಶೇ 30ರವರೆಗೆ ಏರಿಕೆ ಕಾಣಬಹುದು ಎಂದು ಅದು ವಿವರ ನೀಡಿದೆ.

ಕುಸಿಯುವ ಸಾಧ್ಯತೆ: ಚಿನ್ನದ ಬೆಲೆಯು ಗರಿಷ್ಠ ಶೇ 20ರವರೆಗೆ ಕುಸಿಯುವ ಸಾಧ್ಯತೆಯ ಬಗ್ಗೆಯೂ ಡಬ್ಲ್ಯುಜಿಸಿ ತನ್ನ ವರದಿಯಲ್ಲಿ ವಿವರ ನೀಡಿದೆ.

ಅಮೆರಿಕದಲ್ಲಿ ಡೊನಾಲ್ಡ್ ಟ್ರಂಪ್ ನೇತೃತ್ವದ ಆಡಳಿತದ ನೀತಿಗಳು ಯಶಸ್ಸು ಕಾಣಬಹುದು. ಹೀಗಾದಾಗ ಅಲ್ಲಿ ನಿರೀಕ್ಷೆಗಿಂತ ಹೆಚ್ಚಿನ ಪ್ರಮಾಣದ ಆರ್ಥಿಕ ಬೆಳವಣಿಗೆ ಸಾಧ್ಯವಾಗುತ್ತದೆ. ಜಾಗತಿಕ ಆರ್ಥಿಕ ಬೆಳವಣಿಗೆಯು ಹೆಚ್ಚು ಸ್ಥಿರವಾದ ಹಾದಿಗೆ ಮರಳಬಹುದು. ಹಣದುಬ್ಬರದ ಒತ್ತಡ ಹೆಚ್ಚಾದಾಗ ಫೆಡರಲ್ ರಿಸರ್ವ್ ಬಡ್ಡಿ ದರವನ್ನು ಹೆಚ್ಚಿಸಲೂಬಹುದು. ಇದರಿಂದಾಗಿ ಡಾಲರ್ ಬಲಗೊಳ್ಳಬಹುದು.

ಡಾಲರ್ ಬಲವರ್ಧನೆ, ಹೂಡಿಕೆದಾರರು ಹೆಚ್ಚು ರಿಸ್ಕ್ ತೆಗೆದುಕೊಳ್ಳಲು ಸಿದ್ಧವಾಗುವುದು ಚಿನ್ನದ ಬೆಲೆ ಮೇಲೆ ಪರಿಣಾಮ ಬೀರುತ್ತವೆ. ರಿಟೇಲ್ ಬೇಡಿಕೆ ಕಡಿಮೆಯಾಗುವುದು ಸೇರಿದಂತೆ ಬೇರೆ ಬೇರೆ ಕಾರಣಗಳಿಂದಾಗಿ ಚಿನ್ನದ ಬೆಲೆಯು ಶೇ 5ರಿಂದ ಶೇ 20ರವರೆಗೆ ಇಳಿಕೆ ಕಾಣುವ ಸಾಧ್ಯತೆಯೂ ಇದೆ ಎಂದು ವರದಿಯು ಹೇಳಿದೆ.

ಸುದ್ದಿ 2 ನಿಮಿಷ

ನಾಲ್ಕು ದಿನಗಳಲ್ಲಿ ₹13 ಸಾವಿರ ಕೋಟಿ ಹಿಂತೆಗೆತ

ನವದೆಹಲಿ (ಪಿಟಿಐ): ವಿದೇಶಿ ಹೂಡಿಕೆದಾರರು ದೇಶದ ಬಂಡವಾಳ ಮಾರುಕಟ್ಟೆಗಳಿಂದ ಒಟ್ಟು ₹13,121 ಕೋಟಿ ಬಂಡವಾಳವನ್ನು ನಾಲ್ಕು ದಿನಗಳಲ್ಲಿ (ಡಿಸೆಂಬರ್ 1ರಿಂದ 4ರವರೆಗೆ) ಹಿಂಪಡೆದಿದ್ದಾರೆ.

ಇದರಿಂದಾಗಿ, 2025ರಲ್ಲಿ ವಿದೇಶಿ ಹೂಡಿಕೆದಾರರು ಹಿಂಪಡೆದ ಒಟ್ಟು ಮೊತ್ತವು ₹1.56 ಲಕ್ಷ ಕೋಟಿಗೆ ಏರಿಕೆ ಕಂಡಂತೆ ಆಗಿದೆ ಎಂದು ಎನ್ಎಸ್‌ಡಿಎಲ್‌ನಲ್ಲಿ ಲಭ್ಯವಿರುವ ಅಂಕಿ–ಅಂಶಗಳು ಹೇಳುತ್ತಿವೆ.

ನವೆಂಬರ್ ತಿಂಗಳಲ್ಲಿ ವಿದೇಶಿ ಹೂಡಿಕೆದಾರರು ಒಟ್ಟು ₹3,765 ಕೋಟಿಯನ್ನು ಹಿಂಪಡೆದಿದ್ದರು. ಆದರೆ ಅಕ್ಟೋಬರ್‌ನಲ್ಲಿ ಅವರು ₹14,610 ಕೋಟಿಯಷ್ಟು ಬಂಡವಾಳವನ್ನು ಹೂಡಿಕೆ ಮಾಡಿದ್ದರು.

ಜಾಗತಿಕ ಹೂಡಿಕೆದಾರರು ತಮ್ಮ ಹೂಡಿಕೆ ಮೊತ್ತವನ್ನು ವರ್ಷದ ಕೊನೆಯಲ್ಲಿ ಮರುಹೊಂದಾಣಿಕೆ ಮಾಡುವ ಕಾರಣದಿಂದಾಗಿ ಈ ತಿಂಗಳಲ್ಲಿ ದೊಡ್ಡ ಮಟ್ಟದಲ್ಲಿ ಬಂಡವಾಳ ಹೊರಹೋಗಿದೆ ಎಂದು ಏಂಜಲ್ ಒನ್ ಬ್ರೋಕರೇಜ್ ಕಂಪನಿಯ ಹಿರಿಯ ವಿಶ್ಲೇಷಕ ವಕಾರ್‌ಜಾವೆದ್ ಖಾನ್ ಹೇಳಿದ್ದಾರೆ.

ರೂಪಾಯಿ ಮೌಲ್ಯ ಕುಸಿಯುತ್ತಿರುವುದು ಕೂಡ ವಿದೇಶಿ ಹೂಡಿಕೆದಾರರನ್ನು ನಿರುತ್ತೇಜಿಸುವಂತೆ ಇದೆ. ಅಮೆರಿಕ ಮತ್ತು ಭಾರತದ ನಡುವಿನ ವ್ಯಾಪಾರ ಒಪ್ಪಂದ ವಿಳಂಬವಾಗುತ್ತಿರುವುದು ಹೂಡಿಕೆದಾರರ ಮೇಲೆ ಪರಿಣಾಮ ಉಂಟುಮಾಡಿದೆ ಎಂದು ಅವರು ಹೇಳಿದ್ದಾರೆ.

ಗುರುವಾರದ ವಹಿವಾಟಿನಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಏರಿಕೆ ದಾಖಲಿಸಿವೆ. ತಂತ್ರಜ್ಞಾನ ಮತ್ತು ಐ.ಟಿ. ವಲಯದ ಷೇರುಗಳ ಖರೀದಿಯು ಸೂಚ್ಯಂಕಗಳ ಏರಿಕೆಗೆ ನೆರವಾಗಿದೆ.

ಜಿಡಿಪಿ ಬೆಳವಣಿಗೆ ಅಂದಾಜು ಪರಿಷ್ಕರಿಸಿದ ಫಿಚ್

ನವದೆಹಲಿ (ಪಿಟಿಐ): ಪ್ರಸಕ್ತ ಹಣಕಾಸು ವರ್ಷದಲ್ಲಿ ದೇಶದ ಅರ್ಥ ವ್ಯವಸ್ಥೆಯ ಬೆಳವಣಿಗೆ ದರವು ಶೇ 7.4ರಷ್ಟು ಆಗಬಹುದು ಎಂದು ಫಿಚ್ ರೇಟಿಂಗ್ಸ್ ಸಂಸ್ಥೆಯು ಅಂದಾಜನ್ನು ಹೆಚ್ಚಿಸಿದೆ.

ಜಿಎಸ್‌ಟಿ ದರ ಪರಿಷ್ಕರಣೆಯ ಪರಿಣಾಮವಾಗಿ ಗ್ರಾಹಕರು ಹೆಚ್ಚು ವೆಚ್ಚ ಮಾಡುತ್ತಿರುವುದು ಮುನ್ನೋಟದ ಪರಿಷ್ಕರಣೆಗೆ ಒಂದು ಕಾರಣ. ಫಿಚ್ ಸಂಸ್ಥೆಯು ಈ ಮೊದಲು ಜಿಡಿಪಿ ಬೆಳವಣಿಗೆ ದರವು ಶೇ 6.9ರಷ್ಟು ಇರಲಿದೆ ಎಂದು ಅಂದಾಜಿಸಿತ್ತು.

ಹಣದುಬ್ಬರ ಕಡಿಮೆ ಆಗುತ್ತಿರುವ ಕಾರಣದಿಂದಾಗಿ ಆರ್‌ಬಿಐಗೆ ರೆಪೊ ದರವನ್ನು ಡಿಸೆಂಬರ್‌ನಲ್ಲಿ ಇನ್ನಷ್ಟು ತಗ್ಗಿಸಲು ಅವಕಾಶ ಇದೆ ಎಂದು ಫಿಚ್ ಹೇಳಿದೆ.

ಎ.ಐ ಲಭ್ಯತೆ ಹೆಚ್ಚಿಸಲು ಅಮೆಜಾನ್ ಹೆಜ್ಜೆ

ಬೆಂಗಳೂರು: 2030ರ ವೇಳೆಗೆ ದೇಶದ ಕೋಟ್ಯಂತರ ಜನರ ಬಳಕೆಗೆ ಎ.ಐ ಪರಿಕರಗಳು ಲಭ್ಯವಾಗುವಂತೆ ಮಾಡುವ ಯೋಜನೆ ಹೊಂದಿರುವುದಾಗಿ ಅಮೆಜಾನ್ ಹೇಳಿದೆ.

ಡಿಜಿಟಲ್ ಒಳಗೊಳ್ಳುವಿಕೆಗೆ ನೆರವಾಗಲು ಕೇಂದ್ರ ಸರ್ಕಾರದ ಎ.ಐ. ಮಿಷನ್‌ಗೆ ಬೆಂಬಲವಾಗಿ ನಿಲ್ಲುವುದಾಗಿ ಅದು ತಿಳಿಸಿದೆ.

2030ರ ವೇಳೆಗೆ ಸರ್ಕಾರಿ ಶಾಲೆಗಳ ಒಟ್ಟು 40 ಲಕ್ಷ ವಿದ್ಯಾರ್ಥಿಗಳಿಗೆ ಎ.ಐ ಸಾಕ್ಷರತೆ ನೀಡಲು, ಅವರಲ್ಲಿ ವೃತ್ತಿಯ ಬಗ್ಗೆ ಹೆಚ್ಚಿನ ಅರಿವು ಮೂಡಿಸಲು ಯತ್ನಿಸುವುದಾಗಿ ಕಂಪನಿಯ ಪ್ರಕಟಣೆ ಹೇಳಿದೆ.

ಒಟ್ಟು 1.5 ಕೋಟಿಗೂ ಹೆಚ್ಚಿನ ಸಂಖ್ಯೆಯ ಸಣ್ಣ ಉದ್ದಿಮೆಗಳಿಗೆ ಎ.ಐ ಪ್ರಯೋಜನಗಳನ್ನು ದೊರಕಿಸಿ ಕೊಡಲಾಗುತ್ತದೆ ಎಂದು ಕಂಪನಿ ಹೇಳಿದೆ.

₹13.50 ಲಕ್ಷ ಕೋಟಿ ಆಕರ್ಷಣೆಗೆ ರೂಪುರೇಷೆ

ಮುನ್ನೋಟ ದಾಖಲೆ ಸಿದ್ಧಪಡಿಸಲು ಪಾಟೀಲ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೊಬೈಲ್ ಮತ್ತು ಎಲೆಕ್ಟ್ರಾನಿಕ್ಸ್ ಉತ್ಪನ್ನಗಳ ವಿನ್ಯಾಸ ಹಾಗೂ ತಯಾರಿಕಾ ಕ್ಷೇತ್ರಕ್ಕೆ 15,000 ಕೋಟಿ ಡಾಲರ್ (ಸುಮಾರು ₹13.50 ಲಕ್ಷ ಕೋಟಿ) ಬಂಡವಾಳ ಆಕರ್ಷಿಸುವ ಉದ್ದೇಶದಿಂದ ಮುನ್ನೋಟ ದಾಖಲೆ (ವಿಷನ್ ಡಾಕ್ಯುಮೆಂಟ್) ಸಿದ್ಧಪಡಿಸಿ' ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರು ಕೈಗಾರಿಕಾ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಇಂಡಿಯನ್ ಸೆಲ್ಯುಲಾರ್ ಆ್ಯಂಡ್ ಎಲೆಕ್ಟ್ರಾನಿಕ್ಸ್ ಅಸೋಸಿಯೇಷನ್ (ಐಸಿಇಎ) ಅಧ್ಯಕ್ಷ ಪಂಕ್ ಮಹೀಂದ್ರೂ ನೇತೃತ್ವದ ಉದ್ಯಮಿಗಳ ನಿಯೋಗವು ಸಚಿವ ಎಂ.ಬಿ.ಪಾಟೀಲ ಅವರನ್ನು ಗುರುವಾರ ಭೇಟಿಯಾಗಿತ್ತು. ಮೊಬೈಲ್ ಮತ್ತು ಎಲೆಕ್ಟ್ರಾನಿಕ್ಸ್ ಉತ್ಪನ್ನಗಳ ತಯಾರಿಕೆಗೆ ಇರುವ ಅವಕಾಶ, ಅಗತ್ಯವಿರುವ ಸವಲತ್ತುಗಳ ಬಗ್ಗೆ ನಿಯೋಗವು ಸಚಿವರಿಗೆ ವಿವರಣೆ ನೀಡಿತ್ತು.

ಪಂಕಜ್ ಮಹೀಂದ್ರೂ, 'ಮೊಬೈಲ್ ಫೋನ್ ಡಿಸ್‌ಪ್ಲೇ, ಕ್ಯಾಮೆರಾ ಮಾಡ್ಯೂಲ್ ನಂತಹ ಬಿಡಿಭಾಗಗಳ ತಯಾರಿಕೆಗೆ ಒತ್ತು ನೀಡಿರುವ ಕೇಂದ್ರ ಸರ್ಕಾರ, ಅದಕ್ಕಾಗಿ ನೀತಿ ರೂಪಿಸಿದೆ. ಅದರ ಅಡಿಯಲ್ಲಿ ವಹಿವಾಟು ಆಧಾರಿತ ಪ್ರೋತ್ಸಾಹಧನ, ಶೇ 25ರವರೆಗೆ ಹೂಡಿಕೆ ಸಹಾಯಧನ ನೀಡುತ್ತಿದೆ. ಇದಕ್ಕಾಗಿ ₹22,900 ಕೋಟಿ ತೆಗೆದಿರಿಸಿದೆ. ಈಗಾಗಲೇ ₹7,172 ಕೋಟಿ ಮೊತ್ತದ17 ಹೂಡಿಕೆ ಪ್ರಸ್ತಾವಗಳಿಗೆ ಅನುಮೋದನೆ ನೀಡಿದೆ' ಎಂದು ತಿಳಿಸಿದರು.

ಎಂ.ಬಿ.ಪಾಟೀಲ ಅವರು, 'ಕೇಂದ್ರ ಸರ್ಕಾರವು ಇದೇ ಏಪ್ರಿಲ್‌ನಲ್ಲಿ ಎಲೆಕ್ಟ್ರಾನಿಕ್ಸ್ ಬಿಡಿಭಾಗಗಳ ತಯಾರಿಕಾ ನೀತಿಯನ್ನು ಘೋಷಿಸಿದೆ. ಅದಕ್ಕೆ ಸಮಾನಾಂತರವಾಗಿ ಕರ್ನಾಟಕ ಸರ್ಕಾರವೂ ಒಂದು ನೀತಿ ರೂಪಿಸಲು ಚಿಂತನೆ ನಡೆಸಿದೆ. ಈ ಬಗ್ಗೆ ಕಾರ್ಯಸಾಧ್ಯತಾ ಅಧ್ಯಯನ ನಡೆಸಲಾಗುತ್ತಿದೆ. ಐಸಿಇಎ ನೀಡುವ ಸಲಹೆಗಳನ್ನು ಆ ನೀತಿಯಲ್ಲಿ ಸೇರಿಸುವ ಬಗ್ಗೆ ಪರಿಶೀಲಿಸಲಾಗುತ್ತದೆ' ಎಂದು ನಿಯೋಗಕ್ಕೆ ತಿಳಿಸಿದರು.

ನಂತರ ಇಲಾಖೆಯ ಅಧಿಕಾರಿಗಳ ಜತೆ ಸಮಾಲೋಚನೆ ನಡೆಸಿದ ಅವರು, ಮುನ್ನೋಟ ದಾಖಲೆ ಸಿದ್ಧಪಡಿಸಿ ಎಂದು ಸೂಚಿಸಿದರು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಸವಿನೆನಪು

ಡಾ|| ಉತ್ತಮ್. ಎಂ. ಎಸ್
08-01-1998 – 05-12-2024
ದೃಷ್ಟಿಯಿಂದ ದೂರವಾದರೂ, ನಿನ್ನ ನೆನಪುಗಳು ನಮ್ಮ ಹೃದಯದಲ್ಲೇ ಶಾಶ್ವತವಾಗಿ ಉಳಿದುಕೊಳ್ಳುತ್ತವೆ.
ಇಂತಿ ದುಃಖತಪ್ತ: ಅಪ್ಪ-ಅಮ್ಮ, ಸಹೋದರರು, ದಿ|| ಮಾಯಪ್ಪನವರ ಕುಟುಂಬದವರು ಹಾಗೂ ಬಂಧು ಮಿತ್ರರು, ಕಟ್ಟೆಹೊಳೆ

18ನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಕೆ.ವಿ.ದೇವಮ್ಮ ಸಗನೇಗೌಡರು
ನಿಧನ : 05-12-2007
ನೀವು ನಮ್ಮನ್ನಗಲಿ ಹದಿನೆಂಟು ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಾಳದಲ್ಲಿದೆ. ನಿಮ್ಮ ದಿವ್ಯಾತ್ಮವು ಭಗವಂತನ ಪದತಳದಲ್ಲಿ ಚಿರಶಾಂತಿ ಪಡೆಯಲೆಂದು ಪ್ರಾರ್ಥಿಸುವ,
ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಮತ್ತು ಎಲ್ಲಾ ಕುಟುಂಬ ವರ್ಗದವರು, ಬೇಲೂರು–573115
ಫೋನ್: 6362934108, 9845689500 9844436598, 9964480611

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀ. ಎಚ್. ಪಿ. ಶಾಂತವೀರಪ್ಪ (83 ವರ್ಷ)
ನಿವೃತ್ತ ಉಪನಿರ್ದೇಶಕರು (DDPI),
ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ.
ನಿವೃತ್ತ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಮಂಡಳಿ (PU Board).
ನಿವೃತ್ತ ಜಂಟಿ ನಿರ್ದೇಶಕರು, ವೃತ್ತಿ ಶಿಕ್ಷಣ ಇಲಾಖೆ (Vocational Education).
ಜನನ: 17.10.1942 ಮರಣ: 04.12.2025
ದಿನಾಂಕ 04–12–2025 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಇವರ ಅಂತಿಮ ಸಂಸ್ಕಾರವನ್ನು ವೀರಶೈವ ರುದ್ರ ಭೂಮಿ, ಕಣ್ಣಲ್ಲಿ ಮಾಗಡಿ ರಸ್ತೆ ದಿ. 05.12.2025 ರಂದು ಮಧ್ಯಾಹ್ನ 12.00 ನೆರವೇರಿಸಲಾಗುವುದು.
: ದುಃಖತಪ್ತರು :
ಧರ್ಮಪತ್ನಿ: ಶ್ರೀಮತಿ ಕೋಮಲ ಜಿ. ಎಸ್.
ಪುತ್ರರು: ಮೋಹನ್ ಕುಮಾರ್ ಎಚ್. ಎಸ್. ಮತ್ತು ಹೇಮಲತ ಬಿ ಜಿ, ಅರವಿಂದ ಎಚ್. ಎಸ್. ಮತ್ತು ವಿನುತ ಕೆ ಎಸ್, ಅವಿನಾಶ್ ಎಚ್. ಎಸ್. ಮತ್ತು ಶೃತಿ ಶೆಟ್ಟಿ
ಹಾಗೂ ತುರನೂರು ಕುಟುಂಬ ವರ್ಗ.
ನಿವಾಸ: ಎಚ್‌ಎಸ್‌ಆರ್ ಲೇಔಟ್, 4ನೇ ಸೆಕ್ಟರ್, ಬೆಂಗಳೂರು.

'ಮೋದಿ ಸರ್ಕಾರಕ್ಕೆ ಅಭದ್ರತೆ ಕಾಡುತ್ತಿದೆ'

ಪುಟಿನ್ ಜೊತೆ ಸಭೆ ಏರ್ಪಡಿಸದ ಕೇಂದ್ರದ ನಡೆಗೆ ರಾಹುಲ್ ಆಕ್ಷೇಪ

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತಕ್ಕೆ ಭೇಟಿ ನೀಡಿರುವ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಜೊತೆ ತಮ್ಮ ಸಭೆ ಆಯೋಜಿಸಲು ಕ್ರಮ ಕೈಗೊಳ್ಳದ ಕೇಂದ್ರ ಸರ್ಕಾರದ ವಿರುದ್ಧ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಗುರುವಾರ ಕಿಡಿ ಕಾರಿದ್ದಾರೆ.

'ಇಂಥ ನಡೆಯು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರಕ್ಕಿರುವ ಅಭದ್ರತೆಯನ್ನು ತೋರಿಸುತ್ತದೆ' ಎಂದೂ ಅವರು ಚಾಟಿ ಬೀಸಿದ್ದಾರೆ.

ಪುಟಿನ್ ಅವರು ಎರಡು ದಿನಗಳ ಭಾರತ ಪ್ರವಾಸ ಕೈಗೊಂಡಿದ್ದು, ಗುರುವಾರ ಇಲ್ಲಿಗೆ ಬಂದಿಳಿದಿದ್ದಾರೆ.

'ಭಾರತಕ್ಕೆ ಭೇಟಿ ನೀಡುವ ವಿದೇಶಿ ಗಣ್ಯರ ಜೊತೆ ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕ ಸಭೆ ನಡೆಸುವುದು ಬಹು ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಸಂಪ್ರದಾಯ. ಪ್ರಧಾನಿ ಮೋದಿ ಹಾಗೂ ವಿದೇಶಾಂಗ ಸಚಿವಾಲಯ ಈ ಸಂಪ್ರದಾಯವನ್ನು ಪಾಲನೆ ಮಾಡುತ್ತಿಲ್ಲ' ಎಂದು ರಾಹುಲ್ ಗಾಂಧಿ ಹೇಳಿದ್ದಾರೆ.

'ಇತರ ದೇಶಗಳ ನಾಯಕರು ಭಾರತಕ್ಕೆ ಬಂದಾಗ ಇಲ್ಲಿನ ಲೋಕಸಭೆ ವಿಪಕ್ಷ ನಾಯಕನೊಂದಿಗೆ ಸಭೆ ನಡೆಸುವ ಸಂಪ್ರದಾಯ ವನ್ನು ಈ ಹಿಂದಿನ ಪ್ರಧಾನಿಗಳಾದ ಅಟಲ್ ಬಿಹಾರಿ ವಾಜಪೇಯಿ, ಮನಮೋಹನ್ ಸಿಂಗ್ ಅವರ ಅವಧಿಯಲ್ಲಿ ಪಾಲಿಸಲಾಗುತ್ತಿತ್ತು' ಎಂದೂ ಹೇಳಿದರು.

> ಪ್ರತಿ ಪ್ರಜಾಪ್ರಭುತ್ವ ವ್ಯವಸ್ಥೆಯೂ ಶಿಷ್ಟಾಚಾರಗಳನ್ನು ಹೊಂದಿರುತ್ತದೆ. ಆದರೆ, ಶಿಷ್ಟಾಚಾರ ಉಲ್ಲಂಘನೆ ಮಾಡುವುದೇ ಈ ಸರ್ಕಾರದ ನೀತಿಯಾಗಿದೆ. ಭಿನ್ನ ದನಿಗೆ ಈ ಸರ್ಕಾರ ಅವಕಾಶ ನೀಡುವುದಿಲ್ಲ
> **ಪ್ರಿಯಾಂಕಾ ಗಾಂಧಿ ವಾದ್ರಾ,** ಕಾಂಗ್ರೆಸ್ ಸಂಸದೆ

ಸಂಸತ್ ಭವನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ವಿದೇಶಿ ಗಣ್ಯರು ಭಾರತಕ್ಕೆ ನೀಡಿದ ಸಂದರ್ಭದಲ್ಲಿ ಅಥವಾ ನಾನು ವಿದೇಶ ಪ್ರವಾಸ ಕೈಗೊಂಡ ಸಂದರ್ಭದಲ್ಲಿ ನನ್ನನ್ನು ಭೇಟಿ ಮಾಡದಂತೆ ಕೇಂದ್ರ ಸರ್ಕಾರ ಇತರ ದೇಶಗಳಿಗೆ ಹೇಳುತ್ತಿದೆ' ಎಂದರು.

'ನಿಮ್ಮನ್ನು ಭೇಟಿ ಮಾಡಬಾರದು ಎಂಬುದಾಗಿ ಭಾರತ ಸರ್ಕಾರ ನಮಗೆ ಹೇಳಿದೆ ಎಂದು ವಿವಿಧ ದೇಶಗಳು ನನಗೆ ಮಾಹಿತಿ ನೀಡಿವೆ. ಇದೇ ಈ ಸರ್ಕಾರದ ನೀತಿಯಾಗಿದ್ದು, ಅದನ್ನು ಚಾಚೂತಪ್ಪದೇ ಪಾಲಿಸಲಾಗುತ್ತಿದೆ' ಎಂದು ಟೀಕಿಸಿದರು.

ಪುಟಿನ್ ಭೇಟಿ ಕುರಿತ ಪ್ರಶ್ನೆಗೆ,'ಸರ್ಕಾರ ಮಾತ್ರವಲ್ಲ, ನಾವು ಕೂಡ ಭಾರತವನ್ನು ಪ್ರತಿನಿಧಿಸುತ್ತೇವೆ. ಆದರೆ, ವಿರೋಧ ಪಕ್ಷಗಳ ನಾಯಕರು ವಿದೇಶಿ ಗಣ್ಯರನ್ನು ಭೇಟಿ ಮಾಡುವುದನ್ನು ಈ ಸರ್ಕಾರ ಬಯಸುವುದಿಲ್ಲ' ಎಂದು ಪ್ರತಿಕ್ರಿಯಿಸಿದರು.

'ಸರ್ಕಾರ ಏಕೆ ಹೀಗೆ ನಡೆದುಕೊಳ್ಳುತ್ತಿದೆ' ಎಂಬ ಮತ್ತೊಂದು ಪ್ರಶ್ನೆಗೆ, 'ಇದು ಅವರಲ್ಲಿನ (ಪ್ರಧಾನಿ ಮೋದಿ) ಅಭದ್ರತೆ ಭಾವನೆಯನ್ನು ತೋರಿಸುತ್ತದೆ' ಎಂದು ಉತ್ತರಿಸಿದರು.

'ರಾಹುಲ್ ಆರೋಪ ಹಸಿ ಸುಳ್ಳು'

ನವದೆಹಲಿ (ಪಿಟಿಐ): 'ವಿದೇಶಿ ಗಣ್ಯರಿಗೆ ತಮ್ಮನ್ನು ಭೇಟಿಯಾಗಲು ಕೇಂದ್ರ ಸರ್ಕಾರ ಅವಕಾಶ ನೀಡುತ್ತಿಲ್ಲ' ಎಂಬ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರ ಆರೋಪವನ್ನು ಬಿಜೆಪಿ ಸಾರಾಸಗಟಾಗಿ ಅಲ್ಲಗಳೆದಿದ್ದು, ಇದು 'ಹಸಿ ಸುಳ್ಳು' ಎಂದು ಹೇಳಿದೆ.

'ರಾಹುಲ್ ಗಾಂಧಿ ಅವರು ಈ ವರ್ಷ ನ್ಯೂಜಿಲೆಂಡ್ ಮತ್ತು ಮಾರಿಷಸ್ ಪ್ರಧಾನಿ ಸೇರಿದಂತೆ ಹಲವು ವಿದೇಶಿ ಅತಿಥಿಗಳನ್ನು ಭೇಟಿಯಾಗಿದ್ದಾರೆ. ಸಾಮಾನ್ಯವಾಗಿ ವಿದೇಶಿ ಗಣ್ಯರು ಭಾರತಕ್ಕೆ ಬಂದಾಗ, ವಿದೇಶಾಂಗ ಸಚಿವಾಲಯವು ಸರ್ಕಾರಿ ಅಧಿಕಾರಿಗಳು ಮತ್ತು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳೊಂದಿಗೆ ಅವರ ಸಭೆಗಳನ್ನು ಆಯೋಜಿಸುತ್ತದೆ. ಸರ್ಕಾರದ ಕಾರ್ಯಕ್ರಮಗಳ ಹೊರತಾಗಿ ಹೊರಗಿನ ಸಂಸ್ಥೆ, ವ್ಯಕ್ತಿಗಳ ಭೇಟಿ–ಸಭೆಯನ್ನು ನಿಗದಿಪಡಿಸುವುದು, ಬಂದಿರುವ ವಿದೇಶಿ ಗಣ್ಯರು ಅಥವಾ ಆ ನಿಯೋಗವನ್ನು ಅವಲಂಬಿಸಿರುತ್ತದೆ' ಎಂದು ಬಿಜೆಪಿಯ ಮುಖ್ಯ ವಕ್ತಾರ ಅನಿಲ್ ಬಲುನಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಬಾಂಗ್ಲಾದೇಶ, ವಿಯಟ್ನಾಂ ಸೇರಿದಂತೆ ಹಲವು ವಿದೇಶಿ ಗಣ್ಯರನ್ನು ರಾಹುಲ್ ಭೇಟಿ ಮಾಡುತ್ತಿರುವ ಚಿತ್ರಗಳನ್ನೂ ಬಲುನಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದು, 'ನೀವು ವಿದೇಶಿ ನೆಲದಲ್ಲಿ ಇದ್ದಾಗಲೆಲ್ಲ, ದೇಶದ ಸಂವಿಧಾನ, ಪ್ರಜಾಪ್ರಭುತ್ವ ಸೇರಿ ಭಾರತದ ವರ್ಚಸ್ಸು ಕಡಿಮೆ ಮಾಡುವ ಕೆಲಸ ಮಾಡುತ್ತೀರಿ' ಎಂದಿದ್ದಾರೆ.

ಜಾಲತಾಣದ 'ಪ್ರೊಫೈಲ್ಸ್' ಮುಕ್ತವಾಗಿಸಿ

ನ್ಯೂಯಾರ್ಕ್/ವಾಷಿಂಗ್ಟನ್ (ಪಿಟಿಐ): ಅಮೆರಿಕ ಸರ್ಕಾರವು ಎಚ್–1ಬಿ ವೀಸಾ ಅರ್ಜಿದಾರರು ಹಾಗೂ ಅವರ ಅವಲಂಬಿತರ ಎಚ್–4 ಅರ್ಜಿಗಳ ಪರಿಶೀಲನಾ ಕ್ರಮವನ್ನು ಮತ್ತಷ್ಟು ವಿಸ್ತರಿಸಿದೆ. ತಮ್ಮ ಸಾಮಾಜಿಕ ಜಾಲತಾಣಗಳ 'ಗೋಪ್ಯತಾ ಸೆಟ್ಟಿಂಗ್' ಗಳನ್ನು ಸಾರ್ವಜನಿಕವಾಗಿ ಮುಕ್ತಗೊಳಿಸಬೇಕು ಎಂದು ಸೂಚನೆ ನೀಡಿದೆ.

ಬುಧವಾರವೇ ಈ ಕುರಿತಾಗಿ ಅಮೆರಿಕ ಗೃಹ ಸಚಿವಾಲಯವು ಹೊಸ ಆದೇಶವನ್ನು ಹೊರಡಿಸಿದ್ದು, ಡಿಸೆಂಬರ್ 15ರಿಂದಲೇ ಈ ಪ್ರಕ್ರಿಯೆ ಆರಂಭಗೊಳ್ಳಲಿದೆ. ಎಲ್ಲಾ ಎಚ್–1ಬಿ ಅರ್ಜಿದಾರರು ಹಾಗೂ ಅವಲಂಬಿತರ ಆನ್‌ಲೈನ್ ಮಾಹಿತಿ ಕುರಿತಂತೆ ಪರಿಶೀಲನೆ ನಡೆಸಲಾಗುವುದು ಎಂದು ತಿಳಿಸಿದೆ.

ವಿದ್ಯಾರ್ಥಿಗಳು, ಸಂಶೋಧಕರಿಗೆ ಈಗಾಗಲೇ ಪರಿಶೀಲನೆಯನ್ನು ಕಡ್ಡಾಯಗೊಳಿಸಲಾಗಿದೆ. ಈ ಪದ್ಧತಿಯನ್ನು ಎಚ್–1ಬಿ ವೀಸಾ, ಎಚ್–4 ವೀಸಾ ಅರ್ಜಿದಾರರಿಗೂ ವಿಸ್ತರಿಸಲಾಗಿದೆ.

ಟ್ರಂಪ್ ಸರ್ಕಾರವು ವಲಸೆ ನಿಯಮಗಳನ್ನು ಕಠಿಣಗೊಳಿಸಿದ ಬಳಿಕ ಈ ಕಠಿಣ ನಿರ್ಧಾರಗಳನ್ನು ಕೈಗೊಳ್ಳಲಾಗಿದೆ.

ಭಾರತ,ರಷ್ಯಾ ರಕ್ಷಣಾ ಸಚಿವರಿಂದ ಸಭೆ

ನವದೆಹಲಿ(ಪಿಟಿಐ): ರಕ್ಷಣಾ ಕ್ಷೇತ್ರದಲ್ಲಿ ದ್ವಿಪಕ್ಷೀಯ ಸಹಕಾರವನ್ನು ಮತ್ತಷ್ಟು ವಿಸ್ತರಿಸಲು ಭಾರತ ಹಾಗೂ ರಷ್ಯಾ ಗುರುವಾರ ನಿರ್ಧರಿಸಿವೆ.

ತನ್ನ ಯುದ್ಧ ಸಾಮರ್ಥ್ಯವನ್ನು ಇನ್ನಷ್ಟು ಬಲಪಡಿಸುವುದಕ್ಕಾಗಿ ರಷ್ಯಾದಿಂದ ಹೆಚ್ಚುವರಿಯಾಗಿ ಎಸ್–400 ಕ್ಷಿಪಣಿ ವ್ಯವಸ್ಥೆಗಳನ್ನು ಖರೀದಿಸಲು ಆಸಕ್ತಿ ಹೊಂದಿರುವುದಾಗಿ ಭಾರತ ಹೇಳಿದೆ.

23ನೇ ರಷ್ಯಾ-ಭಾರತ ವಾರ್ಷಿಕ ಶೃಂಗಸಭೆಗೂ ಉಭಯ ದೇಶಗಳ ರಕ್ಷಣಾ ಸಚಿವರಾದ ರಾಜನಾಥ್ ಸಿಂಗ್ ಹಾಗೂ ಆ್ಯಂಡ್ರಿ ಬೆಲಾಸೋವ್ ಅವರ ನಡೆಸಿದ ಸಭೆಯಲ್ಲಿ ಈ ಕುರಿತು ಚರ್ಚೆ ನಡೆಯಿತು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ಕರ್ನಾಟಕದ್ಯಾಂತ ಕಂಪನಿಗಳಿಗೆ ಮನೆಯಿಂದಲೇ ಕೆಲಸಗಳಿಗೆಪುರುಷರಿಗೆ, ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ ಆದ್ಯತೆ. 19,000, 25,000ಸಂಪಾದಿಸಿ. ಕೋರಿಯರ್ ಸೌಲಭ್ಯವಿದೆ. 9019593297, 8095133188

General

ಮೆಟ್ರೋ ಸಿಟಿಯಲ್ಲಿ SSLC_PUC ITI diploma_degree ಆದಂತಹ ಅಭ್ಯರ್ಥಿಗಳಿಗೆ ಉಚಿತ ವಸತಿಯೊಂದಿಗೆ ತಿಂಗಳಿಗೆ 18000- 24000 Disha 9900019932, 9148730932

ಕನಕಪುರದ ಹತ್ತಿರ ತೋಟದಲ್ಲಿ ಹಸುಗಳನ್ನು ಮತ್ತು ತೋಟವನ್ನು ನೋಡಿಕೊಳ್ಳಲು ಕೆಲಸಗಾರರು ಬೇಕಾಗಿದ್ದಾರೆ ಸಂಪರ್ಕಿಸಿ: 8431686838

ASTRO YATRA



ಸಾಯಿದುರ್ಗಾ ಜ್ಯೋತಿಷ್ಯ ಕೇಂದ್ರ
ವಂಶಪಾರಂಪರ್ಯ ಜ್ಯೋತಿಷ್ಯರು
ಪಂ|| ಶ್ರೀರಾಮ್ ಭಟ್
ಶ್ರೀ ದುರ್ಗಾದೇವಿಯ ಉಪಾಸಕರು
ನಂ.1 ವಶೀಕರಣ ಸ್ಪೆಷಲಿಸ್ಟ್
ಇವರು ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ವಿವಾಹ, ಸತಿ–ಪತಿ ಕಲಹ, ಸಂತಾನ ಭಾಗ್ಯ, ದಾಂಪತ್ಯದಲ್ಲಿ ತೊಂದರೆ,ಅತ್ತೆ ಸೊಸೆ ಕಲಹ, ವಿದೇಶ ಪ್ರಯಾಣ, ಕೋರ್ಟ್ ಕೇಸ್, ರಾಜಕೀಯ, ಶತ್ರುಕಾಟ, ಅನಾರೋಗ್ಯ, ಸಾಲಬಾಧೆ, ಮನೆಯಲ್ಲಿ ಅಶಾಂತಿ, ಇಷ್ಟಪಟ್ಟವರು ನಿಮ್ಮಂತೆ ಆಗಲು, ಪ್ರೀತಿಯಲ್ಲಿ ನಂಬಿ ಮೋಸ, ವಾಸ್ತು ದೋಷ, ಭೂತ ಪ್ರೇತ ಬಾಧೆ, ಕುಜ ದೋಷ, ಸರ್ಪ ದೋಷ, ಧನವಶ, ಜನವಶ, ಶತ್ರುಬಾದೆ, ಮಾಟ–ಮಂತ್ರ ತಡೆ, ಇನ್ನೂ ಯಾವುದೇ ಕಠಿಣ ಗುಪ್ತ ಸಮಸ್ಯೆಗಳಿಗೆ ಕೇರಳದ ಶ್ರೀ ಭದ್ರಕಾಳಿ ಪೂಜಾ ಶಕ್ತಿಯಿಂದ ಕೇವಲ 9 ದಿನಗಳಲ್ಲಿ ಪರಿಹಾರ ಮಾಡಿಕೊಡಲಾಗುತ್ತದೆ.
ವಿಶೇಷ ಸೂಚನೆ: ಅಮಾವಾಸ್ಯೆ, ಹುಣ್ಣಿಮೆ, ಸೂರ್ಯ, ಚಂದ್ರ ಗ್ರಹಗಳ ಜಪಸಿದ್ಧಿಯಿಂದ ಸ್ತ್ರೀ–ಪುರುಷ ವಶೀಕರಣಕ್ಕೆ ಗಂಧರ್ವ ಸಂಮ್ಮೋಹಿನಿ ಕವಚವನ್ನು ಮಾಡಿಕೊಡಲಾಗುತ್ತದೆ.
ಫೋನಿನ ಮೂಲಕ ಪ್ರಶ್ನೆ, ಫೋನಿನ ಮೂಲಕ ಉತ್ತರ ಫೋನಿನ ಮೂಲಕ ಪರಿಹಾರ. ಸಂಪರ್ಕಿಸಿ: 9880403406

ಕರ್ನಾಟಕದಾದ್ಯಂತ ಶೋರೂಮ್‌ಗಳಿಗೆ ಕಂಪನಿಗಳಿಗೆ Cashier, Receptionist, Account ಕೆಲಸಕ್ಕೆ ತಕ್ಷಣ ಯುವಕ,ಯುವತಿಯರು ಬೇಕಾಗಿದ್ದಾರೆ. 20,000, 35,000. SSLC, Degree. 9916788422, 9916744622

Wanted

ತನ್ಮಯಿ ಆಯಿಲ್ ಕಂಪನಿಯಲ್ಲಿ ಪ್ಯಾಕಿಂಗ್ ಮಾಡಲು 10 ಜನ ಯುವಕ ಯುವತಿಯರು ಬೇಕಾಗಿದ್ದಾರೆ. ಸಂಬಳ 15 ರಿಂದ 18 ಸಾವಿರ ಸ್ಥಳ: ಶೇಷಾದ್ರಿಪುರಂ ಬೆಂಗಳೂರು 9019626612.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪುಟಿನ್ ಸ್ವಾಗತಿಸಿದ ಪ್ರಧಾನಿ ಮೋದಿ

ಮೊದಲ ಫ್ಲ್ಯಾಪ್ ಪುಟದಿಂದ...

ರಷ್ಯಾದಿಂದ ಯುದ್ಧ ವಿಮಾನಗಳು ಮತ್ತು ವಾಯು ರಕ್ಷಣಾ ವ್ಯವಸ್ಥೆ ಖರೀದಿ ಸಂಬಂಧ ಒಪ್ಪಂದ ಏರ್ಪಡುವ ಸಾಧ್ಯತೆಯಿದೆ.

ರಕ್ಷಣಾ ಕ್ಷೇತ್ರದಲ್ಲಿನ ಸಹಕಾರ ಹೆಚ್ಚಿಸುವುದು, ಭಾರತ-ರಷ್ಯಾ ವ್ಯಾಪಾರ ಸಂಬಂಧವನ್ನು ಬಾಹ್ಯ ಒತ್ತಡದಿಂದ ತಡೆಯುವುದು ಮತ್ತು ಸಣ್ಣ ಮಾಡ್ಯುಲರ್ ರಿಯಾಕ್ಟರ್‌ಗಳ ನಿರ್ಮಾಣದಲ್ಲಿ ಸಹಕಾರಕ್ಕೆ ಹೊಸ ಅವಕಾಶಗಳನ್ನು ಅನ್ವೇಷಿಸುವುದು ಉಭಯ ನಾಯಕರ ನಡುವಿನ ಶೃಂಗಸಭೆಯ ಕೇಂದ್ರಬಿಂದುವಾಗಿದೆ. ಮಾತುಕತೆಯ ಫಲಿತಾಂಶವನ್ನು ಪಾಶ್ಚಿಮಾತ್ಯ ದೇಶಗಳು ಕೂಡಾ ಬಹಳ ಕುತೂಹಲದಿಂದ ಎದುರು ನೋಡುತ್ತಿವೆ.

ಭಾರತ-ಅಮೆರಿಕ ಸಂಬಂಧವು ಹದಗೆಟ್ಟಿರುವ ಹಿನ್ನೆಲೆಯಲ್ಲಿ ರಷ್ಯಾ ಅಧ್ಯಕ್ಷರ ಭಾರತ ಭೇಟಿಯು ಹೆಚ್ಚಿನ ಮಹತ್ವ ಪಡೆದುಕೊಂಡಿದೆ. ಶೃಂಗಸಭೆಯ ನಂತರ, ಎರಡೂ ಕಡೆಯವರು ವ್ಯಾಪಾರ ಕ್ಷೇತ್ರ ಸೇರಿದಂತೆ ಹಲವಾರು ಒಪ್ಪಂದಗಳಿಗೆ ಸಹಿ ಹಾಕುವ ನಿರೀಕ್ಷೆಯಿದೆ.

ಪ್ರಧಾನಿ ಮೋದಿ ಅವರು ಗುರುವಾರ ರಾತ್ರಿ ಆಯೋಜಿಸಿದ ಔತಣಕೂಟದಲ್ಲಿ ಪುಟಿನ್ ಪಾಲ್ಗೊಂಡರು. ಶೃಂಗಸಭೆಯ ಆರಂಭಕ್ಕೂ ಮೊದಲು ಶುಕ್ರವಾರ ಬೆಳಿಗ್ಗೆ ರಷ್ಯಾ ಅಧ್ಯಕ್ಷರಿಗೆ ರಾಷ್ಟ್ರಪತಿ ಭವನದಲ್ಲಿ ಸ್ವಾಗತ ನೀಡಲಾಗುವುದು. ಶೃಂಗಸಭೆ ನಡೆಯಲಿರುವ ಹೈದರಾಬಾದ್ ಹೌಸ್‌ನಲ್ಲಿ ಮೋದಿ ಅವರು ಪುಟಿನ್ ಮತ್ತು ಅವರ ನಿಯೋಗಕ್ಕೆ ಭೋಜನ ಕೂಟ ಆಯೋಜಿಸಲಿದ್ದಾರೆ. ಪುಟಿನ್ ಅವರು ಬೆಳಿಗ್ಗೆ ರಾಜ್‌ಘಾಟ್‌ಗೂ ಭೇಟಿ ನೀಡುವರು ಎಂದು ಮೂಲಗಳು ತಿಳಿಸಿವೆ.

ರಷ್ಯಾ ಅಧ್ಯಕ್ಷ ಪುಟಿನ್ ಅವರ ಚಿತ್ರವನ್ನು ರಾಜಸ್ಥಾನದ ಕಲಾವಿದರೊಬ್ಬರು ಎಲೆಯಲ್ಲಿ ಮೂಡಿಸಿದ್ದರು – ಪಿಟಿಐ ಚಿತ್ರ

ಪ್ರಮುಖ ಅಂಶಗಳು

- ವಿಮಾನ ನಿಲ್ದಾಣದಲ್ಲಿ ರಷ್ಯಾ ಅಧ್ಯಕ್ಷರನ್ನು ಬರಮಾಡಿಕೊಂಡ ಪ್ರಧಾನಿ ಮೋದಿ
- ಭಾರತ–ರಷ್ಯಾ 23ನೇ ಶೃಂಗಸಭೆ ಮಾತುಕತೆ ಇಂದು
- ಪುಟಿನ್ ಶುಕ್ರವಾರ ರಾತ್ರಿ 9ಕ್ಕೆ ಭಾರತದಿಂದ ತೆರಳುವ ಸಾಧ್ಯತೆ
- ರಷ್ಯಾ ಅಧ್ಯಕ್ಷರು 2021ರಲ್ಲಿ ಕೊನೆಯದಾಗಿ ಭಾರತಕ್ಕೆ ಭೇಟಿ ನೀಡಿದ್ದರು
- ಪ್ರಧಾನಿ ಮೋದಿ ಅವರು ಕಳೆದ ವರ್ಷ ಜುಲೈನಲ್ಲಿ ದ್ವಿಪಕ್ಷೀಯ ಶೃಂಗದಲ್ಲಿ ಪಾಲ್ಗೊಳ್ಳಲು ರಷ್ಯಾಕ್ಕೆ ಭೇಟಿ ನೀಡಿದ್ದರು

> ಪುಟಿನ್ ಜತೆಗಿನ ಮಾತುಕತೆಯನ್ನು ಎದುರು ನೋಡುತ್ತಿದ್ದೇನೆ. ಭಾರತ-ರಷ್ಯಾ ಸ್ನೇಹವು ದೀರ್ಘ ಕಾಲದಿಂದಲೂ ಇದ್ದು, ಅದು ನಮಗೆ ಹೆಚ್ಚು ಪ್ರಯೋಜನ ನೀಡಿದೆ
> **ನರೇಂದ್ರ ಮೋದಿ,** ಪ್ರಧಾನಿ

> ನನ್ನ ಸ್ನೇಹಿತ ಮೋದಿ ಅವರನ್ನು ಭೇಟಿಯಾಗಲು ತುಂಬಾ ಸಂತಸವಾಗುತ್ತಿದೆ. ಭಾರತದೊಂದಿಗಿನ ನಮ್ಮ ಸಹಕಾರದ ವ್ಯಾಪ್ತಿಯು ತುಂಬಾ ದೊಡ್ಡದಾಗಿದೆ
> **ವ್ಲಾದಿಮಿರ್ ಪುಟಿನ್,** ರಷ್ಯಾ ಅಧ್ಯಕ್ಷ

ಅಡಿಕೆ ಧಾರಣೆ

ಕುಮಟಾ		ಸಾಗರ		ಶಿರಸಿ	
ಚಾಲಿ	35089-48319	ಬಿಳಿಗೋಟು	17254-36599	ಬೆಟ್ಟೆ	40096-52309
ಚಿಪ್ಪು	12369-36779	ಚಾಲಿ	32599-42509	ಬಿಳಿಗೋಟು	31109-38711
ಕೋಕ	12099-34169	ಕೋಕ	12099-35599	ಚಾಲಿ	44099-49208
ಹೊಸಚಾಲಿ	31069-37269	ಕೆಂಪುಗೋಟು	34299-42399	ಕೆಂಪುಗೋಟು	26069-36289
ಬಂಟ್ವಾಳ		ರಾಶಿ	36599-62888	ರಾಶಿ	54659-60009
ಕೋಕ	18500-27000	ಸಿಪ್ಪೆಗೋಟು	10399-23500	**ಯಲ್ಲಾಪುರ**	
ಹೊಸತು	27000-41000	**ಸಿದ್ದಾಪುರ**		ಆಪಿ	50119-73899
ಹಳತು	41000-54000	ಬಿಳಿಗೋಟು	26319-35029	ಬಿಳಿಗೋಟು	13618-34289
ಭದ್ರಾವತಿ		ಚಾಲಿ	40679-48699	ಚಾಲಿ	36009-48819
ಸಿಪ್ಪೆಗೋಟು	11000-11000	ಕೋಕ	20119-30229	ಕೋಕ	14899-29502
ಚುರು	18000-18000	ಕೆಂಪುಗೋಟು	30029-33099	ಹೊಸಚಾಲಿ	32219-37600
ಇತರೆ	20500-28500	ರಾಶಿ	47099-58899	ಕೆಂಪುಗೋಟು	13618-37016
ಪುತ್ತೂರು		ತಟ್ಟಿಬೆಟ್ಟೆ	36399-41699	ರಾಶಿ	38899-64921
ಕೋಕ	20000-35000			ತಟ್ಟಿಬೆಟ್ಟೆ	34969-53199
ಹೊಸತು	26000-41000				

ವ್ಯಾಪಾರದಲ್ಲಿ ಸಮತೋಲನ: ರಷ್ಯಾ

ನವದೆಹಲಿ (ರಾಯಿಟರ್ಸ್): ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಭಾರತಕ್ಕೆ ಭೇಟಿ ನೀಡಿರುವ ಬೆನ್ನಲ್ಲೇ, ವ್ಯಾಪಾರ ಮತ್ತು ಸಹಕಾರವನ್ನು ಮತ್ತಷ್ಟು ವೃದ್ಧಿಸಲು ಬಯಸುತ್ತಿರುವುದಾಗಿ ಉಭಯ ದೇಶಗಳು ಗುರುವಾರ ಹೇಳಿವೆ.

ಅದರಲ್ಲೂ, ಭಾರತದಿಂದ ಹೆಚ್ಚು ಸರಕುಗಳನ್ನು ಆಮದು ಮಾಡಿಕೊಳ್ಳುವ ಮೂಲಕ ಉಭಯ ದೇಶಗಳ ನಡುವಿನ ವ್ಯಾಪಾರದಲ್ಲಿ ಸಮತೋಲನ ಕಾಯ್ದುಕೊಳ್ಳಲು ಉತ್ಸುಕವಾಗಿರುವುದಾಗಿ ರಷ್ಯಾ ಹೇಳಿದೆ.

ಇಂಧನ ಹಾಗೂ ರಕ್ಷಣಾ ಸಾಮಗ್ರಿಗಳ ಮಾರಾಟವಲ್ಲದೇ, ಭಾರತದೊಂದಿಗೆ ಇತರ ಕ್ಷೇತ್ರಗಳಲ್ಲಿನ ದ್ವಿಪಕ್ಷೀಯ ಬಾಂಧವ್ಯವನ್ನು ಮತ್ತಷ್ಟು ಬಲಪಡಿಸುವುದಕ್ಕೆ ಪುಟಿನ್ ಅವರು ತಮ್ಮ ಎರಡು ದಿನಗಳ ಪ್ರವಾಸದ ವೇಳೆ ಒತ್ತು ನೀಡಲಿದ್ದಾರೆ.

ರಷ್ಯಾದಿಂದ ತೈಲ ಹಾಗೂ ಶಸ್ತ್ರಾಸ್ತ್ರಗಳನ್ನು ಖರೀದಿಸದಂತೆ ದಕ್ಷಿಣ ಏಷ್ಯಾ ರಾಷ್ಟ್ರಗಳ ಮೇಲೆ ಅಮೆರಿಕ ಒತ್ತಡ ಹೇರುತ್ತಿರುವ ನಡುವೆಯೇ, ರಷ್ಯಾ ಮತ್ತು ಭಾರತ ತಮ್ಮ ಮಧ್ಯದ ವ್ಯಾಪಾರವನ್ನು ವಿಸ್ತರಿಸಲು ಮುಂದಾಗಿರುವುದು ಗಮನಾರ್ಹ ಎನ್ನಲಾಗುತ್ತಿದೆ.

ರಫ್ತು ಹೆಚ್ಚಳಕ್ಕೆ ಕ್ರಮ–ಗೋಯೆಲ್: 'ರಷ್ಯಾಕ್ಕೆ ವಿವಿಧ ಸರಕುಗಳ ರಫ್ತು ಹೆಚ್ಚಳ ಮಾಡಲು ಭಾರತ ಬಯಸುತ್ತದೆ. ಅದರಲ್ಲೂ ಆಟೊಮೊಬೈಲ್, ಎಲೆಕ್ಟ್ರಾನಿಕ್ಸ್ ವಸ್ತುಗಳು, ಡೇಟಾ ಪ್ರೊಸೆಸಿಂಗ್ ಸಾಧನಗಳು, ಯಂತ್ರೋಪಕರಣಗಳು, ಕೈಗಾರಿಕೆಗಳಲ್ಲಿ ಬಳಸುವ ಸಲಕರಣೆಗಳು, ಜವಳಿ ಹಾಗೂ ಆಹಾರ ಉತ್ಪನ್ನಗಳ ರಫ್ತು ಹೆಚ್ಚಳಕ್ಕೆ ಒತ್ತು ನೀಡಲಾಗುವುದು' ಎಂದು ಕೇಂದ್ರ ವಾಣಿಜ್ಯ ಸಚಿವ ಪೀಯೂಷ್ ಗೋಯೆಲ್ ಹೇಳಿದ್ದಾರೆ.

ವ್ಯಾಪಾರ ₹8 ಲಕ್ಷ ಕೋಟಿಗೆ ಹೆಚ್ಚಿಸುವ ಗುರಿ

- 2030ರ ವೇಳೆಗೆ ಉಭಯ ದೇಶಗಳ ನಡುವಿನ ವ್ಯಾಪಾರ ₹8 ಲಕ್ಷ ಕೋಟಿಗೆ ಹೆಚ್ಚಿಸಲು ಭಾರತ, ರಷ್ಯಾ ಗುರಿ
- ಪ್ರಸಕ್ತ ಹಣಕಾಸು ವರ್ಷದಲ್ಲಿ ವ್ಯಾಪಾರ ₹2 ಲಕ್ಷ ಕೋಟಿ ತಲುಪಿತ್ತು. ಹಿಂದಿನ ವರ್ಷಗಳಿಗೆ ಹೋಲಿಸಿದರೆ ಈ ಅವಧಿಯಲ್ಲಿ ಕಚ್ಚಾ ತೈಲ ಆಮದಿನಲ್ಲಿ ಇಳಿಕೆ ಕಂಡುಬಂದಿದೆ. ಅಮೆರಿಕ ವಿಧಿಸಿರುವ ನಿರ್ಬಂಧವೇ ಇದಕ್ಕೆ ಕಾರಣ
- ಭಾರತದಿಂದ ಕೃಷಿ ಉತ್ಪನ್ನಗಳು, ಔಷಧಗಳು, ದೂರಸಂಪರ್ಕ ಸಾಧನಗಳು, ಐಟಿ ಸೇವೆಗಳ ಖರೀದಿಗೆ ರಷ್ಯಾಕ್ಕೆ ಆಸಕ್ತಿ

ಭಾರತ ತಂಡಕ್ಕೆ ಇಂದು ಸತ್ವಪರೀಕ್ಷೆ

ಪುರುಷರ ಜೂನಿಯರ್ ವಿಶ್ವಕಪ್ ಹಾಕಿ

• ಎಂಟರ ಘಟ್ಟದಲ್ಲಿ ಬೆಲ್ಜಿಯಂ ಸವಾಲು

ಭಾರತ ಜೂನಿಯರ್ ಹಾಕಿ ತಂಡ

ಚೆನ್ನೈ (ಪಿಟಿಐ): ಎಫ್‌ಐಎಚ್ ಪುರುಷರ ಜೂನಿಯರ್ ವಿಶ್ವಕಪ್ ಹಾಕಿ ಟೂರ್ನಿಯ ಗುಂಪು ಹಂತದಲ್ಲಿ ಎದುರಾಳಿಗಳನ್ನು ಸುಲಭವಾಗಿ ಸೋಲಿಸಿದ್ದ ಭಾರತ ತಂಡಕ್ಕೆ ನೈಜ ಸತ್ವಪರೀಕ್ಷೆ ಎದುರಾಗಿದೆ. ಆತಿಥೇಯ ತಂಡವು ಶುಕ್ರವಾರ ನಡೆಯಲಿರುವ ಕ್ವಾರ್ಟರ್‌ಫೈನಲ್‌ನಲ್ಲಿ ಪ್ರಬಲ ಬೆಲ್ಜಿಯಂ ತಂಡವನ್ನು ಎದುರಿಸಲಿದೆ.

'ಬಿ' ಗುಂಪಿನಲ್ಲಿದ್ದ ಭಾರತ, ಲೀಗ್ ಪಂದ್ಯಗಳಲ್ಲಿ ಚಿಲಿ, ಒಮಾನ್, ಸ್ವಿಟ್ಜರ್ಲೆಂಡ್ ತಂಡಗಳ ವಿರುದ್ಧ ನಿರಾಯಾಸವಾಗಿ ಜಯ ಗಳಿಸಿತ್ತು. ಈ ಮೂರು ಪಂದ್ಯಗಳಲ್ಲಿ 29 ಗೋಲುಗಳನ್ನು ಗಳಿಸಿದ್ದ ಭಾರತ ತಂಡ, ಎದುರಾಳಿಗಳಿಗೆ ಒಂದೂ ಗೋಲು ಬಿಟ್ಟುಕೊಟ್ಟಿರಲಿಲ್ಲ. ಕಣದಲ್ಲಿರುವ 24 ತಂಡಗಳಲ್ಲೇ ಇದು ಅತ್ಯುತ್ತಮ ಸಾಧನೆ ಎನಿಸಿದೆ.

ಆದರೆ ಈ ದೊಡ್ಡ ಗೆಲುವುಗಳು ಹೆಚ್ಚಿನ ಮಹತ್ವ ಪಡೆಯುವುದಿಲ್ಲ ಎಂಬುದು ಪಿ.ಆರ್.ಶ್ರೀಜೇಶ್ ಗರಡಿಯಲ್ಲಿರುವ ತಂಡಕ್ಕೆ ತಿಳಿಯದ ವಿಷಯವೇನಲ್ಲ. ಪ್ರಬಲ ತಂಡಗಳಿರುವ ನಾಕೌಟ್‌ನಲ್ಲಿ ಭಾರತ ತಂಡವು ಈಗ ನೈಜ ಪರೀಕ್ಷೆ ಎದುರಿಸಬೇಕಾಗಿದೆ.

ಆದರೆ ಭಾರತ ತಂಡಕ್ಕೆ ಮುಂದಿನ ಹಾದಿ ಸುಲಭವಲ್ಲ. ಸಣ್ಣ ಲೋಪವೂ ದುಬಾರಿಯಾಗಬಲ್ಲದು. 2016ರಲ್ಲಿ ಲಖನೌದಲ್ಲಿ ಈ ಟೂರ್ನಿಯ ಕಿರೀಟವನ್ನು ಕೊನೆಯ ಬಾರಿ ಧರಿಸಿದ್ದ ಭಾರತ 9 ವರ್ಷಗಳ ನಂತರ ತವರಿನಲ್ಲಿ ಮತ್ತೆ ಚಾಂಪಿಯನ್ ಆಗಬೇಕಾದರೆ ಮೈಯೆಲ್ಲಾ ಕಣ್ಣಾಗಿ ಆಡಬೇಕಾಗುತ್ತದೆ.

ಟೂರ್ನಿಯಲ್ಲಿ ಈವರೆಗೆ ಭಾರತ ಅಮೋಘವಾಗಿಯೇ ಆಡಿದೆ. ಗಳಿಸಿದ 29 ಗೋಲ್‌ಗಳ ಪೈಕಿ 18 ಫೀಲ್ಡ್ ಗೋಲುಗಳಾಗಿವೆ. ಒಂಬತ್ತು ಪೆನಾಲ್ಟಿ ಕಾರ್ನರ್‌ಗಳಲ್ಲಿ ಮತ್ತು ಎರಡು ಪೆನಾಲ್ಟಿ ಸ್ಟ್ರೋಕ್‌ಗಳ ಪರಿವರ್ತನೆಯಿಂದ ದಾಖಲಾಗಿವೆ.

ಚಿಲಿ ಮತ್ತು ಒಮಾನ್ ವಿರುದ್ಧ ತಂಡವು ಮನಬಂದಂತೆ ಗೋಲುಗಳನ್ನು ಗಳಿಸಿತ್ತು. ಭಾರತ ಕೊನೆಯ ಲೀಗ್ ಪಂದ್ಯದಲ್ಲಿ ಸ್ವಿಟ್ಜರ್ಲೆಂಡ್ ವಿರುದ್ಧ 5–0 ಯಿಂದ ಜಯಗಳಿಸಿದರೂ, ರಕ್ಷಣಾ ವಿಭಾಗಕ್ಕೆ ಮೊದಲ ಬಾರಿ ಪರೀಕ್ಷೆ ಎದುರಾಗಿತ್ತು. ಗೋಲ್ ಕೀಪರ್ ಪ್ರಿನ್ಸ್ ದೀಪ್ ಸಿಂಗ್ ಮತ್ತು ವಿಕ್ರಮ್‌ಜಿತ್ ಕೆಲವು ಉತ್ತಮ ತಡೆಗಳನ್ನು ಪ್ರದರ್ಶಿಸಿದ್ದರು.

ಪೆನಾಲ್ಟಿ ಕಾರ್ನರ್‌ಗಳನ್ನು ಗೋಲ್ ಆಗಿ ಪರಿವರ್ತಿಸುವಲ್ಲಿ ಸುಧಾರಣೆಗೆ ಅವಕಾಶವಿದೆ. ಕೊನೆಯ ಲೀಗ್ ಪಂದ್ಯದಲ್ಲಿ ಶಿಲಾನಂದ ಲಾಕ್ರಾ ಸುಧಾರಿತ ಆಟವಾಡಿದ್ದಾರೆ. ನಾಯಕ ರೋಹಿತ್ ಮತ್ತು ಅನ್ಮೋಲ್ ಎಕ್ಕಾ ಅವರಿಂದ ಉತ್ತಮ ಆಟ ಇನ್ನೂ ಹೊರಬಂದಿಲ್ಲ.

ದಿಲ್‌ರಾಜ್ ಸಿಂಗ್ 6 ಗೋಲುಗಳನ್ನು, ಮನ್ಮೀತ್ 5 ಗೋಲುಗಳನ್ನು, ಅರ್ಷದೀಪ್ ಸಿಂಗ್ ನಾಲ್ಕು ಗೋಲುಗಳನ್ನು ಗಳಿಸಿದ್ದಾರೆ. ರೋಸನ್ ಕುಜೂರ್, ಅದ್ರೋಯಿ ಎಕ್ಕಾ, ಅಂಕಿತ್ ಪಾಲ್ ಇರುವ ಮಿಡ್‌ಫೀಲ್ಡ್‌ನಲ್ಲೂ ಭಾರತ ಪರಿಣಾಮಕಾರಿ ಆಟ ಪ್ರದರ್ಶಿಸಿದೆ.

'ನಾವು ಸುಧಾರಿಸಬೇಕಾದ ಕ್ಷೇತ್ರಗಳಿವೆ. ಮುಂದಿನ ಪಂದ್ಯದಿಂದ ಟೂರ್ನಿಯು ನೈಜ ಆರಂಭ ಕಾಣಲಿದೆ. ಹೀಗಾಗಿ ಈ ಕ್ಷೇತ್ರಗಳಲ್ಲಿ ನಮ್ಮ ಗಮನ ಕೇಂದ್ರೀಕರಿಸಬೇಕಾದ ಅಗತ್ಯವಿದೆ' ಎನ್ನುತ್ತಾರೆ ಶ್ರೀಜೇಶ್.

'ನಾವು ಎದುರಾಳಿ ಗೋಲು ವೃತ್ತದೊಳಗೆ ನುಗ್ಗಿದ ನಂತರ ಪೆನಾಲ್ಟಿ ಕಾರ್ನರ್ ಪರಿವರ್ತನೆ, ಗೋಲಿನತ್ತ ಹೊಡೆತಗಳ ಕಡೆ ಚಿತ್ತ ಹರಿಸಬೇಕಾಗಿದೆ' ಎಂದೂ ಹೇಳಿದ್ದಾರೆ.

ಬೆಲ್ಜಿಯಂ ತಂಡವು, ಸ್ಪೇನ್ ಬಳಿಕ ಎರಡನೇ ಅತ್ಯುತ್ತಮ ರನ್ನರ್ ಅಪ್ ತಂಡವಾಗಿ ಕ್ವಾರ್ಟರ್‌ಫೈನಲ್ ತಲುಪಿದೆ. ಆದರೆ ಯುರೋಪ್‌ನ ಈ ತಂಡವನ್ನು ಭಾರತ ಲಘುವಾಗಿ ಪರಿಗಣಿಸುವಂತಿಲ್ಲ. ಬೆಲ್ಜಿಯಂ ತಂಡವು ಗುಂಪು ಹಂತದಲ್ಲಿ 11 ಫೀಲ್ಡ್ ಗೋಲು ಸೇರಿದಂತೆ 22 ಗೋಲುಗಳನ್ನು ಗಳಿಸಿದೆ. 11 ಗೋಲು ಪೆನಾಲ್ಟಿ ಕಾರ್ನರ್‌ಗಳ ಮೂಲಕ ಬಂದಿವೆ.

ಪಂದ್ಯ ಆರಂಭ: ರಾತ್ರಿ 8

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್

ಇತರ ಕ್ವಾರ್ಟರ್‌ಫೈನಲ್ ಪಂದ್ಯಗಳು

- ಸ್ಪೇನ್– ನ್ಯೂಜಿಲೆಂಡ್, ಮಧ್ಯಾಹ್ನ 12.30
- ಫ್ರಾನ್ಸ್– ಜರ್ಮನಿ, ಮಧ್ಯಾಹ್ನ 3.00
- ನೆದರ್ಲೆಂಡ್ಸ್– ಅರ್ಜೆಂಟೀನಾ, ಸಂಜೆ 5.30

ಆಸ್ಟ್ರೇಲಿಯಾ ನೆಲದಲ್ಲಿ ಕೊನೆಗೂ ಶತಕ ಬಾರಿಸಿದ ಜೋ ರೂಟ್

ಆ್ಯಷಸ್ ಸರಣಿಯ ಎರಡನೇ ಟೆಸ್ಟ್ ಪಂದ್ಯದ ಮೊದಲ ದಿನವಾದ ಗುರುವಾರ ಶತಕ ಗಳಿಸಿದ ಜೋ ರೂಟ್ ಅವರ ಸಂಭ್ರಮ... ಎಎಫ್‌ಪಿ ಚಿತ್ರ

ಬ್ರಿಸ್ಬೇನ್ (ಎಎಫ್‌ಪಿ): ಅನುಭವಿ ಬ್ಯಾಟರ್ ಜೋ ರೂಟ್ ಕೊನೆಗೂ ಆಸ್ಟ್ರೇಲಿಯಾದ ನೆಲದಲ್ಲಿ ಮೊದಲ ಟೆಸ್ಟ್ ಶತಕ ಗಳಿಸಿದರು. ಆರಂಭಿಕ ಕುಸಿತ ಕಂಡ ಇಂಗ್ಲೆಂಡ್‌ಗೆ ಆಸರೆಯಾದ ರೂಟ್, ಆ್ಯಷಸ್ ಸರಣಿಯ ಎರಡನೇ ಟೆಸ್ಟ್ ಪಂದ್ಯದಲ್ಲಿ ತಂಡ 9 ವಿಕೆಟ್‌ಗೆ 325 ರನ್‌ಗಳ ಗೌರವಾರ್ಹ ಮೊತ್ತ ತಲುಪಲು ನೆರವಾದರು.

ಆಸ್ಟ್ರೇಲಿಯಾದ ಎಡಗೈ ವೇಗಿ ಮಿಚೆಲ್ ಸ್ಟಾರ್ಕ್ (71ಕ್ಕೆ6) ಅವರೂ ಹೊನಲು ಬೆಳಕಿನ ಟೆಸ್ಟ್ ಪಂದ್ಯದ ಮೊದಲ ದಿನವಾದ ಗುರುವಾರ ಮಿಂಚಿದರು. ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲಿ ಯಶಸ್ವಿ ಎಡಗೈ ವೇಗಿ ಎನಿಸಿದರು.

ರೂಟ್ ಅಧಿಕಾರಯುತವಾಗಿ ಆಡಿ ಅಜೇಯ 135 ರನ್ (202ಎ, 4x15, 6x1) ಬಾರಿಸಿದರು. ಭರ್ಜರಿ ಹೊಡೆತಗಳನ್ನು ಆಡಿದ ಜೋಫ್ರಾ ಆರ್ಚರ್ ಅವರು ತಂಡ ಮೊದಲ ದಿನವೇ ಆಲೌಟ್ ಆಗುವುದನ್ನು ತಪ್ಪಿಸಿದರಲ್ಲದೇ, 26 ಎಸೆತಗಳಲ್ಲಿ ಅಜೇಯ 32 ರನ್ ಗಳಿಸಿ ಇಂಗ್ಲೆಂಡ್ 300ರ ಗಡಿದಾಟಲು ನೆರವಾದರು. ರೂಟ್ ಮತ್ತು ಆರ್ಚರ್ ಮುರಿಯದ ಹತ್ತನೇ ವಿಕೆಟ್‌ಗೆ 61 ರನ್ ಸೇರಿಸಿದ್ದಾರೆ. ಇದು ಗ್ಯಾಬಾದಲ್ಲಿ ಕೊನೆಯ ವಿಕೆಟ್‌ಗೆ ಇಂಗ್ಲೆಂಡ್‌ನ ದಾಖಲೆ ಜೊತೆಯಾಟವಾಯಿತು.

ಟೆಸ್ಟ್ ಮಾದರಿಯ ಅಗ್ರ ಬ್ಯಾಟರ್ ರೂಟ್, ಈ ಹಿಂದಿನ ಮೂರು ಆ್ಯಷಸ್ ಪ್ರವಾಸಗಳಲ್ಲಿ ಶತಕ ಗಳಿಸಲು ವಿಫಲರಾಗಿದ್ದರು. ಸಚಿನ್ ತೆಂಡೂಲ್ಕರ್ ನಂತರ ಟೆಸ್ಟ್ ರನ್ ಗಳಿಕೆಯಲ್ಲಿ ಎರಡನೇ ಸ್ಥಾನದಲ್ಲಿರುವ ರೂಟ್ ಈ ಬಾರಿ ಟೀಕಾಕಾರರ ಬಾಯಿ ಮುಚ್ಚಿಸಿದರು.

ಇಂಗ್ಲೆಂಡ್ 5 ರನ್ನಿಗೆ 2 ವಿಕೆಟ್ ಕಳೆದುಕೊಂಡಿತ್ತು. ಸ್ಟಾರ್ಕ್ ಬೆಂಕಿಯುಗುಳಿದ್ದರು. ಮೊದಲ ಓವರಿನಲ್ಲಿ ಬೆನ್ ಡಕೆಟ್, ಎರಡನೇ ಓವರಿನಲ್ಲಿ ಓಲಿ ಪೋಪ್ ಅವರ ವಿಕೆಟ್‌ಗಳನ್ನು ಪಡೆದಿದ್ದರು. ಈ ವೇಳೆ ಆಡಲು ಇಳಿದ 34 ವರ್ಷ ವಯಸ್ಸಿನ ರೂಟ್ ಒಂದೆಡೆ ಬೇರೂರಿದರು. ಆರಂಭ ಆಟಗಾರ ಕ್ರಾಲಿ (76) ಜೊತೆ ಮೂರನೇ ವಿಕೆಟ್‌ಗೆ 117 ರನ್ ಸೇರಿಸಿದರು. ಬೋಲ್ಯಾಂಡ್ ಬೌಲಿಂಗ್‌ನಲ್ಲಿ ಫೈನ್‌ಲೆಗ್‌ನಲ್ಲಿ ಬೌಂಡರಿ ಬಾರಿಸಿ ಟೆಸ್ಟ್ ಮಾದರಿಯಲ್ಲಿ 40ನೇ ಶತಕ ಪೂರೈಸಿದರು.

ಸ್ಟಾರ್ಕ್ ಆರು ವಿಕೆಟ್‌ಗಳೊಡನೆ ಟೆಸ್ಟ್‌ನಲ್ಲಿ 418 ವಿಕೆಟ್‌ಗಳನ್ನು ಪಡೆದಂತಾಗಿದೆ. ಅವರು ಪಾಕಿಸ್ತಾನದ ದಿಗ್ಗಜ ಬೌಲರ್ ವಾಸಿಂ ಅಕ್ರಂ (414 ವಿಕೆಟ್) ಅವರನ್ನು ಹಿಂದೆಹಾಕಿ ಟೆಸ್ಟ್ ಇತಿಹಾಸದಲ್ಲಿ ಯಶಸ್ವಿ ಎಡಗೈ ವೇಗಿ ಎನಿಸಿದರು. 'ವಾಸಿಂ ಈಗಲೂ ಮೇರು ಬೌಲರ್. ನನಗಿಂತಲೂ ಉತ್ತಮ ಬೌಲರ್' ಎಂದು ಸ್ಟಾರ್ಕ್ ಪ್ರತಿಕ್ರಿಯಿಸಿದರು.

ಸೋಮವಾರ ಹಠಾತ್ ನಿಧನರಾದ ಇಂಗ್ಲೆಂಡ್‌ನ ಬ್ಯಾಟರ್ ರಾಬಿನ್ ಸ್ಮಿತ್ ಅವರಿಗೆ ಗೌರವ ಸಲ್ಲಿಸಲು ಉಭಯ ತಂಡಗಳ ಆಟಗಾರರು ತೋಳಿಗೆ ಕಪ್ಪುಪಟ್ಟಿ ಧರಿಸಿದ್ದರು.

ಆಸ್ಟ್ರೇಲಿಯಾ ತಂಡದ ಪೂರ್ಣಾವಧಿ ನಾಯಕ ಪ್ಯಾಟ್ ಕಮಿನ್ಸ್ ಈ ಪಂದ್ಯದಲ್ಲೂ ಆಡಲಿಲ್ಲ. ಅಚ್ಚರಿ ಎಂಬಂತೆ ಆಫ್ ಸ್ಪಿನ್ನರ್ ನೇಥನ್ ಲಯನ್ ಅವರನ್ನು ತಂಡ ಕೈಬಿಟ್ಟಿತು. 14 ವರ್ಷಗಳ ನಂತರ ಮುಂಚೂಣಿ ಸ್ಪಿನ್ನರ್ ಇಲ್ಲದೇ ಕಣಕ್ಕಿಳಿಯಿತು.

ಸ್ಕೋರುಗಳು: ಮೊದಲ ಇನಿಂಗ್ಸ್: ಇಂಗ್ಲೆಂಡ್: 74 ಓವರ್‌ಗಳಲ್ಲಿ 9ಕ್ಕೆ 325 (ಝಾಕ್ ಕ್ರಾಲಿ 76, ಜೋ ರೂಟ್ ಔಟಾಗದೇ 135, ಹ್ಯಾರಿ ಬ್ರೂಕ್ 31, ಜೋಫ್ರಾ ಆರ್ಚರ್ 71ಕ್ಕೆ6) ವಿರುದ್ಧ ಆಸ್ಟ್ರೇಲಿಯಾ.

ಕೆಎಸ್‌ಸಿಎ ಚುನಾವಣೆ: ಮೇಲ್ಮನವಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ (ಕೆಎಸ್‌ಸಿಎ) ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿರುವ ಕೆ.ಎನ್.ಶಾಂತಕುಮಾರ್ ಅವರನ್ನು ಚುನಾವಣೆಯಲ್ಲಿ ಅರ್ಹ ಅಭ್ಯರ್ಥಿ ಎಂದು ಘೋಷಿಸುವಂತೆ ಆದೇಶಿಸಿದ್ದ ಏಕಸದಸ್ಯ ನ್ಯಾಯಪೀಠದ ಆದೇಶ ರದ್ದುಗೊಳಿಸಬೇಕೆಂಬ ಮೇಲ್ಮನವಿಯನ್ನು ಹೈಕೋರ್ಟ್ ವಿಭಾಗೀಯ ನ್ಯಾಯಪೀಠ ವಜಾಗೊಳಿಸಿದೆ.

ಏಕಸದಸ್ಯ ನ್ಯಾಯಪೀಠದ ಆದೇಶ ಪ್ರಶ್ನಿಸಿ ಟೀಮ್ ಗೇಮ್ ಚೇಂಜರ್ಸ್ ಬಣದ ಕಲ್ಪನಾ ವೆಂಕಟಾಚಾರ್ ಸಲ್ಲಿಸಿದ್ದ ರಿಟ್ ಮೇಲ್ಮನವಿಯನ್ನು, ಗುರುವಾರ ವಿಚಾರಣೆ ನಡೆಸಿದ, ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿತು.

ಈ ಆದೇಶದಿಂದಾಗಿ ಕೆಎಸ್‌ಸಿಎ ಚುನಾವಣೆ ನಿಗದಿತ ದಿನಾಂಕದಂತೆ ಇದೇ 7 ರಂದು ನಡೆಯಲಿದೆ.

ಕುದುರೆಗಳಿಗೆ ಸೋಂಕು; ರೇಸ್‌ಗೆ ಆತಂಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐದು ಕುದುರೆಗಳಲ್ಲಿ ವೇಗವಾಗಿ ಹರಡುವ ಸಾಂಕ್ರಾಮಿಕ ರೋಗ 'ಗ್ಲ್ಯಾಂಡರ್ಸ್' ಕಾಣಿಸಿಕೊಂಡ ಪರಿಣಾಮ ಬೆಂಗಳೂರು ಟರ್ಫ್ ಕ್ಲಬ್‌ನ ಚಳಿಗಾಲದ ರೇಸ್‌ಗಳು ರದ್ದಾಗುವ ಆತಂಕ ಎದುರಾಗಿದೆ.

ಈ ಮಧ್ಯೆ, ಶುಕ್ರವಾರದ ರೇಸ್‌ಗಳು ಆಡಳಿತಾತ್ಮಕ ಕಾರಣಗಳಿಂದ ರದ್ದಾಗಿವೆ ಎಂದು ಬಿಟಿಸಿ ಹೇಳಿಕೆ ನೀಡಿದೆ.

ಈ ಸೋಂಕು ಕಾಣಿಸಿಕೊಂಡ ಪರಿಣಾಮ ಈಗಾಗಲೇ ಹೈದರಾಬಾದ್ ಚಳಿಗಾಲದ ರೇಸ್‌ಗಳೂ ನಡೆಯುವುದು ಅನುಮಾನವಾಗಿದೆ.

ಸುಮಾರು ತಿಂಗಳ ಹಿಂದೆ ಹೈದರಾಬಾದಿನಲ್ಲಿ ಈ ಮಾರಕ ಸೋಂಕು ಕಾಣಿಸಿಕೊಂಡಿದ್ದು, 15 ಕುದುರೆಗಳು ಸಾವಿಗೀಡಾಗಿವೆ. ಕಾಯಿಲೆಯ ಭೀತಿ ಬೆಂಗಳೂರಿನಲ್ಲೂ ಅಧಿಕಾರಿಗಳಲ್ಲಿ ಕಳವಳ ಮೂಡಿಸಿದೆ.

ವಾರದ ಹಿಂದೆ ಕೆಲವು ಕುದುರೆಗಳ ತಪಾಸಣೆ ನಡೆಸಿದಾಗ ಅವುಗಳಲ್ಲಿ ಜ್ವರ, ಕಫದ ಲಕ್ಷಣಗಳು ಕಾಣಿಸಿಕೊಂಡಿದ್ದವು.

ಈ ಕುದುರೆಗಳ ಮಾದರಿಗಳನ್ನು ಪರೀಕ್ಷೆಗಾಗಿ ಹೆಬ್ಬಾಳದ ಸರ್ಕಾರಿ ಪಶುವೈದ್ಯಕೀಯ ಕಾಲೇಜಿಗೆ ಕಳುಹಿಸಲಾಗಿದೆ. ಇವುಗಳಲ್ಲಿ ಐದು ಕುದುರೆಗಳಲ್ಲಿ ಸೋಂಕು ಖಚಿತಪಟ್ಟಿದೆ ಎಂದು ಮೂಲಗಳು ತಿಳಿಸಿವೆ. ಪರೀಕ್ಷೆಗೆ ಪಡೆದ ಮಾದರಿಗಳನ್ನು ಹರಿಯಾಣದ ಹಿಸಾರ್‌ನಲ್ಲಿರುವ ರಾಷ್ಟ್ರೀಯ ಅಶ್ವ ಸಂಶೋಧನಾ ಕೇಂದ್ರಕ್ಕೆ (ಎನ್‌ಆರ್‌ಸಿಇ) ಕಳುಹಿಸುವಂತೆ ಹೆಬ್ಬಾಳದ ಆಸ್ಪತ್ರೆಯು ಸಲಹೆ ನೀಡಿದೆ. ಶುಕ್ರವಾರ ಈ ಮಾದರಿಗಳನ್ನು ಕಳುಹಿಸಲಾಗಿದೆ.

ಬಿಟಿಸಿ ಚೇರ್ಮನ್ ಎಲ್. ಶಿವಶಂಕರ್ ಅವರ ಪ್ರತಿಕ್ರಿಯೆ ಕೇಳಿದಾಗ, ಸೋಂಕು ಕಾಣಿಸಿಕೊಂಡಿರುವುದನ್ನು ಖಚಿತಪಡಿಸಲೂ ಇಲ್ಲ. ತಳ್ಳಿಹಾಕಲೂ ಇಲ್ಲ. 'ನಾವು ಈ ಬಗ್ಗೆ ತಜ್ಞರಿಂದ ಇನ್ನಷ್ಟು ಸಲಹೆ ಪಡೆಯುತ್ತೇವೆ. ಎನ್‌ಆರ್‌ಸಿಇಗೆ ಮಾದರಿ ಕಳುಹಿಸಲಾಗಿದೆ. ಫಲಿತಾಂಶ ಬಂದ ನಂತರ ಶಿಷ್ಟಾಚಾರ ಪಾಲಿಸುತ್ತೇವೆ' ಎಂದರು.

ದೆಹಲಿಗೆ ಸೋತ ಕರ್ನಾಟಕ: ಸವಾಲು ಅಂತ್ಯ

ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟಿ–20 ಕ್ರಿಕೆಟ್ ಟೂರ್ನಿ • ಮಯಂಕ್ ಬಳಗಕ್ಕೆ 3ನೇ ಸೋಲು

ಆಯುಷ್ ಬಡೋನಿ

ಅಹಮದಾಬಾದ್: ದೆಹಲಿ ತಂಡದ ಎದುರು ಗುರುವಾರ 45 ರನ್‌ಗಳ ಸೋಲನುಭವಿಸುವ ಮೂಲಕ, ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಕರ್ನಾಟಕದ ಸವಾಲು ಲೀಗ್ ಹಂತದಲ್ಲಿಯೇ ಕೊನೆಗೊಂಡಿತು.

ಈ ಹಿಂದಿನ ಪಂದ್ಯದಲ್ಲಿ ತ್ರಿಪುರ ಎದುರು ಆಘಾತಕಾರಿ ಸೋಲನುಭವಿಸಿದ್ದ ದೆಹಲಿ ತಂಡ ಈ ಮಹತ್ವದ ಪಂದ್ಯದಲ್ಲಿ ಅಮೋಘವಾಗಿ ಪುಟಿದೆದ್ದಿತು. 20 ಓವರುಗಳಲ್ಲಿ 3 ವಿಕೆಟ್‌ಗೆ 232 ರನ್‌ಗಳ ಭರ್ಜರಿ ಮೊತ್ತ ದಾಖಲಿಸಿತು. ಉತ್ತರವಾಗಿ ಕರ್ನಾಟಕ 19.3 ಓವರುಗಳಲ್ಲಿ 187 ರನ್‌ಗಳಿಗೆ ಆಲೌಟಾಯಿತು.

ಕರ್ನಾಟಕ ತಂಡವು (5 ಪಂದ್ಯಗಳಿಂದ 8 ಅಂಕ) ಈ ಸೋಲಿನಿಂದ ಏಳು ತಂಡಗಳಿರುವ ಬಿ ಗುಂಪಿನಲ್ಲಿ ನಾಲ್ಕನೇ ಸ್ಥಾನಕ್ಕೆ ಸರಿಯಿತು. ದೆಹಲಿ (5 ಪಂದ್ಯಗಳಿಂದ 12) ಮೂರನೇ ಸ್ಥಾನಕ್ಕೆ ಏರಿ ಕ್ವಾರ್ಟರ್‌ಫೈನಲ್ ಆಸೆ ಜೀವಂತವಾಗಿ ಉಳಿಸಿತು. ಆದರೆ ಅಜೇಯವಾಗಿರುವ ಜಾರ್ಖಂಡ್ ಮತ್ತು ರಾಜಸ್ಥಾನ ತಂಡಗಳು (ತಲಾ 5 ಪಂದ್ಯಗಳಿಂದ 20 ಅಂಕ) ನಾಕೌಟ್‌ಗೆ ತಲುಪುವ ನೆಚ್ಚಿನ ತಂಡಗಳೆನಿಸಿವೆ.

ಯುವ ಎಡಗೈ ಆಟಗಾರ ಪ್ರಿಯಾಂಶ್ ಆರ್ಯ 33 ಎಸೆತಗಳಲ್ಲಿ 62 ರನ್ (4x2, 6x6) ಸಿಡಿಸುವ ಮೂಲಕ ದೆಹಲಿಗೆ ಭದ್ರ ಬುನಾದಿ ಒದಗಿಸಿದರು. ಆಯುಷ್ ಬಡೋನಿ (53, 35ಎ), ತೇಜಸ್ವಿ ದಹಿಯಾ (ಅಜೇಯ 53, 19ಎ, 4x3, 6x5) ಮತ್ತು ನಿತೀಶ್ ರಾಣಾ (ಅಜೇಯ 46, 28ಎ) ಅವರು ಅದೇ ಲಯದಲ್ಲಿ ಆಡಿ ಬುನಾದಿಯ ಮೇಲೆ ಮಹಲು ಕಟ್ಟಿದರು.

ಎಡಗೈ ಸ್ಪಿನ್ನರ್ ಶುಭಾಂಗ್ ಹೆಗ್ಡೆ (31ಕ್ಕೆ2) ಮಾತ್ರ ಕರ್ನಾಟಕ ಕಡೆ ಪರಿಣಾಮಕಾರಿಯೆನಿಸಿದರು. ವೈಶಾಖ ವಿಜಯಕುಮಾರ್ (4 ಓವರುಗಳಲ್ಲಿ 61), ಶ್ರೇಯಸ್ ಗೋಪಾಲ್ (2 ಓವರುಗಳಲ್ಲಿ 31) ಸೇರಿ ಉಳಿದವರು ದುಬಾರಿಯಾದರು.

ಈ ದೊಡ್ಡ ಸವಾಲು ಬೆನ್ನಟ್ಟಿದ ಕರ್ನಾಟಕ ನಿಯಮಿತವಾಗಿ ವಿಕೆಟ್‌ಗಳನ್ನು ಕಳೆದುಕೊಂಡಿತು. ಅಗ್ರ ಆಟಗಾರರಾದ ಮಯಂಕ್ ಅಗರವಾಲ್ (9) ಮತ್ತು ಕರುಣ್ ನಾಯರ್ (2) ಅವರು ವಿಫಲರಾದರು. ದೇವದತ್ತ ಪಡಿಕ್ಕಲ್ (62, 38ಎಸೆತ) ಮತ್ತು ಸ್ಮರಣ್ ಆರ್. (72, 38ಎ) ನಾಲ್ಕನೇ ವಿಕೆಟ್‌ಗೆ 76 ರನ್ ಸೇರಿಸಿದ್ದು ಬಿಟ್ಟರೆ ಇನಿಂಗ್ಸ್‌ನಲ್ಲಿ ಹೇಳಿಕೊಳ್ಳುವಂಥದ್ದು ಏನೂ ಇರಲಿಲ್ಲ.

ಭಾರತ ತಂಡದ ಮಾಜಿ ಬೌಲರ್ ಇಶಾಂತ್ ಶರ್ಮಾ (36ಕ್ಕೆ2) ಪ್ರಮುಖ ವಿಕೆಟ್‌ಗಳನ್ನು ಪಡೆದರೆ, ಆಯುಷ್ ಬಡೋನಿ (2–0–12–4) ಮಧ್ಯಮ ಕ್ರಮಾಂಕಕ್ಕೆ ಬಲವಾದ ಪೆಟ್ಟು ನೀಡಿದರು.

ಸಂಕ್ಷಿಪ್ತ ಸ್ಕೋರು: ದೆಹಲಿ: 20 ಓವರುಗಳಲ್ಲಿ 3ಕ್ಕೆ 232 (ಪ್ರಿಯಾಂಶ್ ಆರ್ಯ 62, ಆಯುಷ್ ಬಡೋನಿ 53, ನಿತೀಶ್ ರಾಣಾ ಔಟಾಗದೇ 46, ತೇಜಸ್ವಿ ದಹಿಯಾ ಔಟಾಗದೇ 53; ಶುಭಾಂಗ್ ಹೆಗ್ಡೆ 31ಕ್ಕೆ2); ಕರ್ನಾಟಕ: 19.3 ಓವರುಗಳಲ್ಲಿ 187 (ದೇವದತ್ತ ಪಡಿಕ್ಕಲ್ 62, ಸ್ಮರಣ್ ಆರ್. 72; ಇಶಾಂತ್ ಶರ್ಮಾ 36ಕ್ಕೆ2, ಪ್ರಿನ್ಸ್ ಯಾದವ್ 27ಕ್ಕೆ2, ದಿಗ್ವೇಶ್ ರಾಥಿ 30ಕ್ಕೆ2, ಆಯುಷ್ ಬಡೋನಿ 12ಕ್ಕೆ4).

ಪಂದ್ಯದ ಆಟಗಾರ: ಆಯುಷ್ ಬಡೋನಿ.

ಪಾಂಡ್ಯ ಅಭಿಮಾನಿಗಳ ಜಮಾವಣೆ: ಪಂದ್ಯ ಸ್ಥಳಾಂತರ

ಹೈದರಾಬಾದ್ (ಪಿಟಿಐ): ಭಾರತ ಕ್ರಿಕೆಟ್ ತಂಡದ ತಾರೆ ಹಾರ್ದಿಕ್ ಪಾಂಡ್ಯ ಅವರನ್ನು ನೋಡಲು ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸಿದ್ದರಿಂದ, ಇಲ್ಲಿನ ಜಿಮ್ಖಾನ ಮೈದಾನದಲ್ಲಿ ನಡೆಯಬೇಕಿದ್ದ ಬರೋಡಾ ಮತ್ತು ಗುಜರಾತ್ ನಡುವಣ ಪಂದ್ಯವನ್ನು ಉಪ್ಪಳದ ರಾಜೀವ್‌ಗಾಂಧಿ ಅಂತರರಾಷ್ಟ್ರೀಯ ಕ್ರೀಡಾಂಗಣಕ್ಕೆ ಸ್ಥಳಾಂತರಿಸಲಾಯಿತು.

ಆಟಗಾರರು ಉಳಿದುಕೊಂಡಿದ್ದ ಹೋಟೆಲ್ ಹಾಗೂ ಮೈದಾನದ ಟಿಕೆಟ್ ಕೌಂಟರ್ ಬಳಿ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದ ಅಭಿಮಾನಿಗಳು, ಆಟಗಾರರ ನೆಟ್ ಪ್ರಾಕ್ಟೀಸ್ ವೇಳೆಯೂ ಸುತ್ತುವರಿದಿದ್ದರು. ಹೀಗಾಗಿ, ಹೆಚ್ಚು ಸುರಕ್ಷಿತವಲ್ಲದ ಜಿಮ್ಖಾನಾ ಮೈದಾನದಿಂದ ಪಂದ್ಯ ಸ್ಥಳಾಂತರಿಸುವ ನಿರ್ಧಾರ ಕೈಗೊಳ್ಳಲಾಯಿತು ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಹಾರ್ದಿಕ್ ಅವರ ಸಹೋದರ ಕೃನಾಲ್ ಪಾಂಡ್ಯ ನಾಯಕತ್ವದ ಬರೋಡಾ ತಂಡವು ಈ ಪಂದ್ಯವನ್ನು 8 ವಿಕೆಟ್‌ಗಳಿಂದ ಸುಲಭವಾಗಿ ಗೆದ್ದುಕೊಂಡಿತು.

ಮೊದಲು ಬ್ಯಾಟಿಂಗ್ ಮಾಡಿದ್ದ ಗುಜರಾತ್ ತಂಡವು ರಾಜ್ ಲಿಂಬನಿ (5ಕ್ಕೆ3) ಅವರ ಪರಿಣಾಮಕಾರಿ ಬೌಲಿಂಗ್ ಎದುರು 14.1 ಓವರ್‌ಗಳಲ್ಲಿ 73 ರನ್‌ಗಳಿಗೆ ಕುಸಿಯಿತು. ಹಾರ್ದಿಕ್ 4 ಓವರ್‌ಗಳಲ್ಲಿ 16 ರನ್ ನೀಡಿ 1 ವಿಕೆಟ್ ಪಡೆದರು. ಗುರಿ ಬೆನ್ನಟ್ಟಿದ ಬರೋಡಾ, 6.4 ಓವರ್‌ಗಳಲ್ಲಿ 2 ವಿಕೆಟ್‌ಗೆ 74 ರನ್ ಗಳಿಸಿ ಬೇಗನೇ ಗೆಲುವು ಸಾಧಿಸಿತು. ಹಾರ್ದಿಕ್ ಅವರು 10 ರನ್ ಗಳಿಸಿದರು.

ಮುಂಬೈಗೆ ಆಘಾತ ನೀಡಿದ ಕೇರಳ

ಲಖನೌ (ಪಿಟಿಐ): ವೇಗದ ಬೌಲರ್ ಕೆ.ಎಂ.ಆಸಿಫ್ ಅವರ ಐದು ವಿಕೆಟ್ ಗೊಂಚಲಿನ ನೆರವಿನಿಂದ ಕೇರಳ ತಂಡ 'ಎ' ಗುಂಪಿನ ಪಂದ್ಯದಲ್ಲಿ ಗುರುವಾರ ಹಾಲಿ ಚಾಂಪಿಯನ್ ಮುಂಬೈಗೆ 15 ರನ್‌ಗಳಿಂದ ಸೋಲುಣಿಸಿತು. ಇದು ಶಾರ್ದೂಲ್ ಠಾಕೂರ್ ಸಾರಥ್ಯದ ಮುಂಬೈಗೆ ಈ ಬಾರಿಯ ಟೂರ್ನಿಯಲ್ಲಿ ಮೊದಲ ಸೋಲು.

ಸಂಕ್ಷಿಪ್ತ ಸ್ಕೋರು: ಕೇರಳ: 20 ಓವರುಗಳಲ್ಲಿ 5ಕ್ಕೆ 178 (ಸಂಜು ಸ್ಯಾಮ್ಸನ್ 46, ವಿಷ್ಣು ವಿನೋದ್ 43, ಶಾರ್ದೂಲ್ ಠಾಕೂರ್ 34ಕ್ಕೆ1, ಶಿವಂ ದುಬೆ 18ಕ್ಕೆ1); ಮುಂಬೈ: 19.4 ಓವರುಗಳಲ್ಲಿ 163 (ಸರ್ಫರಾಜ್ ಖಾನ್ 52, ಅಜಿಂಕ್ಯ ರಹಾನೆ 32, ಸೂರ್ಯಕುಮಾರ್ ಯಾದವ್ 32; ಕೆ.ಎಂ.ಆಸಿಫ್ 24ಕ್ಕೆ5, ವಿಘ್ನೇಶ್ ಪುತ್ತೂರ್ 31ಕ್ಕೆ2).

ಜೆರುಸಲೇಂ ಮಾಸ್ಟರ್ಸ್ ಚೆಸ್ ಟೂರ್ನಿ

ಆನಂದ್ ವಿರುದ್ಧ ಗೆದ್ದ ಅರ್ಜುನ್‌ಗೆ ಪ್ರಶಸ್ತಿ

ಅರ್ಜುನ್ ಇರಿಗೇಶಿ ಸಂಭ್ರಮ 'ಎಕ್ಸ್' ಚಿತ್ರ

ಜೆರುಸಲೇಮ್ (ಪಿಟಿಐ): ಭಾರತದ ಆಟಗಾರರೇ ಇದ್ದ ಫೈನಲ್‌ನಲ್ಲಿ ಗ್ರ್ಯಾಂಡ್ ಮಾಸ್ಟರ್ ಅರ್ಜುನ್ ಇರಿಗೇಶಿ ಅವರು ದಿಗ್ಗಜ ಆಟಗಾರ ವಿಶ್ವನಾಥನ್ ಆನಂದ್ ಅವರನ್ನು ಬುಧವಾರ ಸೋಲಿಸಿ ಜೆರುಸಲೇಂ ಮಾಸ್ಟರ್ಸ್ ಚೆಸ್ ಟೂರ್ನಿಯ ಪ್ರಶಸ್ತಿ ಗೆದ್ದುಕೊಂಡರು.

ಇವರಿಬ್ಬರು ರ‍್ಯಾಪಿಡ್ ಸುತ್ತಿನ ಪಂದ್ಯಗಳನ್ನು ಡ್ರಾ ಮಾಡಿಕೊಂಡರು. ಬ್ಲಿಟ್ಜ್ ಸುತ್ತಿನಲ್ಲಿ ಅರ್ಜುನ್ ಬಿಳಿ ಕಾಯಿಗಳಲ್ಲಿ ಆಡಿದ ಮೊದಲ ಆಟ ಗೆದ್ದುಕೊಂಡರು. ನಂತರ 22 ವರ್ಷ ವಯಸ್ಸಿನ ತೆಲಂಗಾಣದ ಆಟಗಾರ ಎರಡನೇ ಆಟ ಡ್ರಾ ಮಾಡಿಕೊಂಡು ಒಟ್ಟು 2.5–1.5ರಿಂದ ಜಯಗಳಿಸಿದರು.

'ಬುಧವಾರ ಆಡಿದ ಎರಡೂ ಪಂದ್ಯಗಳು (ಪೀಟರ್ ಸ್ವಿಡ್ಲರ್ ಮತ್ತು ಆನಂದ್ ವಿರುದ್ಧ) ಕಠಿಣವಾಗಿದ್ದವು. ನಂತರ ಆನಂದ್ ಸರ್ ವಿರುದ್ಧ ರ‍್ಯಾಪಿಡ್ ಸುತ್ತಿನಲ್ಲಿ ಇಬ್ಬರಿಗೂ ಅವಕಾಶಗಳಿದ್ದವು. ಆದರೆ ಬ್ಲಿಟ್ಜ್‌ನಲ್ಲಿ ನಾನು ಚೆನ್ನಾಗಿ ಆಡಿದೆ' ಎಂದು ಅರ್ಜುನ್ ಪ್ರತಿಕ್ರಿಯಿಸಿದರು.

ಅರ್ಜುನ್ ಪ್ರಶಸ್ತಿ ಜೊತೆ ₹49.50 ಲಕ್ಷ ನಗದು ಬಹುಮಾನ ಜೇಬಿಗಿಳಿಸಿದರು. ಆನಂದ್ ಅವರು ₹31.50 ಲಕ್ಷ ಬಹುಮಾನ ಗಳಿಸಿದರು.

ಅರ್ಜುನ್ ನಾಲ್ಕರ ಹಂತದ ಪಂದ್ಯದಲ್ಲಿ ರಷ್ಯದ ಪೀಟರ್ ಸ್ವಿಡ್ಲರ್ ಅವರನ್ನು ಮಣಿಸಿದರೆ, ಆನಂದ್ ಅವರು ಇನ್ನೊಂದು ಸೆಮಿಫೈನಲ್‌ನಲ್ಲಿ ವಿಶ್ವ ಬ್ಲಿಟ್ಜ್ ಚಾಂಪಿಯನ್ ರಷ್ಯಾದ ಇಯಾನ್ ನಿಪೊಮ್‌ನಿಷಿ ಅವರನ್ನು ಸೋಲಿಸಿದರು.

ಮೂರನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಸ್ವಿಡ್ಲರ್ 2.5–1.5 ರಿಂದ ಸ್ವದೇಶದ ನಿಪೊಮ್‌ನಿಷಿ ಅವರನ್ನು ಸೋಲಿಸಿದರು.

ಈ ಟೂರ್ನಿಯು 12 ಆಟಗಾರರನ್ನು ಒಳಗೊಂಡಿದ್ದು, ರೌಂಡ್‌ರಾಬಿನ್ ಮಾದರಿಯಲ್ಲಿ ನಡೆಯುತ್ತದೆ. ಮೊದಲ ನಾಲ್ಕು ಸ್ಥಾನ ಗಳಿಸಿದವರು ಸೆಮಿಫೈನಲ್ ತಲುಪುತ್ತಾರೆ.

ಕಿರಿಯ ವಯಸ್ಸಿನಲ್ಲೇ ರೇಟಿಂಗ್: ಭಾರತದ ಸರ್ವಜ್ಞ ಸಿಂಗ್ ದಾಖಲೆ

ನವದೆಹಲಿ (ಎಎಫ್‌ಪಿ): ಚೆಸ್ ಇತಿಹಾಸದಲ್ಲೇ ಫಿಡೆ ರೇಟಿಂಗ್ ಪಡೆದ ಅತಿ ಕಿರಿಯ ಆಟಗಾರ ಎಂಬ ದಾಖಲೆಗೆ ಭಾರತದ ಸರ್ವಜ್ಞ ಸಿಂಗ್ ಕುಶ್ವಾಹ ಪಾತ್ರನಾಗಿದ್ದಾನೆ. ಈ ಬಾಲಕ 3 ವರ್ಷ, ಏಳು ತಿಂಗಳು 13 ದಿನ ವಯಸ್ಸಿನಲ್ಲಿ ರೇಟಿಂಗ್ ಪಡೆದಿದ್ದಾನೆ.

ಅನಿಶ್ ಸರ್ಕಾರ್ ಎಂಬ ಬಾಲಕನ ಹೆಸರಿನಲ್ಲಿ ಈ ಹಿಂದಿನ ದಾಖಲೆ (3 ವರ್ಷ, 8 ತಿಂಗಳು, 19 ದಿನ) ಇತ್ತು. ಅನಿಶ್, 2024ರ ನವೆಂಬರ್‌ನಲ್ಲಿ ಈ ದಾಖಲೆಗೆ ಪಾತ್ರನಾಗಿದ್ದ.

ಮಧ್ಯಪ್ರದೇಶದ ಕುಶ್ವಾಹ, ರ‍್ಯಾಪಿಡ್ ಮಾದರಿಯಲ್ಲಿ 1572ರ ರೇಟಿಂಗ್ ಪಡೆದಿದ್ದಾನೆ. ರೇಟಿಂಗ್ ಪಡೆಯಬೇಕಾದರೆ, ಕಡೇಪಕ್ಷ ಆಟಗಾರನೊಬ್ಬ ತನಗಿಂತ ಮೇಲಿನ ರೇಟಿಂಗ್ ಪಡೆದಿರುವ ಆಟಗಾರನೊಬ್ಬನನ್ನು ಸೋಲಿಸಬೇಕಾಗುತ್ತದೆ. ಕುಶ್ವಾಹ, ಈ ದಾಖಲೆಯ ಹಾದಿಯಲ್ಲಿ ಮೂರು ರೇಟೆಡ್ ಆಟಗಾರರನ್ನು ಸೋಲಿಸಿದ್ದಾನೆ.

ಅಗ್ರಸ್ಥಾನ ಹಂಚಿಕೊಂಡ ಪ್ರಜ್ಞಾನಂದ

ಪ್ರಜ್ಞಾನಂದ

ಲಂಡನ್: ಭಾರತದ ಗ್ರ್ಯಾಂಡ್‌ಮಾಸ್ಟರ್ ಪ್ರಜ್ಞಾನಂದ ಆರ್. ಅವರು ಕೊನೆಯ ಸುತ್ತಿನಲ್ಲಿ ಇಸ್ರೇಲ್‌ನ ಇಲ್ಯಾ ಸ್ಮಿರಿನ್ ಜೊತೆ ಡ್ರಾ ಮಾಡಿಕೊಂಡರು. ಆದರೆ ಅವರ ಜೊತೆಗೆ ಇತರ ಇಬ್ಬರು ಸಹ ಆಟಗಾರರಾದ 9 ಸುತ್ತುಗಳಿಂದ ತಲಾ ಏಳು ಪಾಯಿಂಟ್ಸ್ ಗಳಿಸಿದರು. ಹೀಗಾಗಿ ಮೂರೂ ಮಂದಿ ಅಗ್ರಸ್ಥಾನ ಹಂಚಿಕೊಳ್ಳಬೇಕಾಯಿತು.

ಬುಧವಾರ ಸಂಜೆ ನಡೆದ ಅಂತಿಮ ಸುತ್ತಿನಲ್ಲಿ ಅಗ್ರ ಶ್ರೇಯಾಂಕದ ಪ್ರಜ್ಞಾನಂದ 18 ನಡೆಗಳಲ್ಲಿ 2024ರ ಚಾಂಪಿಯನ್ ಸ್ಮಿರಿನ್ ಜೊತೆ ಡ್ರಾ ಮಾಡಿಕೊಂಡರು. ಎರಡನೇ ಬೋರ್ಡ್‌ನಲ್ಲಿ ಸರ್ಬಿಯಾದ ವೆಲಿಮಿರ್ ಇವಿಕ್, ಫ್ರಾನ್ಸ್‌ನ ಮ್ಯಾಥ್ಯೂ ಕಾರ್ನೆಟೆ ಅವರನ್ನು ಸೋಲಿಸಿದರು. ಇಂಗ್ಲೆಂಡ್‌ನ ಅಮಿತ್ ಕೆ.ಘಸಿ ಅವರು ಸ್ವದೇಶದ ಡೇನಿಯಲ್ ಎಚ್.ಫರ್ನಾಂಡಿಸ್ ಅವರನ್ನು ಮಣಿಸಿದರು.

ಈ ಟೂರ್ನಿಯ ನಿಯಮಗಳ ಪ್ರಕಾರ ಆಟಗಾರರು ಸಮಾನ ಪಾಯಿಂಟ್ಸ್ ಗಳಿಸಿದರೆ ಸ್ಥಾನ ನಿರ್ಧಾರಕ್ಕಾಗಿ ಟೈಬ್ರೇಕರ್ ಆಡುವುದಿಲ್ಲ. ಬದಲಾಗಿ ಅಗ್ರಸ್ಥಾನದ ಜೊತೆ ಬಹುಮಾನ ನಿಧಿಯನ್ನೂ ಹಂಚಿಕೊಳ್ಳುತ್ತಾರೆ. ಮೊದಲ ಮೂರು ಸ್ಥಾನ ಪಡೆಯುವ ಆಟಗಾರರಿಗೆ ಕ್ರಮವಾಗಿ ₹12 ಲಕ್ಷ, ₹6 ಲಕ್ಷ ಮತ್ತು ₹3.60 ಲಕ್ಷ ನಿಗದಿಪಡಿಸಲಾಗಿತ್ತು.

ಕರ್ನಾಟಕದವರಾದ ಗ್ರ್ಯಾಂಡ್‌ಮಾಸ್ಟರ್ ಪ್ರಣವ್ ಆನಂದ್ (6.5) ಅವರು ನಾಲ್ಕನೇ ಸ್ಥಾನ ಪಡೆದರು.

ಇದು ಪ್ರಜ್ಞಾನಂದ ಅವರಿಗೆ ಈ ವರ್ಷ ನಾಲ್ಕನೆಯ ಪ್ರಶಸ್ತಿಯಾಗಿದೆ. ಓಪನ್ ಟೂರ್ನಿಯಲ್ಲಿ ಮೊದಲನೆಯದು.

ಆಂಧ್ರ– ಕರ್ನಾಟಕ ಪಂದ್ಯ ಡ್ರಾನಲ್ಲಿ ಅಂತ್ಯ

ಬೆಂಗಳೂರು: ಕರ್ನಾಟಕ ತಂಡದ ಧ್ಯಾನ್ ಎಂ. ಹಿರೇಮಠ ಅವರು ಅನಂತಪುರದಲ್ಲಿ ನಡೆದ ಬಿಸಿಸಿಐ ಕೂಚ್ ಬಿಹಾರ್ ಟ್ರೋಫಿಯ ಪಂದ್ಯದಲ್ಲಿ ಒಟ್ಟು ಒಂಬತ್ತು ವಿಕೆಟ್‌ಗಳ ಗೊಂಚಲು ಪಡೆದರು. ಆಂಧ್ರ ವಿರುದ್ಧದ ಈ ಪಂದ್ಯವು ಗುರುವಾರ ಡ್ರಾನಲ್ಲಿ ಮುಕ್ತಾಯವಾಯಿತು.

ಮೊದಲ ಇನಿಂಗ್ಸ್‌ನಲ್ಲಿ 23 ರನ್‌ಗಳ ಅಲ್ಪ ಮುನ್ನಡೆ ಪಡೆದ ಆಂಧ್ರ ತಂಡವು (ಬುಧವಾರ 2 ವಿಕೆಟ್‌ಗೆ 36) 9 ವಿಕೆಟ್‌ಗೆ 179 ರನ್ ಗಳಿಸಿ ಡಿಕ್ಲೇರ್ಡ್ ಮಾಡಿಕೊಂಡಿತು. ಗೆಲುವಿಗೆ 203 ಗುರಿ ಪಡೆದ ಕರ್ನಾಟಕ ತಂಡವು ಕೆ ವಿಕೆಟ್ ನಷ್ಟವಿಲ್ಲದೆ 36 ರನ್ ಗಳಿಸಿ ಪಂದ್ಯ ಮುಗಿಸಿತು.

ಸಂಕ್ಷಿಪ್ತ ಸ್ಕೋರ್: ಆಂಧ್ರ: 415 ಮತ್ತು 83 ಓವರ್‌ಗಳಲ್ಲಿ 9 ವಿಕೆಟ್‌ಗೆ 179 ಡಿಕ್ಲೇರ್ಡ್ (ಆನಂದ್ ಜೋಸಿಯಾ 40, ಸಿದ್ದು ಕಾರ್ತಿಕ್ ರೆಡ್ಡಿ ಔಟಾಗದೇ 50, ಎನ್.ರಾಜೇಶ್ 41; ರಥನ್ ಬಿ.ಆರ್. 62ಕ್ಕೆ 2, ಧ್ಯಾನ್ ಎಂ. ಹಿರೇಮಠ); ಕರ್ನಾಟಕ: 392 ಮತ್ತು 15 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 36).

ಫಲಿತಾಂಶ: ಪಂದ್ಯ ಡ್ರಾ.

ಪ್ರಶಸ್ತಿ ಸುತ್ತಿಗೆ ಈಸ್ಟ್ ಬೆಂಗಾಲ್, ಎಫ್‌ಸಿ ಗೋವಾ

ಮಡಗಾಂವ್ (ಗೋವಾ), (ಪಿಟಿಐ): ಈಸ್ಟ್ ಬೆಂಗಾಲ್ ಎಫ್‌ಸಿ ಹಾಗೂ ಎಫ್‌ಸಿ ಗೋವಾ ತಂಡಗಳು ಎಐಎಫ್‌ಎಫ್ ಸೂಪರ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಪ್ರಶಸ್ತಿ ಸುತ್ತು ಪ್ರವೇಶಿಸಿದವು.

ಗುರುವಾರ ನಡೆದ ಸೆಮಿಫೈನಲ್ ಪಂದ್ಯಗಳಲ್ಲಿ ಈಸ್ಟ್ ಬೆಂಗಾಲ್ ತಂಡವು 3–1ರಿಂದ ಪಂಜಾಬ್ ಎಫ್‌ಸಿ ತಂಡವನ್ನು ಮಣಿಸಿದರೆ, ಹಾಲಿ ಚಾಂಪಿಯನ್ ಗೋವಾ ತಂಡವು 2–1ರಿಂದ ಮುಂಬೈ ಸಿಟಿ ಎಫ್‌ಸಿ ವಿರುದ್ಧ ರೋಚಕ ಜಯ ಸಾಧಿಸಿತು

ರಾಷ್ಟ್ರೀಯ ಟೆನಿಸ್: ಸೆಮಿಗೆ ತನುಷ್, ಕಾಶ್ವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಗ್ರ ಶ್ರೇಯಾಂಕದ ತನುಷ್ ಶೇಖರ್ ಅವರು ಎಐಟಿಎ 12 ವರ್ಷದೊಳಗಿನವರ ರಾಷ್ಟ್ರೀಯ ಸರಣಿಯ ಟೆನಿಸ್ ಟೂರ್ನಿಯಲ್ಲಿ ಗುರುವಾರ ಸೆಮಿಫೈನಲ್ ಪ್ರವೇಶಿಸಿದರು.

ಕನ್ನಡಿಗ ತನುಷ್, ಬಾಲಕರ ವಿಭಾಗದ ಎಂಟರ ಘಟ್ಟದ ಪಂದ್ಯದಲ್ಲಿ 6–1, 6–4ರಿಂದ ಮಹಾರಾಷ್ಟ್ರದ ಆದ್ವಿಕ್ ಖನ್ನಾ ವಿರುದ್ಧ ನೇರ ಸೆಟ್‌ಗಳಲ್ಲಿ ಗೆಲುವು ಸಾಧಿಸಿದರು. ಎರಡನೇ ಶ್ರೇಯಾಂಕದ ಗುಜರಾತ್‌ನ ಆಟಗಾರ ರಿಯಾನ್ ನಂದಕುಮಾರ್ 7–5, 7–5ರಿಂದ ಉತ್ತರ ಪ್ರದೇಶದ ಆರಿವ್ ಗುಪ್ತಾ ಅವರನ್ನು ಮಣಿಸಿದರು.

ಬಾಲಕಿಯರ ವಿಭಾಗದಲ್ಲಿ, ಅಗ್ರ ಶ್ರೇಯಾಂಕದ ಕರ್ನಾಟಕದ ಆಟಗಾರ್ತಿ ಅನೀಷಾ ಮರಿಯಂ ಕಾರ್ನೆಲಿಯೊ ಅವರು 6–2, 6–3ರಿಂದ ನಿಷ್ಕಾ ಮಲ್ಲಿಕ್ ಅವರನ್ನು ಮಣಿಸಿ ಸೆಮಿಫೈನಲ್ ಪ್ರವೇಶಿಸಿದರು.

ಎರಡನೇ ಶ್ರೇಯಾಂಕದ ಅನೀಕ್ಷಾ ಜಿ. (ತೆಲಂಗಾಣ) ಅವರು 12ನೇ ಶ್ರೇಯಾಂಕದ ಆದ್ಯಾ ಸಿಂಗ್ ವಿರುದ್ಧ ಒಂದೂ ಪಾಯಿಂಟ್ಸ್ ಬಿಟ್ಟುಕೊಡದೆ (6–0, 6–0) ನಿರಾಯಾಸ ಜಯ ದಾಖಲಿಸಿದರು. ಕರ್ನಾಟಕದ ಕಾಶ್ವಿ ವಿ.ಕೋಣಂಕಿ ಅವರೂ ನಾಲ್ಕರ ಘಟ್ಟ ಪ್ರವೇಶಿಸಿದರು.

ಕ್ವಾರ್ಟರ್‌ಫೈನಲ್ ಫಲಿತಾಂಶಗಳು: ಬಾಲಕರು: ತನುಷ್ ಶೇಖರ್ (ಕರ್ನಾಟಕ) 6-1, 6-4ರಿಂದ ಆದ್ವಿಕ್ ಖನ್ನಾ (ಮಹಾರಾಷ್ಟ್ರ) ವಿರುದ್ಧ; ಆದಿಶ್ ಪಿ.ಎಂ. (ತಮಿಳುನಾಡು) 6-1, 7-5ರಿಂದ ಆರುಧ್ ಖನ್ನಾ (ಮಹಾರಾಷ್ಟ್ರ) ವಿರುದ್ಧ; ಧನುಷ್ ಎಸ್. ಎಂ. (ಕರ್ನಾಟಕ) 6-3, 7-6(4)ರಿಂದ ಸ್ಯಾಂಟೊ ಬಾಬು ವಿರುದ್ಧ ಹಾಗೂ ರಿಯಾನ್ ನಂದಕುಮಾರ್ (ಗುಜರಾತ್) 7-5, 7-5ರಿಂದ ಆರಿವ್ ಗುಪ್ತಾ (ಉತ್ತರ ಪ್ರದೇಶ) ವಿರುದ್ಧ ಜಯ ಗಳಿಸಿದರು.

ಬಾಲಕಿಯರು: ಅನೀಷಾ ಮರಿಯಂ ಕಾರ್ನೆಲಿಯೊ (ಕರ್ನಾಟಕ) 6–2, 6–3ರಿಂದ ನಿಷ್ಕಾ ಮಲ್ಲಿಕ್ (ಕರ್ನಾಟಕ) ವಿರುದ್ಧ; ರೂಹಿ ಸಿಂಗ್ (ಕರ್ನಾಟಕ) 6-2, 6-3ರಿಂದ ತ್ಯಾಕ್ಷಿ ಲಾಥೆರ್ (ದೆಹಲಿ) ವಿರುದ್ಧ; ಕಾಶ್ವಿ ವಿ. ಕೋಣಂಕಿ 6-1, 6-3ರಿಂದ ಪ್ರಿಶಾ ವಿ. ಲಿಂಗಾ (ಮಹಾರಾಷ್ಟ್ರ) ವಿರುದ್ಧ ಹಾಗೂ ಅನೀಕ್ಷಾ ಜಿ. (ತೆಲಂಗಾಣ) 6–0, 6–0ಯಿಂದ ಆದ್ಯಾ ಸಿಂಗ್ (ಕರ್ನಾಟಕ) ವಿರುದ್ಧ ಗೆಲುವು ಸಾಧಿಸಿದರು.

ಗುವಾಹಟಿ ಮಾಸ್ಟರ್ಸ್ ಸೂಪರ್ 100 ಬ್ಯಾಡ್ಮಿಂಟನ್: ಮುಂದುವರಿದ ಭಾರತದ ಪಾರಮ್ಯ

ಅರಿನ್‌ಗೆ ತಾನ್ಯಾ ಹೇಮಂತ್ ಆಘಾತ

ತಾನ್ಯಾ ಹೇಮಂತ್

ಗುವಾಹಟಿ (ಪಿಟಿಐ): ಭಾರತದ ಶಟ್ಲರ್‌ಗಳು ಗುವಾಹಟಿ ಮಾಸ್ಟರ್ಸ್ ಸೂಪರ್ 100 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಮೂರನೇ ದಿನವಾದ ಗುರುವಾರವೂ ಪಾರಮ್ಯ ಮುಂದುವರಿಸಿದರು. ಶ್ರೇಯಾಂಕರಹಿತ ಆಟಗಾರ್ತಿ ತಾನ್ಯಾ ಹೇಮಂತ್ ಅವರು ಅಗ್ರ ಶ್ರೇಯಾಂಕದ ನೆಸ್ಲಿಹಾನ್ ಅರಿನ್ ಅವರಿಗೆ ಆಘಾತ ನೀಡಿ, ಮಹಿಳೆಯರ ಸಿಂಗಲ್ಸ್ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ವಿಶ್ವ ಕ್ರಮಾಂಕದಲ್ಲಿ 72ನೇ ಸ್ಥಾನದಲ್ಲಿರುವ ತಾನ್ಯಾ 23-25, 22–20, 21–19 ರಿಂದ ಟರ್ಕಿಯ ಅರಿನ್ ಅವರನ್ನು ಹಿಮ್ಮೆಟ್ಟಿಸಿದರು. ಕರ್ನಾಟಕದ ತಾನ್ಯಾ ಮುಂದಿನ ಸುತ್ತಿನಲ್ಲಿ ಸ್ವದೇಶದ ತನ್ವಿ ಶರ್ಮಾ ಅವರನ್ನು ಎದುರಿಸಲಿದ್ದಾರೆ.

ಎಂಟನೇ ಶ್ರೇಯಾಂಕದ ತನ್ವಿ ಇನ್ನೊಂದು ಪ್ರಿ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ 21-17, 23-21ರಲ್ಲಿ ನೇರ ಗೇಮ್‌ಗಳಿಂದ ಥಾಯ್ಲೆಂಡ್‌ನ ಪಾಸಾರ್ಓರ್ನ್ ಫನ್ನಾಚೆಟ್ ಅವರನ್ನು ಸೋಲಿಸಿದರು.

ಭಾರತದ ಆಟಗಾರ್ತಿಯರ ವ್ಯವಹಾರವಾಗಿದ್ದ 16ರ ಸುತ್ತಿನ ಪಂದ್ಯಗಳಲ್ಲಿ 96ನೇ ಕ್ರಮಾಂಕದ ಅಸ್ಮಿತಾ ಚಾಲಿಹಾ 16-21, 21-17, 21-16 ರಿಂದ ಐದನೇ ಶ್ರೇಯಾಂಕದ ಅನ್ಮೋಲ್ ಖರ್ಬ್ ಅವರನ್ನು ಹಿಮ್ಮೆಟ್ಟಿಸಿದರೆ, ಇಶಾರಾಣಿ ಬರುವಾ 21-13, 10-21, 21-12ರಿಂದ ಶ್ರೇಯಾ ಲೆಲೆ ಅವರನ್ನು ಸೋಲಿಸಿದರು.

ಅನುಪಮಾ ಉಪಾಧ್ಯಾಯ 15-21, 15-21 ರಲ್ಲಿ ಇಂಡೊನೇಷ್ಯಾದ ಚಿಯಾರಾ ಮಾರ್ವೆಲ್ಲಾ ಹ್ಯಾಂಡೊಯೊ ಎದುರು ಸೋಲನುಭವಿಸಿದರು.

ಪುರುಷರ ಸಿಂಗಲ್ಸ್‌ನಲ್ಲಿ ಅಗ್ರ ಶ್ರೇಯಾಂಕದ ತರುಣ್ ಮನ್ನೆಪಲ್ಲಿ 21-13, 21-16ರಿಂದ ಸ್ವದೇಶದ ಮೆಯಿರಾಬಾ ಲುವಾಂಗ್ ಮೈಸನಮ್ ಅವರನ್ನು ಸೋಲಿಸಿ ಎಂಟರ ಘಟ್ಟ ಪ್ರವೇಶಿಸಿದರು. ಕನ್ನಡಿಗ ತುಷಾರ್ ಸುವೀರ್ 21-17, 18-21, 21-15ರಿಂದ ಇಂಡೊನೇಷ್ಯಾದ ಬಿಸ್ಮೊ ರಾಯಾ ಒಕ್ಟೋರಾ ವಿರುದ್ಧ ಜಯ ಸಾಧಿಸಿದರು.

ಆದರೆ, ಭಾರತದ ಆರ್ಯಮನ್ ಟಂಡನ್ 21-15, 16-21, 13-21ರಿಂದ ಇಂಡೊನೇಷ್ಯಾದ ಡೆಂಡಿ ಟ್ರಿಯಾನ್ಸ್ಯಾ ವಿರುದ್ಧ ಸೋತರು. ಭಾರತದ ಮತ್ತೊಬ್ಬ ಸ್ಪರ್ಧಿ ಗಿನ್ಪಾಲ್ ಸೊನ್ನಾ 16-21, 15-21ರಿಂದ ಎರಡನೇ ಶ್ರೇಯಾಂಕದ ಯುದೈ ಒಕಿಮೊಟೊ (ಜಪಾನ್) ಅವರಿಗೆ ಮಣಿದರು.

TATA MOTORS
PASSENGER VEHICLES

TATA

TATA MOTORS GOOD-BUY 2025

ಅನುಪಮ ಫೀಚರ್ಸ್ ಮತ್ತು ಅತ್ಯಾಕರ್ಷಕ ಡೀಲ್ಸ್‌ನಿಂದ ಸುಸಜ್ಜಿತ.

ಅತ್ಯಮೋಘ ಇಯರ್ ಎಂಡ್ ಆಫರ್ಸ್ ಮತ್ತು ವಿಸ್ತಾರಿತ GST ಪ್ರಯೋಜನಗಳು, ₹1 15 000## ದವರೆಗೆ. ನಿಮ್ಮ ಸಮೀಪದ ಡೀಲರ್‌ಶಿಪ್‌ಗೆ ಈಗಲೇ ಭೇಟಿಕೊಡಿ.

TIAGO Price starts at ₹4.57 Lakh^^

GST price reduction ₹0.63 L@ | Incredible Good-buy benefits ₹0.40 L##

Low EMI starting ₹4.999

- India's First & Only CNG Hatchback with Auto Transmission¤
- 26.03cm Touchscreen Infotainment - First & Largest in Segment
- HD Reverse Parking Camera
- Wireless Apple Carplay & Android Auto
- LED Headlamps
- R15 Dual Tone Alloy Wheels
- Cruise Control◊

ALTROZ Price starts at ₹6.30 Lakh^^

GST price reduction ₹0.85 L@ | Incredible Good-buy benefits ₹0.30 L##

Low EMI starting ₹6 777

- India's only hatchback offering widest fuel & transmission choices.
- Ultraview Twin-Screen 26.03cm Infotainment by Harman + 26.03cm Digital Instrument Cluster.
- India's safest hatchback, and safest CNG, diesel car with 5-star BNCAP rating.
- 360 degree HD Surround View System with Blindview monitor
- Voice Assisted Electric Sunroof
- 6 Airbags ESP, ISOFIX as standard
- e-Call, b-Call: Emergency & Breakdown Assistance
- 1st in Segment Infinity connected Tail Lamp & Flush-Door Handles**

GOOD-BUY 2025 BENEFITS. LIMITED PERIOD. HURRY

Persona	GST Price Reduction@	Good-buy 2025 Benefits##	Total Benefits ##
Tiago XM	₹0.49 L	₹0.40 L	₹0.89 L
Tiago XT	₹0.54 L	₹0.40 L	₹0.94 L
Tiago XZ	₹0.59 L	₹0.40 L	₹0.99 L
Tiago XZ+	₹0.63 L	₹0.40 L	₹1.03 L

Persona	GST Price Reduction@	Good-buy 2025 Benefits##	Total Benefits ##
Altroz Smart	₹0.59 L	₹0.30 L	₹0.89 L
Altroz Pure	₹0.65 L	₹0.30 L	₹0.95 L
Altroz Creative	₹0.74 L	₹0.30 L	₹1.04 L
Altroz Accomplished S	₹0.85 L	₹0.30 L	₹1.15 L

iCNG

Also Available in Twin Cylinder CNG Technology

Available in Petrol, Diesel, CNG & EV*

Easy upgrade with lowest EMIs⁻

book TATA Tiago & Altroz

TATA MOTORS SAFETY DOME 360° PROTECTION

BHARAT NCAP

KHT MOTORS
Whitefield: 7506023988;
Domlur: 7506024006,
Kolar: 9731149668

KROPEX AUTO
Hosur Road: 7506024016,
Koramangala: 9167395364,
Sarjapur road: 8291202713,
Mahadevapura: 8291052641

PRERANA MOTORS
Lalbagh Road: 7506024020;
BTM Layout: 7506024118;
Rajajinagar: 7506024039;
Yelahanka: 9619489334

ADISHAKTI CARS
Hebbal: 7506023837;
Dasarahalli: 9167982568;
Kalyana Nagar: 9167163087

BELLAD ENTERPRISES PVT LTD
Bommsandra
8238883535, 9035354160;
Sarajpura: 8879932503

CAUVERY MOTORS:
Avalahalli: 8879156068;
Mekhri Circle: 8422849049;
Devanahalli: 8879078454

KEY MOTORS
JP Nagar Kanakapura Road: 7506023980,
Mysore Road: 9167395034, Kanakapura City: 8879145649,
BG Road: 9167395164, Nelamangala: 9167881890,
Sunkadakatte Magadi Road: 9167882027

SREE AUTO
Tumkur: 7506024318,Tiptur: 9619050469,
Chitradurga: 9619033465, Kunigal: 8879046819,
Chikkaballapur: 9167082428, Chintamani: 8291927028

Images and illustrations are indicative and for information purposes only. All features/specifications/colors are not available in all variants and may vary for different variants and are subject to change without prior information. Colours may vary due to printing limitations. ##The benefits mentioned are of particular model and variant. Benefits will vary depending on the model and variant selected. For exact details, please contact your nearest authorized TATA Motors dealership. Additional benefits include consumer offer, exchange offer, loyalty, intervention consumer, intervention exchange. ⁻Finance at the sole discretion of Financer. The EMI figures shown above are based on specific loan amount along with Ballon scheme options (25% or 30%) and 84 month repayment period. Actual EMI amounts may vary based on loan amount and total on road price. Schemes on Altroz & Tiago may vary. ^^Altroz price mentioned is Smart MT, ex showroom Delhi. Altroz is 5 star bncap rated hatchback as per 2025 test. Altroz is the only hatchback to get 5 star rating across powertrain of Petrol, Diesel and CNG. As per Bharat Ncap results 2025. **First in segment refers to mid and high hatchback cars in India. *Available in Premium Hatchback Segment. ^^Tiago price mentioned is Tiago XE MT Petrol, ex-showroom New Delhi, Local Taxes extra. GNCAP and BNCAP rating is not valid for Tiago. Tiago is available in Petrol, CNG & EV. ¤Auto transmission is Auto gearbox available in Tiago XTA CNG, XZA CNG and XZA NRG CNG. ◊Cruise Control only available in Tiago XZ+. @Old ESP & New ESP refers to prices before and after GST 2.0 change. 100% GST Benefits have been passed on in the New Prices. Terms and conditions apply.